ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 25 ಭಾನುವಾರ 2022

ಸಂಪುಟ: 43 | ಸಂಚಿಕೆ: 248 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮನೆಗೆ ಮುತ್ತಿಗೆ ಯತ್ನ

ಬಿಜೆಪಿ ಯುವ ಮೋರ್ಚಾ ವರ್ತನೆಗೆ ನಗರ ಕಾಂಗ್ರೆಸ್ ತೀವ್ರ ಖಂಡನೆ

ಮೈಸೂರು, ಡಿ.24(ಪಿಎಂ)– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ವಕ್ತಾರ ಎಂ.ಲಕ್ಷ್ಮಣ್ ಅವರ ಮನೆಗೆ ಬಿಜೆಪಿ ನಗರ ಯುವ ಮೋರ್ಚಾ ಕಾರ್ಯಕರ್ತರು ಮುತ್ತಿಗೆ ಹಾಕಲು ಯತ್ನಿಸಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ವರ್ತನೆ ಎಂದು ಮೈಸೂರು ನಗರ ಕಾಂಗ್ರೆಸ್ ಸಮಿತಿ ತೀವ್ರವಾಗಿ ಖಂಡಿಸಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ, ವಿರೋಧ ವ್ಯಕ್ತಪಡಿಸುವುದು ಹಾಗೂ ವಿರೋಧ ಸಂಬಂಧ ಹೇಳಿಕೆ ನೀಡುವುದು, ಆರೋಪ–ಪ್ರತ್ಯಾರೋಪ ಸಹಜ. ಅದನ್ನು ಬಿಟ್ಟು ಮನೆಗೆ ಮುತ್ತಿಗೆ ಹಾಕುವುದು ನಾಚಿಕೆಗೇಡು. ಇದೇನಾ ನಿಮ್ಮ ಬಿಜೆಪಿ ಸಂಸ್ಕೃತಿ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಆಡಳಿತ ಪಕ್ಷದ ವೈಫಲ್ಯದ ಬಗ್ಗೆ ಮಾತನಾಡುವುದು ವಿರೋಧ ಪಕ್ಷದ ಕರ್ತವ್ಯ. ಲಕ್ಷ್ಮಣ್ ನಮ್ಮ ಪಕ್ಷದ ಪ್ರತಿನಿಧಿಯಾಗಿ ಅವರ ಕೆಲಸ ಮಾಡುತ್ತಿದ್ದಾರೆ. ದಾಖಲಾತಿ ಇಲ್ಲದೇ ಅವರು ಮಾತನಾಡುವುದಿಲ್ಲ. ವಿರೋಧ ಪಕ್ಷದ ಪ್ರತಿನಿಧಿಯಾಗಿ ಟೀಕೆ ಮಾಡುವುದೇ ತಪ್ಪೇ, ಅವರ ಹೇಳಿಕೆಗೆ ನೀವು ಪ್ರತಿ ಹೇಳಿಕೆ ನೀಡಿ. ಅದನ್ನು ಬಿಟ್ಟು ಮನೆಗೆ ಮುತ್ತಿಗೆ ಹಾಕುವಂತಹ ಕೆಟ್ಟ ಸಂಪ್ರದಾಯ ಹುಟ್ಟು ಹಾಕಬೇಡಿ ಎಂದು ಕಿಡಿಕಾರಿದರು.

ಕಳೆದ ವಾರ ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ ಸುದ್ದಿಗೋಷ್ಠಿ ನಡೆಸಿ, ತಮ್ಮ ಹೆಸರಿನಲ್ಲಿ ರೌಡಿಶೀಟ್ ತೆರೆದಿರುವುದನ್ನು ಸಾಬೀತುಪಡಿಸುವಂತೆ ಲಕ್ಷ್ಮಣ್ ಅವರಿಗೆ ಸವಾಲು ಹಾಕಿದ್ದರು. ಇಲ್ಲವಾದರೆ ಮಾನನಷ್ಟ ಮೊಕದ್ದಮೆ ದಾಖಲಿಸುವುದಾಗಿ ಹೇಳಿದ್ದರು. ಅದರಂತೆ ಅವರು ಮುಂದುವರೆಯಲಿ, ಅದನ್ನು ಎದುರಿಸಲು ಲಕ್ಷ್ಮಣ್ ಮತ್ತು ಕಾಂಗ್ರೆಸ್ ಸಿದ್ಧವಾಗಿದೆ. ಅದರ ಹೊರತಾಗಿ ಮನೆಗೆ ಮುತ್ತಿಗೆ ಹಾಕುವ ಬೆದರಿಕೆಗೆ ಕಾಂಗ್ರೆಸ್ ಜಗ್ಗುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಶಾಲೆಗಳ ಮಾನ್ಯತೆ ನವೀಕರಣಕ್ಕೆ ಡಿ.31 ಕೊನೆ

ಮೈಸೂರು,ಡಿ.24– ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರದಿಂದ ಅನುಮತಿ ಪಡೆದು ನಡೆಯುತ್ತಿರುವ ಅನುದಾನಿತ, ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆಗಳ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆ ಸಲ್ಲಿಸಲು ಡಿ.31 ರಂದು ಕಡೆಯ ದಿನವಾಗಿರುತ್ತದೆ.

ಇಲಾಖೆಯು ಸೃಜಿಸಿರುವ ತಂತ್ರಾಂಶದ ಮೂಲಕ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಮಾನ್ಯತೆ ನವೀಕರಿಸಿಕೊಳ್ಳಲು ಈಗಾಗಲೇ ಹಲವು ಬಾರಿ ತಿಳಿಸಲಾಗಿದ್ದು, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ದಿನಾಂಕವನ್ನೂ ಮುಂದೂಡಲಾಗಿತ್ತು. ಆದರೂ ಹಲವಾರು ಆಡಳಿತ ಮಂಡಳಿಗಳು ನಿಗದಿತ ಸಮಯದೊಳಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಹಿಂದಿರುಗಿಸಲಾದ ಅಪೂರ್ಣ ಪ್ರಸ್ತಾವನೆಗಳನ್ನು ಸರಿಪಡಿಸಿ ನಿಗದಿತ ಅವಧಿಯಲ್ಲಿ ಮರುಸಲ್ಲಿಸಲು ಮತ್ತು ಈಗಾಗಲೇ ತಿರಸ್ಕೃತಗೊಂಡಿರುವ ಪ್ರಕರಣಗಳಲ್ಲಿ ಸಂಸ್ಕರಣ ಶುಲ್ಕದೊಂದಿಗೆ ಪ್ರಸ್ತಾವನೆಯನ್ನು ಮರು ಸಲ್ಲಿಸಲು ಹಾಗೂ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆಯಲು ಆಡಳಿತ ಮಂಡಳಿಗಳಿಗೆ ತಿಳಿಸಲಾಗಿದೆ.

ಎಷ್ಟು ಬೇಕೋ ಅಷ್ಟು ಸಾಲ ಮಾಡಿ, ಕುಮಾರಣ್ಣ ಮನ್ನಾ ಮಾಡ್ತಾರೆ!




ಶಾಸಕಿ ಅನಿತಾ ಕುಮಾರಸ್ವಾಮಿ ಜನರಿಗೆ ಅಭಯ

ರಾಮನಗರ, ಡಿ.24– ಸ್ತ್ರೀ ಶಕ್ತಿ ಯೋಜನೆ ಅಡಿ ಸಾಲ ಪಡೆದು ಮರು ಪಾವತಿಸಬೇಡಿ. ನನ್ನ ಪತಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಅಧಿಕಾರಕ್ಕೆ ಬಂದ 24 ಗಂಟೆ ಒಳಗಾಗಿ ಸಾಲ ಮನ್ನಾ ಮಾಡುತ್ತಾರೆ ಎಂದು ರಾಮನಗರದ ಜೆಡಿಎಸ್ ಶಾಸಕಿ ಅನಿತಾ ಕುಮಾರಸ್ವಾಮಿ ಹೇಳಿರುವ ವಿಡಿಯೋ ವೈರಲ್ ಆಗುತ್ತಿದೆ. ರಾಮನಗರದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕುಮಾರಸ್ವಾಮಿ ಅವರು ಈಗಾಗಲೇ ಸ್ತ್ರೀ ಶಕ್ತಿ ಯೋಜನೆ ಅಡಿಯಲ್ಲಿ ಪಡೆದ ಸಾಲಗಳನ್ನು ಮನ್ನಾ ಮಾಡುತ್ತೇನೆ ಎಂದು ಘೋಷಿಸಿದ್ದಾರೆ. ಹೀಗಾಗಿ ಸಾಕಷ್ಟು ಸಾಲ ಪಡೆಯಿರಿ ಆದರೆ ಯಾರು ಕೂಡ ಮರು ಪಾವತಿಸಬೇಡಿ ಕುಮಾರಸ್ವಾಮಿಯವರು ಮನ್ನಾ ಮಾಡುತ್ತಾರೆ ಎಂದಿದ್ದಾರೆ. ಸದ್ಯ ವಿಡಿಯೋ ಸಾಕಷ್ಟು ವೈರಲ್ ಆಗುತ್ತಿದೆ. ಇದಕ್ಕೆ ಸಾಮಾಜಿಕ ಜಾಲತಾಣದಲ್ಲಿ ವ್ಯಂಗ್ಯವಾಗಿ ಕಾಮೆಂಟ್‌ಗಳು ಬರುತ್ತಿವೆ.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣಕ್ಕೆ ಮಂಡ್ಯ ಎಂಎಲ್‌ಸಿಗಳ ಆಗ್ರಹ

ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ








ದಿನೇಶ್ ಗೂಳಿಗೌಡ



ಮಧು ಮಾದೇಗೌಡ

ಮಂಡ್ಯ, ಡಿ.24–ರಾಜ್ಯದ ಅಭಿವೃದ್ಧಿ ಹರಿಕಾರರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ನಾಮಕರಣ ಮಾಡಬೇಕೆಂದು ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಮತ್ತು ಮಧು ಜಿ.ಮಾದೇಗೌಡ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಇಬ್ಬರೂ ಎಂಎಲ್‌ಸಿಗಳು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ರೇಷ್ಮೆ, ಯುವಜನ ಸೇವಾ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರಿಗೂ ಮನವಿ ಸಲ್ಲಿಸಿದ್ದಲ್ಲದೇ, ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಈ ಸಂಬಂಧ ಮನವಿ ಪತ್ರರವಾನಿಸಿದ್ದಾರೆ.



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ತಮ್ಮ ಆಡಳಿತಾವಧಿಯಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ನಾಡಿಗೆ ನೀಡಿದ್ದಾರೆ. ಮಂಡ್ಯ ಭಾಗದ ರೈತರ ಜೀವನಾಡಿ ಕನ್ನಂಬಾಡಿ ಕಟ್ಟೆಯನ್ನು ನಿರ್ಮಿಸಿದ ಅವರು, ಡ್ಯಾಂ ನಿರ್ಮಾಣಕ್ಕೆ ಆರ್ಥಿಕ ಮುಗ್ಗಟ್ಟು ಎದುರಾದಾಗ ತಮ್ಮ ಕುಟುಂಬದ ಬಂಗಾರವನ್ನೇ ಮಾರಾಟ ಮಾಡಿದ್ದರು. ಕಬ್ಬು ಬೆಳೆಗಾರರಿಗೆ ಅನುಕೂಲವಾಗುವಂತೆ ಮೈಷುಗರ್ ಕಾರ್ಖಾನೆಯನ್ನು ಸ್ಥಾಪಿಸಿದರು. ಮೈಸೂರಿನಲ್ಲಿ ಕೆ.ಆರ್.ಆಸ್ಪತ್ರೆ ನಿರ್ಮಿಸುವ ಮೂಲಕ ಬಡ ಜನರಿಗೆ ಉಚಿತ ಆರೋಗ್ಯ ಸೇವೆ ಕಲ್ಪಿಸಿದ್ದರು. ಶ್ರೀಗಂಧದ ಎಣ್ಣೆ ಕಾರ್ಖಾನೆ, ಭದ್ರಾವತಿ ಉಕ್ಕಿನ ಕಾರ್ಖಾನೆ ನಿರ್ಮಿಸಿ ಸಾವಿರಾರು ಮಂದಿಗೆ ಉದ್ಯೋಗ ಕಲ್ಪಿಸಿದ್ದರು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ್ದಲ್ಲದೇ, ಬಾಲ್ಯವಿವಾಹ ನಿಷೇಧ ಜಾರಿಗೆ ತಂದಿದ್ದರು. ಇಂದು ಆಡಳಿತಕ್ಕೆ ಬರುವ ಎಲ್ಲಾ ಸರ್ಕಾರಗಳು ಅವರ ಅಭಿವೃದ್ಧಿ ಕಾರ್ಯಗಳು ಹಾಗೂ ಸಾಮಾಜಿಕ ಚಿಂತನೆಯನ್ನು ಅನುಸರಿಸುತ್ತಿವೆ. ಇದು ಅವರ ದೂರದೃಷ್ಟಿತ್ವಕ್ಕೆ ಸಾಕ್ಷಿಯಾಗಿವೆ. ಇಂತಹ ಮಹಾನ್ ಪುರುಷರ ಹೆಸರನ್ನು ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಗೆ ನಾಮಕರಣ ಮಾಡಬೇಕೆಂದು ಮನವಿ ಮಾಡಿದ್ದಾರೆ. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಲ್ಲದೇ ಸಚಿವರಾದ ಗೋಪಾಲಯ್ಯ ಮತ್ತು ಕೆ.ಸಿ.ನಾರಾಯಣಗೌಡ ಅವರು ಈ ಹೆದ್ದಾರಿಗೆ ಒಡೆಯರ್ ಅವರ ಹೆಸರು ನಾಮಕರಣ ಮಾಡುವ ಬಗ್ಗೆ ಕೇಂದ್ರ ಸಚಿವರಿಗೆ ಶಿಫಾರಸು ಮಾಡುವಂತೆ ತಾವು ಸಿಎಂಗೆ ಮನವಿ ಮಾಡುವ ಭರವಸೆ ನೀಡಿದ್ದಾರೆ ಎಂದು ಎಂಎಲ್‌ಸಿಗಳಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ ತಿಳಿಸಿದ್ದಾರೆ.

ರಾಷ್ಟ್ರೀಯ ವಿಕಾಸ ಯೋಜನೆಯಡಿ ಸಹಾಯಧನ

ಮೈಸೂರು,ಡಿ.24– ಹಿರಿಯ ಸಹಾಯಕ ತೋಗಾರಿಕೆ ಇಲಾಖೆ ವತಿಯಿಂದ 2022–23ನೇ ಸಾಲಿನ ರಾಷ್ಟ್ರೀಯ ವಿಕಾಸ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಉತ್ತೇಜನ ಕಾರ್ಯಕ್ರಮದ ಅಂಗವಾಗಿ ನೀರಿನಲ್ಲಿ ಕರಗುವ ರಸಗೊಬ್ಬರ ಹಾಗೂ ಲಘು ಪೋಷಕಾಂಶ ಮಿಶ್ರಣಗಳನ್ನು ಇಲಾಖಾ ಅನುಮೋದಿತ ಸಂಸ್ಥೆಗಳಿಂದ ರೈತರು ಖರೀದಿಸಿ ಸಂಬಂಧಪಟ್ಟ ದಾಖಲಾತಿಗಳನ್ನು ತೋಟಗಾರಿಕೆ ಇಲಾಖೆಗೆ ಸಲ್ಲಿಸಿದಲ್ಲಿ ಗರಿಷ್ಟ ಒಂದು ಹೆಕ್ಟೇರ್‌ಗೆ ಶೇ.25 ಸಹಾಯಧನ ನೀಡಲಾಗುತ್ತದೆ. ತೋಟಗಾರಿಕೆಯಲ್ಲಿನ ಕೊಯ್ಲೋತ್ತರ ನಿರ್ವಹಣೆ ಚಟುವಟಿಕೆಗಳಿಗೆ ಪ್ರೋತ್ಸಾಹ ಕಾರ್ಯಕ್ರಮದ ಮೂಲಕ ಪ್ಲಾಸ್ಟಿಕ್ ಕ್ರೇಟ್‌ಗೆ ಸಹಾಯಧನ ನೀಡುತ್ತಿದ್ದು, ಇಲಾಖೆಯ ಅನುಮೋದಿತ ಸಂಸ್ಥೆಗಳಿಂದ ಪ್ಲಾಸ್ಟಿಕ್ ಕ್ರೇಟ್ ಖರೀದಿಸಿ ಸಂಬಂಧಪಟ್ಟ ದಾಖಲಾತಿ ಸಲ್ಲಿಸಿದಲ್ಲಿ ಶೇ.50 ಸಹಾಯಧನವನ್ನು ಗರಿಷ್ಟ ಒಬ್ಬ ರೈತರಿಗೆ 1 ಹೆಕ್ಟೇರ್ ಪ್ರದೇಶಕ್ಕೆ ರೈತರಿಗೆ 108 ಸಂಖ್ಯೆಯ ಪ್ಲಾಸ್ಟಿಕ್ ಕ್ರೇಟ್‌ಗಳಿಗೆ ಸಹಾಯಧನ ನೀಡಲು ಅವಕಾಶವಿದೆ. ಮಾಹಿತಿಗೆ ಕಸಬಾ ಹೋಬಳಿ: ಮೊ.9901384284, ವರುಣಾ: 8904673607, ಜಯಪುರ : 9686766291 ಮತ್ತು ಇಲವಾಲ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮೊ. 7026719516 ಸಂಪರ್ಕಿಸಬಹುದು.

ಕನ್ನಡ ರಾಜ್ಯೋತ್ಸವ ಆಚರಣೆ: ಶ್ರಮಿಕರಿಗೆ ಸನ್ಮಾನ



ಮೈಸೂರು,ಡಿ.24–ಪಡುವಾರಹಳ್ಳಿಯ ಸರ್ ಎಂ.ವಿಶ್ವೇಶ್ವರಯ್ಯ ಯುವಕರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಬಿಜೆಪಿ ಮುಖಂಡ ಜಯಪ್ರಕಾಶ್‌ಗೌಡ (ಜೆಪಿ) ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಕನ್ನಡ ರಾಜ್ಯೋತ್ಸವ ನಿತ್ಯೋತ್ಸವವಾಗಿ ಆಚರಣೆ ಮಾಡಬೇಕು. ಕನ್ನಡ ನಾಡು–ನುಡಿ, ಗಡಿ ವಿಚಾರದಲ್ಲಿ ಸದಾ ನಾವೆಲ್ಲರೂ ಅಭಿಮಾನ ಮೆರೆಯಬೇಕು. ಕನ್ನಡ ನಾಡಿನ ಪ್ರತಿಯೊಬ್ಬ ವ್ಯಕ್ತಿಯೂ ಕನ್ನಡತನ ತೋರಿ ಭಾಷೆ ನಾಡು–ನುಡಿ, ಗಡಿ ವಿಚಾರದಲ್ಲಿ ಒಗ್ಗೂಡಿ ಭಾಷೆಯ ಕಟ್ಟೋ ಕೆಲಸದಲ್ಲಿ ನಿರಂತರವಾಗಿ ಕೈಜೋಡಿಸಬೇಕು. ಆಗ ಮಾತ್ರ ತಾಯಿ ನುಡಿಗೆ ಗೌರವಿಸಿದಂತಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹತ್ತು ಮಂದಿ ಶ್ರಮಿಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪಡುವಾರಹಳ್ಳಿಯ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮಹದೇವಸ್ವಾಮಿ, ನಗರಪಾಲಿಕೆ ಸದಸ್ಯರಾದ ಎಸ್.ಬಿ.ಎಂ. ಮಂಜು, ಕೆ.ಗಿರೀಶ್‌ಗೌಡ, ದಿ ಸಿಟಿ ಕೋಆಪರೇಟಿವ್ ಅಧ್ಯಕ್ಷ ಎಸ್.ಬಿ.ಶಿವು, ನಿರ್ದೇಶಕರಾದ ಎಲ್.ಪ್ರಸನ್ನ, ಎಂ.ಕೆ. ಅಶೋಕ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕ ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಸಂಘದ ಅಧ್ಯಕ್ಷರಾದ ಪೈಲ್ವಾನ್ ನಾಗರಾಜು, ಪುರುಷೋತ್ತಮ, ತಿಮ್ಮಯ್ಯ,ಚಿಕ್ಕ ಅರಸ ನಾಯಕ, ಸುರೇಂದ್ರ, ಅಜ್ಜಿ ಮಹದೇವ, ಪಾಪಣ್ಣ, ಮಹದೇವ, ಪೈ.ಭಟೇರಿ ದೇವೇಗೌಡ, ಉಮೇಶ್, ಆಟೋ ಮಂಜು, ಲಕ್ಷೀನಾರಾಯಣ, ಜಯರಾಂ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ನಗರದಲ್ಲಿ ಹನುಮ ಜಯಂತಿ ಫ್ಲೆಕ್ಸ್‌ಗೆ ಬೆಂಕಿ

ನಿವಾಸಿಗಳಿಂದ ಸೌತ್ ಪೊಲೀಸ್ ಠಾಣೆಗೆ ದೂರು



ಮೈಸೂರು, ಡಿ.24(ಆರ್‌ಕೆ)–ಮೈಸೂರಿನ ಸಾತಗಳ್ಳಿ ಬಳಿಯ ಅಂಬೇಡ್ಕರ್ ನಗರದಲ್ಲಿ ಅಳವಡಿಸಿದ್ದ ಹನುಮ ಜಯಂತಿ ಫ್ಲೆಕ್ಸ್‌ಗೆ ದುಷ್ಕರ್ಮಿಗಳು ಬೆಂಕಿ ಹಾಕಿದ್ದಾರೆ ಎಂದು ಅಲ್ಲಿಯ ನಿವಾಸಿಗಳು ಆರೋಪಿಸಿದ್ದಾರೆ.

ಸಾತಗಳ್ಳಿಯ ವಿಟಿಯು ಪ್ರಾದೇಶಿಕ ಕೇಂದ್ರದ ಹಿಂಭಾಗ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನರ್ಮ್ ಯೋಜನೆಯಡಿ ನಿರ್ಮಿಸಿರುವ ವಸತಿ ಬಡಾವಣೆ (ಅಂಬೇಡ್ಕರ್ ನಗರ)ಯಲ್ಲಿ ಹನುಮ ಜಯಂತಿ ಅಂಗವಾಗಿ ಆಂಜನೇಯಸ್ವಾಮಿ ಚಿತ್ರವಿರುವ ಫ್ಲೆಕ್ಸ್ ಅಳವಡಿಸಿ, ಕೇಸರಿ ಬಾವುಟವನ್ನು ಹಾಕಲಾಗಿತ್ತು.

ಇಂದು ಮುಂಜಾನೆ ಕಿಡಿಗೇಡಿಗಳು ಪೆಟ್ರೋಲ್ ಸುರಿದು ಫ್ಲೆಕ್ಸ್‌ಗೆ ಬೆಂಕಿ ಹಚ್ಚಿ ಸುಟ್ಟು ಹಾಕಿರುವುದು ಕಂಡು ಬಂದಿದೆ. ವಿಷಯ ತಿಳಿಯುತ್ತಿದ್ದಂತೆಯೇ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿ, ಮೈಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಸಮೀಪದಲ್ಲಿರುವ ಸಿಸಿ ಕ್ಯಾಮರಾದಲ್ಲಿ ಮುಂಜಾನೆ ಸುಮಾರು 2.30 ಗಂಟೆ ವೇಳೆಗೆ ಯಾರೋ ಓಡಾಡಿದಂತಿರುವ ಫುಟೇಜ್‌ಗಳು ಕಾಣುತ್ತಿವೆ ಎಂದು ನಿವಾಸಿಗಳು ದೂರಿನಲ್ಲಿ ಸುಳಿವು ನೀಡಿದ್ದಾರೆ. ಅಂಬೇಡ್ಕರ್ ನಗರದ ನಿವಾಸಿ ರವಿ ನೇತೃತ್ವದಲ್ಲಿ ಸ್ಥಳದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆಯೂ ಒತ್ತಾಯಿಸಿದರು.



ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಜೆಡಿಎಸ್ ಮುಖಂಡರೂ ಆದ ಮಾಜಿ ಕಾರ್ಪೊರೇಟರ್ ಸಿ.ಮಹದೇಶ್, ಅವರ ಪುತ್ರ ಮದನ್ ಮಹದೇಶ್, ಕೊಪ್ಪಲು ಜಯಪ್ರಕಾಶ್ ಆತ್ಮೀಯವಾಗಿ ಅಭಿನಂದಿಸಿದರು.



ಮೈಸೂರಿನ ಕೆ.ಜಿ.ಕೊಪ್ಪಲಿನ ಮುಖಂಡರಾದ ಡಿ.ನಿಂಗಪ್ಪ, ಬೋರಪ್ಪ, ಗಣೇಶ, ನಾಗಣ್ಣ, ಸಂತೋಷ್‌ಕುಮಾರ್, ಕೇಬಲ್ ಶೇಖರ್, ಶಿವಪ್ಪ ಇನ್ನಿತರರು ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.



ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಮುಡಾ ಮಾಜಿ ಸದಸ್ಯ ಜೆ.ಎಸ್.ಜಗದೀಶ್, ವಕೀಲ ಎಸ್.ಟಿ.ರಘು, ಬಿಲ್ಡರ್ ಎಸ್.ಎಸ್.ಪೊನ್ನಪ್ಪ, ಜಯರಾಜ್ ಹೂಗುಚ್ಛ ನೀಡಿ ಅಭಿನಂದಿಸಿದರು.

ಶಾರದಮ್ಮ ನಿಧನ



ಮೈಸೂರು, ಡಿ.24– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿವೃತ್ತ ಅಧೀಕ್ಷಕ, ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿ ನಿವಾಸಿ ಬೆಟ್ಟೇಗೌಡ ಅವರ ಧರ್ಮಪತ್ನಿ ಶ್ರೀಮತಿ ಶಾರದಮ್ಮ(70) ಅವರು ಇಂದು ನಿಧನರಾದರು.

ಮೃತರು ಪತಿ, ಪುತ್ರಿ, ಇಬ್ಬರು ಪುತ್ರರು ಸೇರಿ ದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರ ಭೂಮಿಯಲ್ಲಿ ನಾಳೆ (ಡಿ.25) ಮಧ್ಯಾಹ್ನ 1 ಗಂಟೆಗೆ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ, ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ದಿ ಅನಾಥಾಲಯ :** 27ನೇ ವಾರ್ಷಿಕ ಕನ್ನಡ ಚರ್ಚಾ ಸ್ಪರ್ಧೆ, ಸ್ಥಳ: ಅನ್ನಪೂರ್ಣ ನಿಲಯ, ದಿ ಅನಾಥಾಲಯ ಆವರಣ, ಬೆಳಗ್ಗೆ 9ಕ್ಕೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಕೌದಿ ಕಲೆ, ನರಸಿಮುಲು ಪಿ.ಬ್ಯಾಗೇರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್:** ದಿವಂಗತ ಪ್ರೊ. ಲಿಂಗದೇವರು ಹಳೆಮನೆಯವರ ಸ್ಮರಣಾರ್ಥ 'ಹಿತಚಿಂತಕ' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ: ಹಿರಿಯ ಸಮಾಜವಾದಿ ಪ. ಮಲ್ಲೇಶ್, ಅಧ್ಯಕ್ಷತೆ: ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ, ಪುಸ್ತಕ ಕುರಿತು : ರಂಗ ನಿರ್ದೇಶಕ ಪ್ರೊ. ಹೆಚ್.ಎಸ್. ಉಮೇಶ್, ಮುಖ್ಯ ಅತಿಥಿಗಳು: ನಂದಾ ಹಳೆಮನೆ, ರೂಪ ಪ್ರಕಾಶನದ ಯು.ಎಸ್.ಮಹೇಶ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.

■ **ವೆಂಕಟಗಿರಿ ಪ್ರಕಾಶನ, ಕುವೆಂಪುನಗರ, ಸೃಜನಶೀಲರು ಬಳಗ :** ಶ್ರೀಮತಿ ಹೇಮಾರಮೇಶ್ ಅವರ ಅಂತರಾಳ ಮತ್ತು ಕಾವ್ಯಾಂಜಲಿ ಕೃತಿಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಪ್ರೊ. ನೀ.ಗಿರಿಗೌಡ, ಉದ್ಘಾಟನೆ: ಹಿರಿಯ ಸಾಹಿತಿ ಪ್ರೊ.ಸೂರ್ಯನಾರಾಯಣಸ್ವಾಮಿ, ಕೃತಿಗಳ ಬಿಡುಗಡೆ: ಸಾಹಿತಿ ಪ್ರೊ.ಕೆ.ಅನಂತರಾಮು, ಕೃತಿಗಳನ್ನು ಕುರಿತ : ಮೋಹನ್ ವೆರ್ಣೇಕರ್, ವೆಂಕಟೇಶಶ್ರೀ, ಉಪಸ್ಥಿತರು: ಹೇಮಾ ರಮೇಶ್, ಪ್ರಣತಾರ್ಥಿಹರನ್, ಸ್ಥಳ: ಚಂಪಕ ಅಕಾಡೆಮಿ, ವಿಶ್ವಮಾನವ ಜೋಡಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಜಿಲ್ಲಾ ಬ್ರಾಹ್ಮಣ ಮಹಾಸಭಾ:** ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ದಿನದ ಅಂಗವಾಗಿ ನೂತನ ದಿನದರ್ಶಿಕೆ ಬಿಡುಗಡೆ ಸಮಾರಂಭ, ಉಪಸ್ಥಿತರು: ಶಾಸಕ ಜಿ.ಟಿ.ದೇವೇಗೌಡ, ತೇಜಸ್ವಿನಿ ಅನಂತಕುಮಾರ್, ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರರಾವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಮಹಿಳಾ ಅಧ್ಯಕ್ಷೆ ಪುಷ್ಪ ಅಯ್ಯಂಗಾರ್, ನವೀನ್ ಕುಮಾರ್, ರಮೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರಘುರಾಂ ವಾಜಪೇಯಿ, ಮಿರ್ಲೆ ಶ್ರೀನಿವಾಸಗೌಡ, ಅರಮನೆ ಮಂಡಳಿ ನಿರ್ದೇಶಕ ಸುಬ್ರಹ್ಮಣ್ಯ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸ್ಥಳ: ಸಂಧ್ಯಾ ಚೇತನ ಸಭಾ ಭವನ, ಅಮ್ಮ ಕಾಂಪ್ಲೆಕ್ಸ್ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಯಶು ಚಿಲ್ಡ್ರನ್ ಅಂಡ್ ಕಲ್ಚರಲ್ ಅಕಾಡೆಮಿ, ಅರೋರ ಎಜುಕೇಷನಲ್ ಟ್ರಸ್ಟ್:** ಪ್ರತಿಭಾವಂತ ಮಕ್ಕಳಿಗೆ ಚಿಗುರು ರತ್ನ, ಪ್ರತಿಭಾರತ್ನ, ಸಧನರತ್ನ, ಮೈಸೂರು ರತ್ನ, ಪುಟಾಣಿ ಮೈಸೂರು ರತ್ನ, ಪ್ರತಿಭಾ ಪುಟಾಣಿ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ, ದೇವೇಗೌಡ ಹಾಲ್, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

25.12.2022 ಭಾನುವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ದ್ವಿತೀಯ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಅಭಿರುಚಿ ಪ್ರಕಾಶನ :** ಕೆ.ಎನ್. ಲಿಂಗಪ್ಪ ಅವರ ಮೀಸಲಾತಿಯ ಒಳನೋಟ ಕೃತಿ ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ : ಹಿರಿಯ ನ್ಯಾಯವಾದಿ ಪ್ರೊ. ರವಿವರ್ಮ ಕುಮಾರ್, ಅಧ್ಯಕ್ಷತೆ: ಹಿರಿಯ ನ್ಯಾಯವಾದಿ ಹೆಚ್. ಕಾಂತರಾಜ, ಕೃತಿ ಕುರಿತು ಮಾತನಾಡುವವರು: ಹಿರಿಯ ಪತ್ರಕರ್ತ ಡಿ. ಉಮಾಪತಿ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕಲಾನಿಕಾಯದ ಡೀನ್ ಪ್ರೊ. ಮುಜಾಫರ್ ಅಸ್ಸಾದಿ, ಉಪಸ್ಥಿತರು : ಲೇಖಕ ಕೆ.ಎನ್. ಲಿಂಗಪ್ಪ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್:** ದೂರಕರೆ ಉಪನ್ಯಾಸ ಮಾಲಿಕೆ (ವೆಬಿನಾರ್)ನ 150ರ ಸಂಭ್ರಮ, ಅಧ್ಯಕ್ಷತೆ: ವಿಜಯ ವಿಠ್ಠಲ ಶಾಲೆ ಕಾರ್ಯದರ್ಶಿ ವಾಸುದೇವ ಭಟ್, ಆಶಯ ಭಾಷಣ: ಅಭಾಸಾಪ ಪ್ರಾಂತ ಕಾರ್ಯದರ್ಶಿ ರಘುನಂದನ ಭಟ್, ಕೃತಿಗಳ ಬಿಡುಗಡೆ: ವಲಯ ಪ್ರಮುಖ ಡಾ. ವಿ.ರಂಗನಾಥ್, ಸ್ಥಳ: ವಿಜಯ ವಿಠ್ಠಲ ಶಾಲೆ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ವಿವೇಕ ರಾಕ್ ಮೆಮೋರಿಯಲ್, ವಿವೇಕಾನಂದ ಕೇಂದ್ರ :** ಸಮರ್ಥ ಭಾರತ ಪರ್ವ ಉತ್ಸವದ ಅಂಗವಾಗಿ ಸಾಂಸ್ಕೃತಿಕ ಸ್ಪರ್ಧೆ, ದೇಶಭಕ್ತಿಗೀತೆ, ಸ್ಥಳ: ವಿವೇಕಾನಂದ ಕೇಂದ್ರ, ಪಂಪಾಪತಿ ರಸ್ತೆ, ಜಯನಗರ, ಸಂಜೆ 4ಕ್ಕೆ.

■ **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ, ಸಂಜೆ 5ರಿಂದ ಕು. ಗುರುದತ್ತ ನಾಗರಾಜ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 7ರಿಂದ ಖ್ಯಾತ ಹಿನ್ನಲೆ ಗಾಯಕರಾದ ರಾಜೇಶ್ ಕೃಷ್ಣನ್ ಮತ್ತು ಜೋಗಿ ಸುನೀತ ತಂಡದಿಂದ ಸಂಗೀತ ರಸಸಂಜೆ, ಸ್ಥಳ: ಅರಮನೆ ಆವರಣ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.

■ **ರಾಗ ವೈಭವ :** ಉಸ್ತಾದ್ ಫಯಾಜ್ ಖಾನ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ, ಪಂಡಿತ್ ವೀರಭದ್ರಯ್ಯ ಹಿರೇಮಠ್–ಹಾರ್ಮೋನಿಯಂ, ಪಂಡಿತ್ ರಮೇಶ್ ಧನ್ನೂರ್–ತಬಲ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಚಾರ್ಯ ಭವನ, ಸಂಜೆ 6ಕ್ಕೆ.

■ **ಕಲಾ ಸಂದೇಶ ಪ್ರತಿಷ್ಠಾನ:** ಕು. ಪೂರ್ವಿಕಾ ಚಂದನಮ್ ಅವರ ಭರತ ನಾಟ್ಯ ರಂಗ ಪ್ರವೇಶ, ಉದ್ಘಾಟನೆ: ಚಲನಚಿತ್ರ ನಟ ಮಂಡ್ಯ ರಮೇಶ್, ಮುಖ್ಯ ಅತಿಥಿಗಳು: ಡಾ.ವಸುಂಧರಾ ದೊರೆಸ್ವಾಮಿ, ಡಾ.ಆರ್.ಎಸ್. ನಂದಕುಮಾರ್, ವಿದ್ವಾನ್ ಆರ್.ಕಣ್ಣನ್, ವಿದ್ವಾನ್ ಡ.ರಾಮ ವಿ.ಬೆನ್ನೂರ್, ಅಧ್ಯಕ್ಷತೆ: ಕಲಾ ಸಂದೇಶ ಪ್ರತಿಷ್ಠಾನ ಅಧ್ಯಕ್ಷ ಡಾ.ಡಿ.ಉಮಾಪತಿ, ಸ್ಥಳ: ರಮಾ ಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಭಾರತೀಯ ನೃತ್ಯಕಲಾ ಪರಿಷತ್:** ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಸಂಸ್ಮರಣಾ ನೃತ್ಯೋತ್ಸವ, ವಿದುಷಿ ಅನಿತಾ, ವಿದುಷಿ ದಿಶಾ ಜಿ. ಮಾರಿಗೋಳಿ, ವಿದುಷಿ ಎಸ್.ರಮ್ಯಾ, ಕು. ಸುಶ್ಮಿತಾ, ವಿದುಷಿ ರಂಜಿತಾ ಸೋಮಶೇಖರ್, ವಿದ್ವಾನ್ ಉನ್ನತ್ ಅವರಿಂದ ನೃತ್ಯೋತ್ಸವ, ಸ್ಥಳ: ಗಾನ ಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ನಮೋ ಯೋಗಭವನ:** ನೂತನ ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್‌ಗೆ ಅಭಿನಂದನಾ ಸಮಾರಂಭ, ಯೋಗ ಸೇವಾ ರತ್ನ ಪ್ರಶಸ್ತಿ ಪ್ರದಾನ: ಎಂ.ರೂಪ, ಅರುಣ ಎಂ. ಗವಾಡೆ, ಗೌರವಾರ್ಪಣೆ : ಎಂ.ಎಲ್. ಕಲ್ಯಾಣ್‌ಕುಮಾರ್, ಉದ್ಘಾಟನೆ : ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಪ್ರಾಸ್ತಾವಿಕ ನುಡಿ: ಯೋಗ ಪ್ರಕಾಶ್, ಅಧ್ಯಕ್ಷತೆ : ಮೈಸೂರು ಯೋಗ ಅಸೋಸಿಯೇಷನ್ ಗೌರವಾಧ್ಯಕ್ಷ ಬಿ.ವಿ. ಮಂಜುನಾಥ್, ಮುಖ್ಯ ಅತಿಥಿಗಳು: ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಸ್ಥಳ: ನಮೋ ಯೋಗ ಭವನ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ :** ಡಾ. ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ:** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.

■ **ರಂಗಾಯಣ:** ವಾರಾಂತ್ಯ ರಂಗಪ್ರದರ್ಶನದ ಅಂಗವಾಗಿ 'ಅಂಧಯುಗ' ನಾಟಕ ಪ್ರದರ್ಶನ, ರಚನೆ: ಧರ್ಮವೀರ ಭಾರತಿ, ನಿರ್ದೇಶನ: ಜಗದೀಶ್ ಮನವಾರ್ತೆ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ, ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.

■ **ಶ್ರೀ ಕೃಷ್ಣ ಗಾನಸಭಾ :** ಶ್ರೀಮತಿ ಎಸ್.ಆರ್.ಕುಮುದ ಅವರ ಸ್ಮರಣಾರ್ಥ ಪುದುವಟ್ಟು ಕಾರ್ಯಕ್ರಮ, ಉದ್ಘಾಟನೆ : ಎಸ್.ಆರ್. ಕುಮುದ ಚಾರಿಟಬಲ್ ಟ್ರಸ್ ಅಧ್ಯಕ್ಷ ನಂದಕುಮಾರ್, ವಿದುಷಿ ಸಿಂಧು ಕಿರಣ ಮತ್ತು ವೃಂದದವರಿಂದ ಒಡಿಸ್ಸಿ ನೃತ್ಯ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ:** ಪರಿವರ್ತನ ರಂಗ ಸಮಾಜದಿಂದ 'ನನ್ನ ಪ್ರೀತಿಯ ಅಮೃತ್' ನಾಟಕ ಪ್ರದರ್ಶನ, ನಿರ್ದೇಶನ : ಪ್ರೊ. ಎಸ್.ಆರ್.ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಕಂಚಮಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪಪೂರ್ವ ಕಾಲೇಜು** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಬೆಳಗ್ಗೆ 6.30ಕ್ಕೆ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ನಾಗರಾಜಪ್ಪ ಅವರಿಂದ ಧ್ವಜಾರೋಹಣ, ಸಂಜೆ 4.30ಕ್ಕೆ ಕಾರ್ಯಕ್ರಮ, ಅಧ್ಯಕ್ಷತೆ: ಗ್ರಂಥಪಾಲಕ ಹೆಚ್.ಪಿ.ಗಂಗಾಧರ್, ಸಂಜೆ 6.30ಕ್ಕೆ ಜನಪದ ಮತ್ತು ಭಕ್ತಿಗೀತೆ ಕಾರ್ಯಕ್ರಮ, ಗಾಯನ: ಬಸವರಾಜು.

ಸರಗೂರಿನಲ್ಲಿಂದು

■ **ಜೆಎಸ್‌ಎಸ್ ಆಸ್ಪತ್ರೆ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ: ಮಕ್ಕಳ ಹೃದ್ರೋಗ ತಜ್ಞ ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ.ಮಂಜುನಾಥ್, ಸ್ಥಳ: ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸರಗೂರು, ಬೆಳಗ್ಗೆ 10ಕ್ಕೆ.

ಬೆಟ್ಟದಪುರದಲ್ಲಿಂದು

■ **ಪಿರಿಯಾಪಟ್ಟಣ ತಾಲೂಕಿನ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ:** ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ, ಉದ್ಘಾಟನೆ: ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ಸಾನ್ನಿಧ್ಯ: ಬಸವಪಟ್ಟಣ ಮಠದ ಶ್ರೀ ಶಿವಯೋಗಿಗಳು ತೋಂಟದಾರ್ಯ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಮಲ್ಲೇಶ್, ಸ್ಥಳ: ಮಾನಸ ವಿದ್ಯಾಸಂಸ್ಥೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ –ಎ.ಪಿಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ–ಎನ್.ಹೇಮಾ, ಮತ್ತೂರು ಕುಮಾರ ಸ್ವಾಮಿ, ಅಂಬಯ್ಯನುಲಿ, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 9.40 ನಮ್ಮ ಆರೋಗ್ಯ–ಇಲಿ ಜ್ವರ ಅಥವಾ ಲೆಪ್ಟೋಸ್ಪೈರೋಸಿಸ್ ಕುರಿತು ಮೈಸೂರಿನ ಜೆ.ಎ.ಎಸ್. ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗದ ಪ್ರೊಫೆಸರ್ ಡಾ.ಸುಮನಾ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿ ಗಳೇ–ಕಥೆ ಹೆಳ್ಳೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಮೈಸೂರಿನ ಸೈಂಟ್ ಜೋಸೆಫ್ ಶಾಲೆಯ ಮಕ್ಕಳಿಂದ ಕ್ರಿಸ್‌ಮಸ್ ಕುರಿತ ವಿಶೇಷ ಕಾರ್ಯಕ್ರಮ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ಮೋದಿ ಅವರ ಮನದ ಮಾತು, ನಂತರ: ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮನದ ಮಾತಿನ ಕನ್ನಡ ಅನುವಾದ ಮಧ್ಯಾಹ್ನ: 12.30 ದೇವರನಾಮ–ಕೆ.ಎಸ್. ಸುರೇಖ, ರಘು ಹೆಗಡೆ, 12.45ಜನಪದ ಸಂಗೀತ–ನಿಂಗಶೆಟ್ಟಿ ಮತ್ತು ತಂಡ, 1.20 ಭಾವಗೀತೆ, 3.00 ಸ್ವರಾಜ್–ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳಮದ್ದಲೆ, ಪ್ರಸಂಗ–ದಾಯಾದ್ಯ ಕುಟಿಲೋ ಪಾಯ, ಪ್ರಸ್ತುತಿ– ಕಾಸರಗೋಡು ಜಿಲ್ಲೆ ಉಪ್ಪಳದ ಶ್ರೀ ದುರ್ಗಾ ಪರಮೇಶ್ವರಿ ಯಕ್ಷಗಾನ ಕಲಾ ವೇದಿಕೆಯ ಸದಸ್ಯರು, 6.50 ಕೃಷಿರಂಗ–ಕೃಷಿಲೋಕ, ಕೃಷಿ ಮಾಹಿತಿ, ಜನಪದ ಗೀತೆಗಳು, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗಿನ ಪ್ರಧಾನಿ ಮೋದಿಯವರ ಮನದ ಮಾತು, 9.15 ರಂಗಗೀತೆಗಳು–ಸುಬದ್ರಾ ಕಲ್ಯಾಣ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಮೋಹನಕೃಷ್ಣ –ಹಾಡುಗಾರಿಕೆ





ಮಂಡ್ಯ ಜಿಲ್ಲೆಯ ಶೈಕ್ಷಣಿಕ, ಆರ್ಥಿಕ, ಧಾರ್ಮಿಕ, ಆರೋಗ್ಯ ಕ್ಷೇತ್ರದಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದ್ದ,
ರಾಜ್ಯದ ಹಿರಿಯ ಮುತ್ಸದ್ಧಿ, ಅಪ್ಪಟ ಗಾಂಧೀವಾದಿ, ಹಳ್ಳಿಗಾಡಿನ ರೂವಾರಿಯಾಗಿದ್ದ
ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದ ಮಾಜಿ ಸಂಸದರು, ಸಚಿವರಾಗಿದ್ದ
ದಿವಂಗತ **ಡಾ.ಜಿ.ಮಾದೇಗೌಡ**ರ
ಸುಪುತ್ರರು, ಕ್ರಿಯಾಶೀಲ ಯುವ ನಾಯಕರು, ಭಾರತೀ ಎಜುಕೇಷನ್ ಟ್ರಸ್ಟ್ (ರಿ.) ಮತ್ತು
ಮಹಾತ್ಮಗಾಂಧೀ ಸ್ಮಾರಕ ಟ್ರಸ್ಟ್‌ನ (ರಿ.) ಅಧ್ಯಕ್ಷರಾದ

ಶ್ರೀ ಮಧು ಜೀ. ಮಾದೇಗೌಡ

ಅವರಿಗೆ

ಶಾಸಕರು, ಕರ್ನಾಟಕ ವಿಧಾನ ಪರಿಷತ್,
ಕರ್ನಾಟಕ ಸರ್ಕಾರ

58ನೇ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



ಆಶಯ್ ಜಿ. ಮಧು
ಟ್ರಸ್ಟಿ ಮತ್ತು ಸಿ.ಇ.ಓ, ಬಿಇಟಿ (ರಿ)

ಶುಭಕೋರುವವರು

ಪದಾಧಿಕಾರಿಗಳು ಮತ್ತು ಟ್ರಸ್ಟಿಗಳು



- **ಬಿ. ಬಸವರಾಜು** — ಕಾರ್ಯಾಧ್ಯಕ್ಷರು, ಬಿ.ಇ.ಟಿ.(ರಿ)
- **ಬಿ.ಎಂ. ನಂಜೇಗೌಡ** — ಕಾರ್ಯದರ್ಶಿ, ಬಿ.ಇ.ಟಿ.(ರಿ), ಭಾರತೀನಗರ ಕ್ಯಾಂಪಸ್
- **ಸಿದ್ದೇಗೌಡ** — ಕಾರ್ಯದರ್ಶಿ, ಹನುಮಂತನಗರ ಕ್ಯಾಂಪಸ್
- **ಕೆ.ಬಿ. ಮಹದೇವಪ್ಪ** — ಕಾರ್ಯದರ್ಶಿ, ಕಿರುಗಾವಲು ಕ್ಯಾಂಪಸ್
- **ಎಸ್. ಬಸವೇಗೌಡ** — ಟ್ರಸ್ಟಿ, ಬಿ.ಇ.ಟಿ. (ರಿ)
- **ಕೆ.ಲಿಂಗೇಗೌಡ ಪಾಪಣ್ಣ** — ಟ್ರಸ್ಟಿ, ಬಿ.ಇ.ಟಿ.(ರಿ)
- **ಮುದ್ದಯ್ಯ** — ಟ್ರಸ್ಟಿ, ಬಿ.ಇ.ಟಿ. (ರಿ)
- **ಎಸ್.ಜಯರಾಮು** — ಟ್ರಸ್ಟಿ, ಬಿ.ಇ.ಟಿ. (ರಿ)

ಭಾರತೀನಗರ ಕ್ಯಾಂಪಸ್

1. ಭಾರತೀ ಪೂರ್ವ ಪ್ರಾಥಮಿಕ ಶಾಲೆ (ಕಿಡ್‌ಜೀ)
2. ಭಾರತೀ ಹಿರಿಯ ಪ್ರಾಥಮಿಕ ಶಾಲೆ
3. ಭಾರತೀ ಆಂಗ್ಲಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ (ಎಕ್ಸಲೆನ್ಸ್)
4. ಭಾರತೀ ಪ್ರೌಢಶಾಲೆ
5. ಭಾರತೀ ಆಂಗ್ಲ ಮಾದ್ಯಮ ಪ್ರೌಢಶಾಲೆ (ಎಕ್ಸಲೆನ್ಸ್)
6. ಭಾರತೀ ಪದವಿ ಪೂರ್ವ ಕಾಲೇಜು
7. ಭಾರತೀ ಸಂಯುಕ್ತ ಪದವಿ ಪೂರ್ವ ಕಾಲೇಜು (ಎಕ್ಸಲೆನ್ಸ್)
8. ಭಾರತೀ ಕಾಲೇಜು (ಸ್ವಾಯತ್ತ)
9. ಭಾರತೀ ಸ್ನಾತಕೋತ್ತರ (ಸ್ವಾಯತ್ತ) ಮತ್ತು ಸಂಶೋಧನಾ ಕೇಂದ್ರ
10. ಡಾ|| ಜಿ.ಮಾದೇಗೌಡ ಕಾಲೇಜ್ ಆಫ್ ಎಕ್ಸಲೆನ್ಸ್
11. ಭಾರತೀ ಶಿಕ್ಷಣ ಮಹಾವಿದ್ಯಾಲಯ
12. ಬಿ.ಇ.ಟಿ.ಪಾಲಿಟೆಕ್ನಿಕ್
13. ಜಿ.ಮಾದೇಗೌಡ ತಾಂತ್ರಿಕ ಮಹಾವಿದ್ಯಾಲಯ (ಜಿ.ಎಂ.ಐ.ಟಿ)
14. ಭಾರತೀ ಔಷಧ ವಿಜ್ಞಾನ ಮಹಾವಿದ್ಯಾಲಯ
15. ಶ್ರೀಮತಿ ಪದ್ಮ ಜಿ.ಮಾದೇಗೌಡ ಕಾಲೇಜ್ ಆಫ್ ನರ್ಸಿಂಗ್
16. ಜಿ.ಮಾದೇಗೌಡ ಕಾಲೇಜ್ ಆಫ್ ಫಿಸಿಯೋಥೆರಪಿ
17. ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್
18. ಭಾರತೀ ಐ.ಎ.ಎಸ್. ಅಕಾಡೆಮಿ
19. ಭಾರತೀ ವಸತಿ ನಿಲಯ
20. ಭಾರತೀ ಉದ್ಯೋಗಸ್ಥ ಮಹಿಳಾ ವಸತಿ ನಿಲಯ
21. ಭಾರತೀ ವಿವಿದ್ದೋದ್ದೇಶ ಸಹಕಾರ ಸಂಘ (ರಿ.)
22. ಭಾರತೀ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ರಿ.)
23. ಭಾರತೀ ಗೃಹ ನಿರ್ಮಾಣ ಸಹಕಾರ ಸಂಘ (ರಿ.)
24. ಡಾ|| ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
25. ಭಾರತೀ ಜನೌಷಧಿ ಕೇಂದ್ರ (ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ)

ಹನುಮಂತನಗರ ಕ್ಯಾಂಪಸ್

26. ಶ್ರೀ ಆತ್ಮಲಿಂಗೇಶ್ವರ ಪುಣ್ಯಕ್ಷೇತ್ರ
27. ಯಾತ್ರಿ ನಿವಾಸ
28. ಶ್ರೀ ಆತ್ಮಲಿಂಗೇಶ್ವರ ನಿಸರ್ಗಧಾಮ ಮತ್ತು ಮಕ್ಕಳ ರೈಲು
29. ದಾಸೋಹ ಭವನ
30. ಭಾರತೀ ವಸತಿ ಸಂಯುಕ್ತ ಪದವಿಪೂರ್ವ ಕಾಲೇಜು
31. ಜಿ.ಮಾದೇಗೌಡ ಇನ್‌ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸಸ್ (ಜಿ.ಎನ್.ವೈ.ಎಸ್)
32. ಪ್ರಕೃತಿ ಆರೋಗ್ಯಧಾಮ (ಪ್ರಕೃತಿ ಚಿಕಿತ್ಸಾ ಕೇಂದ್ರ)
33. ಭಾರತೀ ಈಜುಕೊಳ
34. ಮಕ್ಕಳ ರೈಲು

ಕಿರುಗಾವಲು ಕ್ಯಾಂಪಸ್

35. ಭಾರತೀ ಪಿ.ಯು.ಕಾಲೇಜು
36. ಭಾರತೀ ಪದವಿ ಕಾಲೇಜು
37. ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಫಾರ್ಮಸುಟಿಕಲ್ ಸೈನ್ಸಸ್
38. ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್

ಅಂಗಸಂಸ್ಥೆಗಳ ಮುಖ್ಯಸ್ಥರು



- **ಡಾ.ಎಂ.ರಾಮಕೃಷ್ಣ** — ಪ್ರಾಂಶುಪಾಲರು, ಭಾರತೀ ಕಾಲೇಜು
- **ಪ್ರೊ. ಎಸ್.ನಾಗರಾಜು** — ನಿರ್ದೇಶಕರು, ಭಾರತೀ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ
- **ಡಾ. ಎಸ್.ಎಲ್.ಸುರೇಶ್** — ಪ್ರಾಂಶುಪಾಲರು, ಭಾರತೀ ಶಿಕ್ಷಣ ಮಹಾವಿದ್ಯಾಲಯ
- **ಡಾ. ಟಿ.ತಮಿಜ್‌ಮಣಿ** — ನಿರ್ದೇಶಕರು, ಭಾರತೀ ಹೆಲ್ತ್ ಸೈನ್ಸಸ್
- **ಡಾ.ಟಿ.ಬಾಲಸುಬ್ರಮಣ್ಯಂ** — ಪ್ರಾಂಶುಪಾಲರು, ಭಾರತೀ ಔಷಧ ವಿಜ್ಞಾನ ಮಹಾವಿದ್ಯಾಲಯ
- **ಡಾ. ಆರ್.ವಿ.ಪ್ರವೀಣಗೌಡ** — ಪ್ರಾಂಶುಪಾಲರು, ಜಿ.ಮಾದೇಗೌಡ ತಾಂತ್ರಿಕ ಮಹಾವಿದ್ಯಾಲಯ (ಜಿ.ಎಂ.ಐ.ಟಿ)



- **ಜಿ.ಕೃಷ್ಣ** — ಪ್ರಾಂಶುಪಾಲರು, ಬಿ.ಇ.ಟಿ.ಪಾಲಿಟೆಕ್ನಿಕ್
- **ಪಿ.ನಾಗಮಾದಯ್ಯ** — ಪ್ರಾಂಶುಪಾಲರು, ಭಾರತೀ ಪದವಿ ಪೂರ್ವ ಕಾಲೇಜು
- **ಸಿ.ವಿ.ಮಲ್ಲಿಕಾರ್ಜುನ** — ಪ್ರಾಂಶುಪಾಲರು, ಭಾರತೀ ಸಂಯುಕ್ತ ಪದವಿ ಪೂರ್ವ ಕಾಲೇಜು (ಎಕ್ಸಲೆನ್ಸ್)
- **ಪಿ.ರಾಜೇಂದ್ರ ರಾಜೇ ಅರಸ್** — ಮುಖ್ಯೋಪಾಧ್ಯಾಯರು, ಭಾರತೀ ಪ್ರೌಢಶಾಲೆ
- **ಸಿ.ಡಿ.ಶ್ವೇತಾ** — ಮುಖ್ಯೋಪಾಧ್ಯಾಯರು, ಭಾರತೀ ಆಂಗ್ಲ ಮಾದ್ಯಮ ಪ್ರೌಢಶಾಲೆ (ಎಕ್ಸಲೆನ್ಸ್)
- **ಹೆಚ್.ಪಿ.ಪ್ರತಿಮಾ** — ಮುಖ್ಯೋಪಾಧ್ಯಾಯರು,ಭಾರತೀ ಆಂಗ್ಲಮಾಧ್ಯಮ ಹಿರಿಯ ಪ್ರಾಥಮಿಕ ಪಾಠಶಾಲೆ (ಎಕ್ಸಲೆನ್ಸ್)



- **ಹೆಚ್.ರಮೇಶ್** — ಮುಖ್ಯೋಪಾಧ್ಯಾಯರು, ಭಾರತೀ ಹಿರಿಯ ಪ್ರಾಥಮಿಕ ಪಾಠಶಾಲೆ
- **ಮಹೇಶ್ ಜಿ.ಲೋಣಿ** — ಪ್ರಾಂಶುಪಾಲರು, ಶ್ರೀಮತಿ ಪದ್ಮ ಜಿ.ಮಾದೇಗೌಡ ಕಾಲೇಜ್ ಆಫ್ ನರ್ಸಿಂಗ್
- **ಕಲಾಶ್ರೀ** — ಪ್ರಾಂಶುಪಾಲರು, ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್
- **ಮಂಜು ಎಂ.ಜೇಕಬ್** — ಪ್ರಾಂಶುಪಾಲರು, ಜಿ.ಮಾದೇಗೌಡ ಕಾಲೇಜ್ ಆಫ್ ಫಿಸಿಯೋಥೆರಪಿ
- **ಸಿ. ರಶ್ಮಿ** — ಪ್ರಾಂಶುಪಾಲರು,ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಫಾರ್ಮಸುಟಿಕಲ್ ಸೈನ್ಸಸ್, ಕಿರುಗಾವಲು
- **ಜಿ.ಎನ್.ಜಗದೀಶ್** — ನಿಲಯ ಪಾಲಕರು, ಭಾರತೀ ವಸತಿ ನಿಲಯ



- **ಟಿ.ಪ್ರಮೀಳಾ** — ನಿಲಯ ಪಾಲಕರು, ಭಾರತೀ ಉದ್ಯೋಗಸ್ಥ ಮಹಿಳಾ ವಸತಿ ನಿಲಯ
- **ಕೆ.ಹೆಚ್.ಪ್ರಸನ್ನಕುಮಾರ್** — ಸಂಯೋಜಕರು, ಭಾರತೀ ಐಎಎಸ್ ಅಕಾಡೆಮಿ
- **ಪುಟ್ಟಸ್ವಾಮಿ** — ಪ್ರಾಂಶುಪಾಲರು, ಭಾರತೀ ವಸತಿ ಸಂಯುಕ್ತ ಪದವಿಪೂರ್ವ ಕಾಲೇಜು, ಹನುಮಂತನಗರ
- **ಡಾ.ಜಿ.ಶಾಂತಕುಮಾರ್** — ಪ್ರಾಂಶುಪಾಲರು, ಜಿ.ಮಾದೇಗೌಡ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸಸ್ (ಜಿ.ಎನ್.ವೈ.ಎಸ್)
- **ಕೆ.ಎಸ್.ಗೋಪಾಲಕೃಷ್ಣ** — ಪ್ರಾಂಶುಪಾಲರು, ಭಾರತೀ ಕಾಲೇಜು, ಕಿರುಗಾವಲು
- **ಪುಟ್ಟಲಿಂಗಯ್ಯ** — ಪ್ರಾಂಶುಪಾಲರು, ಭಾರತೀ ಪಿ.ಯು.ಕಾಲೇಜು

ಅಂಗಸಂಸ್ಥೆಗಳ ಬೋಧಕರು, ಭೋಧಕೇತರರು ಹಾಗೂ ವಿದ್ಯಾರ್ಥಿ
ವೃಂದ.ಭಾರತಿ ಎಜುಕೇಷನ್ ಟ್ರಸ್ಟ್ (ರಿ)

ನಕ್ಕರೆ ಅದೇ ಸ್ವರ್ಗ

ಅಪ್ಪ : ಮಗನೇ, ಯಾರಿಗೂ ಹೆದರಬೇಡ,
ನೀನು ಸಿಂಹದ ಮರಿ ಕಣೋ

ಮಗ : ಹೌದಪ್ಪ, ಟೀಚರ್ ಕೂಡ ಹೇಳ್ತಿರ್ತಾರೆ,
'ನೀನು ಮನುಷ್ಯ ವಂಶದವನಲ್ಲ ಎಂದು!

ಮೈಸೂರು ಮಿತ್ರ

ಭಾನುವಾರ, 25 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*



ಅಮೃತವಾಹಿನಿ..........

ಬುದ್ಧಿವಂತರು ತಾವು ಇಚ್ಛಾಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ –ಸಮಯೋಚಿತ ಪದ್ಯಮಾಲಿಕಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಪ್ಪವಿಲ್ಲದ ಮಾತು ತುಪ್ಪವಿಲ್ಲದ ಊಟವಿದ್ದಂತೆ

ನಿಮ್ಮ ಪತ್ರಗಳು

ಸ್ವಚ್ಛತೆ ಕಡೆ ಸೂಕ್ತ ಗಮನಹರಿಸಿ

ಮಾನ್ಯರೆ,

ಮೈಸೂರಿನ ವಿವೇಕಾನಂದನಗರ ಮತ್ತು ರಾಮಕೃಷ್ಣನಗರ ಮಧ್ಯೆ ಗೊಬ್ಬಳಿ ಮರದ ಹತ್ತಿರ ಕೊಳಚೆ ನೀರು ಹರಿಯುವ ದೊಡ್ಡಮೋರಿ ಇದೆ. ಈ ಕೊಳಚೆ ನೀರು ದಕ್ಷಿಣಾಭಿಮುಖವಾಗಿ ದಟ್ಟವಾಗಿರುವ ಪೊದೆ, ಗಿಡ, ಮರ ಇರುವ ಹಳ್ಳದ ಕಡೆ ಹರಿಯುತ್ತಿರುತ್ತದೆ. ಗೊಬ್ಬಳಿ ಮರ ಎಡಕ್ಕೆ (ವಿವೇಕಾನಂದನಗರ ಪಕ್ಕ) ನಾಗಮ್ಮ ಕಲ್ಯಾಣ ಮಂಟಪ ಕಡೆಗೆ ರಸ್ತೆಯಿದ್ದು, ಬಲಭಾಗದ ಈ ರಸ್ತೆ ಉದ್ದಕ್ಕೂ ಜನರು ಕಸ ಇತ್ಯಾದಿ ತಂದು ಹಾಕುತ್ತಿರುತ್ತಾರೆ. ನಾಗಮ್ಮ ಕಲ್ಯಾಣ ಮಂಟಪ ಕಡೆಯಿಂದಲೂ ಕೊಳಚೆ ನೀರು ದೊಡ್ಡಮೋರಿ ಕಡೆಗೆ ಹರಿಯುತ್ತದೆ. ಈ ಕಲ್ಯಾಣ ಮಂಟಪ ಮುಂಭಾಗ ತಗ್ಗು ಪ್ರದೇಶವಾಗಿದ್ದು, ಮನೆಗಳು ಮತ್ತು ಎಲ್ಐಜಿ ಮನೆಗಳು ಕೊಳಚೆ ನೀರು ಹರಿಯುವ ದೊಡ್ಡಮೋರಿ ಹತ್ತಿರದಲ್ಲಿರುತ್ತವೆ. ಇದರಿಂದ ಸೊಳ್ಳೆ, ಜಿರಲೆ, ಕಪ್ಪೆ, ಇತರ ಪ್ರಾಣಿ–ಪಕ್ಷಿಗಳ ಉಪಟಳದ ಜೊತೆಗೆ ದುರ್ವಾಸನೆಯಿಂದ ಕೂಡಿದ್ದು, ರೋಗ–ರುಜಿನಾದಿಗಳಿಗೆ ಅವಕಾಶವಿರುತ್ತದೆ. ಅದರಲ್ಲೂ ಕೋವಿಡ್ ಬರುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಮುಂದಾಲೋಚನೆಯಿಂದ ಸ್ವಚ್ಛತೆಯ ಕಡೆಗೆ ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯಕ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಸ್ವಚ್ಛತೆಯ ಕಡೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ.

–ಬೆಸಗರಹಳ್ಳಿ ವೆಂಕಟರಾಜು, ವಿವೇಕಾನಂದನಗರ, ಮೈಸೂರು.


ಡಾ. ಬಿ.ಆರ್. ಅಂಬೇಡ್ಕರ್ ಭವನ ಶೀಘ್ರ ಪೂರ್ಣಗೊಳಿಸಿ

ಮಾನ್ಯರೆ,

ಮೈಸೂರಿನಲ್ಲಿ ನಿರ್ಮಾಣ ಹಂತದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನವನ್ನು (ಚಾಮುಂಡಿ ಗೆಸ್ಟ್ ಹೌಸ್ ಹಿಂಭಾಗ) ಅರ್ಧಕ್ಕೆ ನಿಲ್ಲಿಸಲಾಗಿದೆ. ಭವನ ಕಟ್ಟುವುದಕ್ಕೆ ಪ್ರಾರಂಭ ಮಾಡಿ ಸುಮಾರು 15 ವರ್ಷವಾದರೂ ಭವನ ಪೂರ್ಣಗೊಳಿಸಿಲ್ಲ. ಏಕೆ ಅಂತ ಗೊತ್ತಿಲ್ಲ. ಸರ್ಕಾರದಿಂದ ಅನುದಾನ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಭವನದ ಸುತ್ತಮುತ್ತ ಗಿಡಗಂಟಿ, ಪಾರ್ಥೇನಿಯಂ ಗಿಡಗಳು ಬೆಳೆದು ವಿಷಜಂತುಗಳ ಆವಾಸ ಸ್ಥಾನವಾಗಿದೆ. ಕಾಂಪೌಂಡ್ ಹತ್ತಿರ ಬಂದು ಮೂತ್ರ ವಿಸರ್ಜನೆ ಮಾಡುತ್ತಾರೆ. ಅನೈತಿಕ ವ್ಯವಹಾರ ನಡೆಯುತ್ತಿದೆ. ಕಟ್ಟಡ ಪಾಳು ಭವನದ ರೀತಿ ನಿಂತಿರುತ್ತದೆ. ಸರ್ಕಾರ, ಜಿಲ್ಲಾಡಳಿತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ನಗರ ಪಾಲಿಕೆ ಭವನದ ಬಗ್ಗೆ ಕಾಳಜಿಯನ್ನು ತೆಗೆದುಕೊಂಡಿಲ್ಲ. ಮಾನವತಾವಾದಿ, ಸಾಮಾಜಿಕ ಹರಿಕಾರ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಭವನವನ್ನು ಪೂರ್ಣಗೊಳಿಸಿ ಅವರಿಗೆ ಗೌರವ ಸಲ್ಲಿಸಬೇಕೆಂದು ಈ ಮೂಲಕ ಮನವಿ.

–ಎಸ್. ಶಿವಪ್ಪ, ಜನಪರ ವೇದಿಕೆ ಅಧ್ಯಕ್ಷ, ಮೈಸೂರು.

ಗಮ್ಯದೆಡೆಗೆ ಗಮಕ ಗಾಯಕ



ಮಾನ್ಯರೆ,

ಮತ್ತೂರು ಭಾರತದ ಸಂಸ್ಕೃತ ಭಾಷೆ ಮಾತಾಡುವ ಗ್ರಾಮವಾಗಿದ್ದು, ಪಕ್ಕದ ಹೊಸಹಳ್ಳಿ ಗ್ರಾಮ ಗಮಕ ಗಾಯನಕ್ಕೆ ಪ್ರಸಿದ್ಧವಾಗಿದೆ. ಮತ್ತೂರು ಮತ್ತು ಹೊಸಹಳ್ಳಿ ಗ್ರಾಮಗಳಲ್ಲಿ ಸಂಕೇತಿ ಭಾಷೆ ಮಾತನಾಡುವ ಬ್ರಾಹ್ಮಣ ಪಂಗಡದ ಜನರಿರುವ ವೇದದ ಗ್ರಾಮವೆಂದು ಕರೆದರೂ ತಪ್ಪಾಗಲಾರದು.

ಮತ್ತೂರು ಕೃಷ್ಣಮೂರ್ತಿ ಮತ್ತು ಹೊಸಹಳ್ಳಿ ಕೇಶವಮೂರ್ತಿ ಇಬ್ಬರು ಈ ಗ್ರಾಮಗಳನ್ನು ಜಗತ್ತಿನಲ್ಲಿ ಪ್ರಸಿದ್ಧಪಡಿಸಿದರು. ಪ್ರಸ್ತುತ ಇಬ್ಬರು ನಮ್ಮನ್ನು ಅಗಲಿದ್ದಾರೆ. ಇತ್ತೀಚೆಗೆ ಗಮಕ ಗಾಯಕ ಹೊಸಹಳ್ಳಿ ಕೇಶವಮೂರ್ತಿಯವರ ನಿಧನರಾಗಿದ್ದು, ಗಮಕ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.


ಗಮಕ ಗಾಯಕ ಹೆಚ್. ಆರ್. ಕೇಶವಮೂರ್ತಿ ವಿಧಿವಶರಾಗಿದ್ದು, ಇವರು 1934ರ ಫೆಬ್ರವರಿ 22ರಂದು ಶಿವಮೊಗ್ಗದ ಹೊಸಹಳ್ಳಿ ಗ್ರಾಮದಲ್ಲಿ ರಾಮಾಶಾಸ್ತ್ರಿ, ತಾಯಿ ಲಕ್ಷ್ಮೀ ದೇವಮ್ಮ ದಂಪತಿಗೆ ಜನಿಸಿದರು. ತಂದೆ ಮತ್ತು ತಾಯಿ ಹಾಡುತ್ತಿದ್ದ ಪುರಾಣಗಳಿಂದ ಪ್ರೇರಿತರಾಗಿ ಕೇಶವಮೂರ್ತಿ ಗಮಕದ ಕಡೆ ಆಸಕ್ತಿ ಬೆಳೆಸಿಕೊಂಡರು. 16ನೇ ವಯಸ್ಸಿನಲ್ಲಿಯೇ ಹೊಸಹಳ್ಳಿ ಗ್ರಾಮದಲ್ಲಿ ವೆಂಕಟೇಶಯ್ಯ ಅವರ ಬಳಿ ಗಮಕ ವಾಚನ ಕಲಿಯಲು ಆರಂಭಿಸಿದರು. ರಾಮಾಯಣ, ಮಹಾಭಾರತ, ಕನ್ನಡ ಮತ್ತು ಸಂಸ್ಕೃತದ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕರ್ನಾಟಕ ಮಾತ್ರವಲ್ಲದೇ ವಿದೇಶಗಳಲ್ಲಿಯೂ ಗಮನ ವಾಚನ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ ಹೆಚ್. ಆರ್. ಕೇಶವಮೂರ್ತಿ ಅವರ ಗಮಕ ವಚನ ಕಾರ್ಯಕ್ರಮಕ್ಕೆ ಅಪಾರ ಅಭಿಮಾನಿಗಳಿದ್ದರು.

ಗಮಕ ಗಾಯನ ಕ್ಷೇತ್ರದಲ್ಲಿ ಹೆಚ್. ಆರ್. ಕೇಶವಮೂರ್ತಿ ಸಾಧನೆಗೆ ಅಪಾರ ಪ್ರಶಸ್ತಿಗಳು ಬಂದಿವೆ. ಕುಮಾರವ್ಯಾಸ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳು ಅವರ ಮುಡಿಗೇರಿವೆ. ಪದ್ಮಶ್ರೀ ಪಶಸ್ತಿಯನ್ನು ಸಹ ನೀಡಿ ಗೌರವಿಸಲಾಗಿದೆ.

ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಸೇರಿದಂತೆ ಹಲವು ಕೃತಿಗಳನ್ನು ಹೆಚ್ಚಿನ ಸಂಖ್ಯೆಯ ಕಲಾರಸಿಕರಿಗೆ ತಲುಪಿಸಿ, ಗಮಕ ಶೈಲಿಯಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಹಿರಿಯ ಕಲಾವಿದರ ಕೊಡುಗೆ ಅಪಾರ.

ಉದಯ ವಾಹಿನಿಯಲ್ಲಿ ಮತ್ತೂರು ಕೃಷ್ಣಮೂರ್ತಿ ಮತ್ತು ಹೊಸಹಳ್ಳಿ ಕೇಶವ ಮೂರ್ತಿ ಇಬ್ಬರ ರಾಮಾಯಣ ಮತ್ತು ಮಹಾಭಾರತದ ಪ್ರವಚನ ಕರ್ನಾಟಕದಲ್ಲಿ ಮನೆ ಮಾತಾಗಿತ್ತು. ಹೊಸಹಳ್ಳಿ ಕೇಶವ ಮೂರ್ತಿಯವರ ಆಗಲಿಕೆ ಕರ್ನಾಟಕದ ಗಮಕ ಕಲೆಗೆ ಅಪಾರ ನಷ್ಟವಾಗಿದ್ದು, ಅವರ ಅತ್ಮಕ್ಕೆ ಶಾಂತಿ ಸಿಗಲೆಂದು ಅರೈಸೋಣ.

–ರಾಸುಮ ಭಟ್, ಚಿಕ್ಕಮಗಳೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ


ನಾವಂದುಕೊಂಡಂತೆ ಇದ್ದು ಬಿಡೋಣ...!!

ನಮಗೆಲ್ಲರಿಗೂ ನಮ್ಮದೇ ಆದ ವಿಶಿಷ್ಟವಾದ ವ್ಯಕ್ತಿತ್ವ ಇರು ತ್ತದೆ. ಅದು ನಮ್ಮ ಸ್ವಭಾವದಂತೇ ಇರುತ್ತದೆ. ಅದರಂತೆ ನಡೆಯಲು ನಾವು ಯಾವುದೇ ಕಷ್ಟಪಡಬೇಕಾಗಿಲ್ಲ. ಅದು ಸಹಜವಾಗಿ ನಮ್ಮ ನಡವಳಿಕೆಯೇ ಆಗಿಬಿಟ್ಟಿರುತ್ತದೆ. ಅದರಲ್ಲಿ ಕಪಟ ಇರುವುದಿಲ್ಲ, ಕೃತಕತೆ ಇರುವುದಿಲ್ಲ. ಏಕೆಂದರೆ ಅದು ನಮಗೆ ಸ್ವಾಭಾವಿಕವಾಗಿ ಬಂದಿರುವಂತಹುದು. ಹಾಗೆ ನೋಡಿದರೆ ಅದನ್ನು ಬದಲಿಸಿಕೊಳ್ಳಬೇಕಾದ ಅಥವಾ ಮಾರ್ಪಡಿಸಿಕೊಳ್ಳಬೇಕಾದ ಆಗತ್ಯವೂ ಇರುವುದಿಲ್ಲ. ಆದರೆ ಕೆಲವರಲ್ಲಿ ಅಳುಕಿನ ಸ್ವಭಾವ ಇರುತ್ತದೆ. ಅವರಿಗೆ ತಮ್ಮಂತೆ ತಾವಿರಲು ಇಷ್ಟವಿದ್ದರೂ ಹಾಗೆ ಇರಲಾರರು. ಅವರಿಗೆ ನಾನು ಹೀಗೆ ಮಾಡುವುದರಿಂದ ಯಾರಾದರೂ ಅಪಾರ್ಥ ಮಾಡಿಕೊಂಡು ಬಿಡುತ್ತಾರೋ ಏನೋ ಎಂಬ ಅಳಕು. ಹಾಗಾಗಿ ಅವರು ತಮ್ಮನ್ನು ಬದಲಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಗೊಂದಲದಲ್ಲಿ ಯಾರನ್ನೋ ಅನುಕರಣೆ ಮಾಡಲು ಹೋಗುತ್ತಾರೆ. ಹಾಗೆ ಬೇರೊಬ್ಬರ ನಡವಳಿಕೆ, ಇವರು ಗಮನಿಸಿದಂತೆ, ಇವರಿಗೆ ಇಷ್ಟವಾಗಿರುತ್ತದೆ. ಅದೇ ರೀತಿ ನಾನೂ ನಡೆದುಕೊಂಡರೆ ಇತರರು ನನ್ನನ್ನು ಸಹ ಮೆಚ್ಚಬಹುದು ಎಂದು ಭಾವಿಸುತ್ತಾರೆ. ಇದರಿಂದಾಗಿ ಇವರು ಒಂದು ರೀತಿ ಎಡಬಿಡಂಗಿತನವನ್ನು ಬೆಳೆಸಿಕೊಂಡುಬಿಡುತ್ತಾರೆ.

ಒಬ್ಬರಿದ್ದ ಹಾಗೆ ಇನ್ನೊಬ್ಬರಿರುವುದಿಲ್ಲ. ಈಗ ಪ್ರಪಂಚದ ಜನಸಂಖ್ಯೆ ಅಂದಾಜು ಎಂಟು ಬಿಲಿಯನ್‌ನಷ್ಟಾಗಿದೆ. ಅದರಲ್ಲಿ ಒಬ್ಬರಂತೆ ಒಬ್ಬರು ಇಲ್ಲ. ಎಲ್ಲರ ಹೆಬ್ಬೆರಳ ಗುರುತುಗಳೂ ಬೇರೆಬೇರೆಯಾಗಿರುತ್ತವೆ. ನೋಡಲು ಅಲ್ಪಸ್ವಲ್ಪ ಹೊಂದಾಣಿಕೆ ಇದ್ದಂತೆ ಕಂಡುಬಂದರೂ ಒಬ್ಬರಂತೆ ಇರುವುದಿಲ್ಲ. ಅಷ್ಟೇಕೆ, ಅವಳಿ ಮಕ್ಕಳೂ ಶೇಕಡಾ ನೂರಕ್ಕೆ ನೂರು ಒಬ್ಬರಂತೆ ಒಬ್ಬರು ಇರುವುದಿಲ್ಲ. ಹೊರನೋಟಕ್ಕೆ ಇಬ್ಬರೂ ಒಂದೇ ರೀತಿ ಅನಿಸಿದರೂ, ಅವರ ನಡುವೆ ಸ್ವಭಾವ ವೈರುಧ್ಯ ಸಾಕ್ಷಿರುತ್ತದೆ. ಒಬ್ಬರಿಗೆ ಸಿಹಿ ಇಷ್ಟವಾದರೆ, ಮತ್ತೊಬ್ಬರಿಗೆ ಸಿಹಿ ಇಷ್ಟವಾಗದು. ಒಬ್ಬರಿಗೆ ಹಾಡು ಇಷ್ಟವಾದರೆ, ಮತ್ತೊಬ್ಬರಿಗೆ ನೃತ್ಯ ಇಷ್ಟವಾಗಬಹುದು. ಒಬ್ಬರು ಬರಹಗಾರರಾಗಲು ಇಚ್ಛಿಸಿದರೆ, ಮತ್ತೊಬ್ಬರು ಕಲಾವಿದರಾಗಲು ಬಯಸಬಹುದು. ಅವರುಗಳ ಬಟ್ಟೆ ಮಾತ್ರ ಒಂದೇ ರೀತಿ ಇರಬಹುದಾದರೂ ಸ್ವಭಾವ ಮಾತ್ರ ಶೇಕಡಾ ನೂರು ಒಂದೇ ರೀತಿ ಇರುವುದಿಲ್ಲ. ಆಸ್ತಿಕರು ಇದನ್ನು ಭಗವಂತನ ಜಾಣತನ ಎನ್ನಬಹುದು, ನಾಸ್ತಿಕರು ಇದು ಪ್ರಕೃತಿ ಲೀಲೆ ಎನ್ನಬಹುದು. ಆದರೆ ಭಿನ್ನತೆ ಮಾತ್ರ ಇರುತ್ತದೆ. ಪ್ರತಿಯೊಬ್ಬರೂ ನೋಡಲು ಮಾತ್ರವಲ್ಲದೆ ಅಭಿರುಚಿ ಹಾಗೂ ಸ್ವಭಾವದಲ್ಲಿಯೂ ಭಿನ್ನತೆ ಇರುತ್ತದೆ. ಇದನ್ನು ಬದಲಿಸುವ ಅವಶ್ಯಕತೆ ಇರುವುದಿಲ್ಲ. ನಾವೂ ನಾವಾಗೇ ಇದ್ದರೆ ಚೆನ್ನ. ಇದರಲ್ಲಿ ಅನುಕರಣೆ ಬೇಕಾಗಿರುವುದಿಲ್ಲ.

ಇತ್ತೀಚೆಗೆ ಯಾವುದೋ ಸಿನಿಮಾದ ಹೀರೋ ತಲೆಗೂದಲು ಹೆಚ್ಚಾಗಿ ಬಿಟ್ಟಿದ್ದರು ಎಂದು, ಇಂದು ಅನೇಕ ಯುವಕರು ಅಡ್ಡಾದಿಡ್ಡಿ ಕೂದಲು ಬಿಟ್ಟು ರಸ್ತೆಯಲ್ಲಿ ಓಡಾಡುವುದನ್ನು ಕಾಣಬಹುದು. ಹಾಗೆಯೇ ಮತ್ತೊಬ್ಬ ಹೀರೋ ನೆತ್ತಿಯವರೆಗೆ ಕೂದಲು ಕತ್ತರಿಸಿಕೊಂಡು ನಂತರ ಹೆಚ್ಚು ಕೂದಲು ಬಿಟ್ಟಿದ್ದ. ಅನೇಕ ಯುವಕರಿಗೆ ಅದು ಅನುಕರಣೆಯ ಸಾಧನವಾಯಿತು. ಈಗ ರಸ್ತೆಯಲ್ಲಿ ಓಡಾಡುವ ಯುವಕರನ್ನು ನೋಡಿ, ಚಿತ್ರವಿಚಿತ್ರವಾಗಿ ತಲೆಗೂದಲು ಬಿಟ್ಟು ಕೊಂಡು ಓಡಾಡುತ್ತಾರೆ. ಅವರನ್ನು ಕಂಡಾಗ ಒಂದು ರೀತಿ ರೌಡಿಗಳನ್ನು ಕಂಡಂತೆ ಭಾಸವಾಗುತ್ತದೆ. ಆದರೆ ಅವರು ಸ್ವಭಾವದಲ್ಲಿ ಹಾಗಿರುವುದಿಲ್ಲ. ಯಾರದ್ದೋ ಅನುಕರಣೆ ಮಾಡಲು ಹೋಗಿ ಹೀಗಾಗಿರುತ್ತಾರೆ. ಹೀಗಿರುವುದು ಸಭ್ಯತೆ ಅಲ್ಲ ಎಂದು ಅವರಿಗೆ ಅನ್ನಿಸುವುದೇ ಇಲ್ಲ, ಏಕೆಂದರೆ ಆ ಚಲನಚಿತ್ರದ ಹೀರೋ ಹೀಗೇ ಇದ್ದರಲ್ಲಾ, ಅದನ್ನು ಜನರು ಇಷ್ಟಪಟ್ಟಿದ್ದರಲ್ಲಾ!! ಹಾಗಾಗಿ ಜನರು ನನ್ನನ್ನೂ ಇಷ್ಟಪಡಬಹುದು ಎಂದು ಅವರು ಭ್ರಮಿಸಿ, ಕೊನೆಗೆ ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಅದು ಬಿಟ್ಟು ನನ್ನಂತೆ ನಾನು ಎಂದಿದ್ದರೆ ಹೀಗಾಗುವುದಿಲ್ಲ.

ಯಾರೋ ರಸ್ತೆಯಲ್ಲಿ ತುಂಡು ಉಡುಗೆ ಹಾಕಿಕೊಂಡು ಬಂದರು ಎಂದರೆ, ಅದನ್ನು ನಾವು ಅನುಸರಿಸಬೇಕೆಂದಿಲ್ಲ. ನಮಗೆ ನಮ್ಮದೇ ಆದ ಸಭ್ಯ ಉಡುಪುಗಳಿವೆ. ಇಂದು ಇದು ಎಂತಹ ದುರಂತಕ್ಕೆ ತಂದಿದೆ ಎಂದರೆ ಹೆಣ್ಣುಮಕ್ಕಳೂ ತುಂಡು ಚೆಡ್ಡಿ ಹಾಕಿಕೊಂಡು ಮಾರುಕಟ್ಟೆಗೂ ಬರುತ್ತಾರೆ. ಅವರಿಗೆ ಆದರ್ಶ ಯಾರೋ ಗೊತ್ತಿಲ್ಲ!! ಮನೆಯಲ್ಲಿ ಹೇಗಾದರೂ ಇರಲಿ, ಆದರೆ ಹೊರಗೆ ಬಂದಾಗ ನಮ್ಮ ವೇಷಭೂಷಣ ಸಮಾಜಕ್ಕೆ ಹೊಂದಾಣಿಕೆಯಾಗುವಂತಿರಬೇಡವೇ?



ಜೆ ಎನ್ ಟಾಟಾ



ಸ್ವಾಮಿ ವಿವೇಕಾನಂದ

> **ನಮ್ಮ ವೈವಾಹಿಕ ವಿಧಾನ ಅನುಸರಿಸಿ ಇಲ್ಲಿನ ಸಂಪ್ರದಾಯದಂತೆ ಮದುವೆಯಾಗಲು ವಿದೇಶಿಯರು ಬಯಸುತ್ತಾರೆ. ಇಲ್ಲಿನ ಹೆಣ್ಣುಮಕ್ಕಳಂತೆ ಸೀರೆಯುಟ್ಟು, ತಲೆ ತುಂಬಾ ಹೂವನ್ನು ಮುಡಿದು, ಆಣೆಯಗಲದ ಕುಂಕುಮ ಇಟ್ಟುಕೊಂಡು ಸಂಭ್ರಮಿಸುತ್ತಾರೆ. ಇಲ್ಲಿನ ವಿಧಾನದಂತೆ ಮದುವೆಯಾಗುತ್ತಾರೆ. ಆದರೆ ನಾವು, ನಮ್ಮ ಸಂಸ್ಕೃತಿ ಒಂದು ರೀತಿಯ ಗೊಡ್ಡು ಆಚರಣೆ ಎನಿಸಿ, ವಿದೇಶಿಯರಂತೆ ಇರಲು ಬಯಸುತ್ತೇವೆ. ಅದನ್ನು ಆಧುನಿಕ ಸಂಸ್ಕೃತಿ ಎಂದು ಭಾವಿಸುತ್ತೇವೆ. ಎಂತಹ ವಿಚಿತ್ರವಲ್ಲವೇ?**

ನಾವು ಅನುಸರಿಸುವುದಾದರೆ ಒಳ್ಳೆಯದನ್ನು ಅನುಸರಿಸೋಣ. ಯಾರೋ ಒಬ್ಬ ದಾನಿ ಇದ್ದಾನೆ, ಅವನು ತನಗಿಂತ ಸಮಾಜದ ಬಗ್ಗೆಯೇ ಯೋಚಿಸುತ್ತಾನೆ ಎಂದರೆ, ಅವರನ್ನು ಅನುಕರಿಸಿದರೆ ಆದರ್ಶ ಎನಿಸಿಕೊಳ್ಳುತ್ತದೆ. ಸಮಾಜದಲ್ಲಿ ನಾವು ನಮಗಿಷ್ಟವಾದಂತೆ ಇರಲು ಯಾವುದೇ ಕಾನೂನು ಬೇಕಾಗಿಲ್ಲ. ಸಮಾಜಕ್ಕೆ ವಿಹಿತವಲ್ಲದ ವೇಷಭೂಷಣ ಹಾಕಿದರೆ ಸಮಾಜ ಅವರನ್ನು ಬಹಿಷ್ಕರಿಸುವುದಿಲ್ಲ, ನಿಜ. ಆದರೆ ನಮ್ಮ ವ್ಯಕ್ತಿತ್ವವನ್ನು ಸಮಾಜ ಕಾಣುವ ರೀತಿ ಬದಲಾಗಿರುತ್ತದೆ. ಇದನ್ನು ಫ್ಯಾಷನ್ ಎಂದು ಪರಿಗಣಿಸಲಾಗುವುದಿಲ್ಲ. ಅದನ್ನು ನಾವು ಫ್ಯಾಶನ್ ಎಂದುಕೊಂಡಿರುತ್ತೇವೆ. ಅದು ಸರಿಯಲ್ಲ ಎಂದು ಯಾರಾದರೂ ಆತ್ಮೀಯರು ಹೇಳಿದಾಗಲಾದರೂ ಅದನ್ನು ಬದಲಿಸಿಕೊಳ್ಳಬೇಕಾಗುತ್ತದೆ. ನಾವು ಯಾರಂತೆಯೋ ಇರಬೇಕಾಗಿಲ್ಲ, ನಾವು ನಮ್ಮಂತೆಯೇ ಇರಬೇಕಾಗುತ್ತದೆ.

ನಮಗೆ ನಮ್ಮ ದೇಶದ ಬಗ್ಗೆ ಅಭಿಮಾನ ಇರಬೇಕಾದದ್ದು ಬಹಳ ಮುಖ್ಯ. ಆದರೆ ಅದೇಕೋ ನಮಗೆ ವಿದೇಶೀ ಒಲವು. ಹಾಗೆ ನೋಡಿದರೆ ಅನೇಕ ವಿದೇಶಿಯರು ಇಂದು ನಮ್ಮ ಸಂಸ್ಕೃತಿಯನ್ನು ಇಷ್ಟಪಟ್ಟು ನಮ್ಮನ್ನು ಅನುಕರಿಸಲು ಬಯಸಿ ಭಾರತಕ್ಕೆ ಬರುತ್ತಾರೆ. ನಮ್ಮ ಯೋಗ ಅವರಿಗೆ ವಿಶೇಷ, ನಮ್ಮ ಭರತನಾಟ್ಯ, ನಮ್ಮ ವಾದ್ಯ, ನಮ್ಮ ಉಡುಪು, ನಮ್ಮ ಆಹಾರ ಪದ್ಧತಿ, ನಮ್ಮ ವೈವಾಹಿಕ ಜೀವನ ಅವರಿಗೆ ವಿಶೇಷ ಎಂದು ಕಂಡುಬಂದು ಅವರು ಅದನ್ನು ಅನುಸರಿಸಲು ಕಾತರಿಸುತ್ತಾರೆ. (ನಾವು ಚೈನೀಸ್ ಫುಡ್ ಎಂದು ಹಾತೊರೆಯುತ್ತೇವೆ!). ನಮ್ಮ ವೈವಾಹಿಕ ವಿಧಾನ ಅನುಸರಿಸಿ ಇಲ್ಲಿನ ಸಂಪ್ರದಾಯದಂತೆ ಮದುವೆಯಾಗಲು ವಿದೇಶಿಯರು ಬಯಸುತ್ತಾರೆ. ಇಲ್ಲಿನ ಹೆಣ್ಣುಮಕ್ಕಳಂತೆ ಸೀರೆಯುಟ್ಟು, ತಲೆ ತುಂಬಾ ಹೂವನ್ನು ಮುಡಿದು, ಆಣೆಯಗಲದ ಕುಂಕುಮ ಇಟ್ಟುಕೊಂಡು ಸಂಭ್ರಮಿಸುತ್ತಾರೆ. ಇಲ್ಲಿನ ವಿಧಾನದಂತೆ ಮದುವೆಯಾಗುತ್ತಾರೆ. ಆದರೆ ನಾವು, ನಮ್ಮ ಸಂಸ್ಕೃತಿ ಒಂದು ರೀತಿಯ ಗೊಡ್ಡು ಆಚರಣೆ ಎನಿಸಿ, ವಿದೇಶಿಯರಂತೆ ಇರಲು ಬಯಸುತ್ತೇವೆ. ಅದನ್ನು ಆಧುನಿಕ ಸಂಸ್ಕೃತಿ ಎಂದು ಭಾವಿಸುತ್ತೇವೆ. ಎಂತಹ ವಿಚಿತ್ರವಲ್ಲವೇ? ಅವರು ತಮ್ಮ ಸಂಸ್ಕೃತಿಗಿಂತ ಭಾರತೀಯ ಸಂಸ್ಕೃತಿ ಚೆನ್ನ ಎಂದು ಅದನ್ನು ಅನುಕರಿಸಲು ಬಯಸಿದರೆ, ಅವರೇ ಇಷ್ಟಪಡದ ಸಂಸ್ಕೃತಿಯನ್ನು ಕಂಡು ನಾವು ಅವರನ್ನು ಅನುಕರಿಸಲು ಬಯಸುತ್ತೇವೆ. ಅವರು ಬಿಟ್ಟ ಸಂಸ್ಕೃತಿ ನಮಗೆ ಆದರ್ಶವಾಗಿ ಕಾಣುತ್ತದೆ. ನಮಗೆ ನಮ್ಮದು ಎಂಬುದರ ಬಗ್ಗೆ ಯಾವಾಗಲೂ ಹೆಮ್ಮೆ ಇರಬೇಕು, ನಾವು ಇರುವ, ಆಲೋಚಿಸುವ ವಿಧಾನದ ರೀತಿ ನಮ್ಮದ್ದೇ ಆಗಿರಬೇಕು.

ಇದಕ್ಕೆ ಒಂದು ಮಹಾನ್ ಉದಾಹರಣೆ ಇಲ್ಲಿದೆ. ಒಮ್ಮೆ ಹೆಸರಾಂತ ಉದ್ಯಮಿ ಜೆಮ್‌ಶೆಡ್‌ಜೀ ಟಾಟಾ ಹಡಗಿನಲ್ಲಿ ಭಾರತದಿಂದ ಜರ್ಮನಿಗೆ ಪ್ರಯಾಣಿಸುತ್ತಿದ್ದರು. ಅವರು ಹಡಗಿನ ಮೇಲ್ಭಾಗದಲ್ಲಿ ಪ್ರಥಮ ದರ್ಜೆ ವಿಭಾಗದಲ್ಲಿ ಇದ್ದರು. ಆ ಹಡಗಿನ ಕೆಳಭಾಗದಲ್ಲಿ ಏನೋ ವಿಶೇಷ ಚಟುವಟಿಕೆ ನಡೆಯುತ್ತಿರುವುದು ಅವರ ಗಮನಕ್ಕೆ ಬಂದಿತು. ಈ ಬಗ್ಗೆ ಅವರು ಹಡಗಿನ ಸಿಬ್ಬಂದಿಯನ್ನು ವಿಚಾರಿಸಿದರು. ಆಗ ತಿಳಿದುಬಂದಿದ್ದು ಆ ಹಡಗಿನ ಕೆಳ ಅಂತಸ್ತಿನ ಎರಡನೇ ದರ್ಜೆಯಲ್ಲಿ ಸ್ವಾಮಿ ವಿವೇಕಾನಂದರು ಪ್ರಯಾಣಿಸುತ್ತಿದ್ದಾರೆ ಎಂದು. ಜೆ ಎನ್ ಟಾಟಾರವರು ವಿವೇಕಾನಂದರ ಬಗ್ಗೆ ಕೇಳಿದ್ದರು. ಕುತೂಹಲದಿಂದ ಅವರು ವಿವೇಕಾನಂದರನ್ನು ಭೇಟಿಯಾಗಲು ಬಯಸಿದರು. ವಿವೇಕಾನಂದರಿಗೂ ಟಾಟಾರವರ ಬಗ್ಗೆ ಗೊತ್ತಿತ್ತು. ಏಕೆಂದರೆ ಅವರು ಭಾರತದ ದೊಡ್ಡ ಉದ್ದಿಮೆದಾರರಾಗಿದ್ದರು. ಟಾಟಾರವರು ವಿವೇಕಾನಂದರನ್ನು ಭೇಟಿ ಮಾಡಿದರು. ಅದು ಅವರಿಬ್ಬರ ಪ್ರಥಮ ಭೇಟಿ. ಇಬ್ಬರೂ ಹಲವು ವಿಷಯಗಳ ಬಗ್ಗೆ ಮಾತನಾಡಿದರು. ಈಗ ಟಾಟಾ ಜರ್ಮನಿಗೆ ಹೋಗುತ್ತಿರುವ ಕಾರಣವನ್ನು ವಿವೇಕಾನಂದರಿಗೆ ತಿಳಿಸಿದರು. 'ನಾನು ಭಾರತದ ಹಲವು ಭಾಗದಿಂದ ಸಂಗ್ರಹಿಸಿದ ಮಣ್ಣನ್ನು ತೆಗೆದುಕೊಂಡು ಜರ್ಮನಿಗೆ ಹೋಗುತ್ತಿರುವೆ. ಈ ಮಣ್ಣುಗಳ ಪೈಕಿ ಯಾವ ಮಣ್ಣಿನಲ್ಲಿ ಕಬ್ಬಿಣದ ಅದಿರು ಹೆಚ್ಚಾಗಿ ದೊರಕುತ್ತದೆ, ಯಾವ ಮಣ್ಣಿನಿಂದ ಕಬ್ಬಿಣದ ಅದಿರಿನ ಹೆಚ್ಚಿನ ಉತ್ಪಾದನೆ ಸಾಧ್ಯ ಎಂಬ ಬಗ್ಗೆ ಪರೀಕ್ಷೆಗಾಗಿ ಈ ಮಣ್ಣುಗಳನ್ನು ತೆಗೆದುಕೊಂಡು ಹೋಗುತ್ತಿರುವೆ ಎಂದರು. ಇದಕ್ಕೆ ವಿವೇಕಾನಂದರು, ನೀವು ಈ ಮಣ್ಣಿನಲ್ಲಿ ಕಬ್ಬಿಣದ ಅಂಶವಿದೆಯೇ ಎಂದು ಪರಿಶೀಲಿಸಲು ಜರ್ಮನರ ಬಳಿ ಹೋಗುತ್ತಿದ್ದೀರಿ. ನಿಮಗೆ ಜರ್ಮನರ ಬಗ್ಗೆ ಅಷ್ಟು ನಂಬಿಕೆ ಇದೆಯೇ. ಅವರು ಇದನ್ನು ಪರಿಶೀಲಿಸಿ ನಿಮಗೆ ನಿಜವನ್ನು ಹೇಳುತ್ತಾರೆ ಎಂದು ಭಾವಿಸುವಿರಾ. ಯಾವುದೇ ಯುರೋಪಿಯನ್ನರು ಬಲಿಷ್ಠವಾದ ಹಾಗೂ ಕಬ್ಬಿಣದ ಸಶಕ್ತ ಭಾರತವನ್ನು ಇಷ್ಟಪಡುವುದಿಲ್ಲ. ಈ ಮಣ್ಣಿನಲ್ಲಿ ಹೆಚ್ಚಿನ ಕಬ್ಬಿಣದ ಅಂಶವಿದ್ದರೂ ಅವರು ನಿಮಗೆ ನಿಜ ಹೇಳಲಾರರು" ಎಂದರು. ಟಾಟಾರವರಿಗೂ ಅವರ ಹಿಂದಿನ ಅನುಭವದ ಮೇಲೆ ಇವರು ಹೇಳುತ್ತಿರುವುದು ನಿಜವೆನ್ನಿಸಿತು. ವಿವೇಕಾನಂದರು ಮಾತು ಮುಂದುವರೆಸುತ್ತಾ, ಇದಕ್ಕೆ ಪರಿಹಾರವೆಂಬಂತೆ, ಈ ರೀತಿ ಸಂಶೋಧನೆಯನ್ನು ಭಾರತದಲ್ಲಿಯೇ ಮಾಡಲು ಯಾವುದಾದರೂ ಸಂಸ್ಥೆಯನ್ನು ನೀವೇ ಏಕೆ ಸ್ಥಾಪಿಸಬಾರದು. ಅದಕ್ಕಾಗಿ ಒಂದು ಕಾಲೇಜನ್ನೂ ಆರಂಭಿಸಬಹುದಲ್ಲವೇ.

ನಮ್ಮ ಭಾರತೀಯ ಯುವಕರನ್ನು ಈ ದಿಸೆಯಲ್ಲಿ ಏಕೆ ತಯಾರು ಮಾಡಬಾರದು. ಇದರಿಂದ ನಮ್ಮ ದೇಶಕ್ಕೂ ಅನುಕೂಲವಲ್ಲವೇ. ತಕ್ಷಣಕ್ಕೆ ಇದು ಕಾರ್ಯಸಾಧ್ಯ ಎನಿಸದಿರಬಹುದು, ಆದರೆ ಮುಂದೆ ನೀವು ಈ ಕಾರಣಕ್ಕೆ ಜರ್ಮನಿಗೆ ಹಲವು ಬಾರಿ ಹೋಗುವುದನ್ನು ತಪ್ಪಿಸಬಹುದು. ಅಲ್ಲದೆ ನಿಜವನ್ನು ಇಲ್ಲೇ ಕಂಡುಕೊಳ್ಳಬಹುದು. ಜರ್ಮನರು ಹೇಳುವುದನ್ನು ನಂಬಲು ಅರ್ಹವೇ ಅಲ್ಲವೇ ಎಂದು ಚಿಂತಿಸುವ ಬದಲು ನಮ್ಮ ದೇಶದವರು ನಿಜವನ್ನೇ ಹೇಳುವುದರಿಂದ ಅನುಕೂಲವಲ್ಲವೇ. ನೀವು ಈ ಬಗ್ಗೆ ಮೈಸೂರು ಮಹಾರಾಜರನ್ನು ಸಂಪರ್ಕಿಸಿ, ಅವರು ನಿಮಗೆ ಸಹಾಯ ಮಾಡಬಲ್ಲರು ಎಂದರು. ಟಾಟಾ ಭಾರತಕ್ಕೆ ಮರಳಿ ಬಂದ ಮೇಲೆ ಮೈಸೂರು ಅರಸರಾಗಿದ್ದ ಚಾಮರಾಜ ಒಡೆಯರ್ ಅವರನ್ನು ಭೇಟಿಯಾದರು. ಮಹಾರಾಜರು ಅವರನ್ನು ನಿರಾಸೆಗೊಳಿಸಲಿಲ್ಲ. ಬೆಂಗಳೂರಿನಲ್ಲಿ ಅವರ ಸಂಶೋಧನಾ ಚಟುವಟಿಕೆ ಹಾಗೂ ಕಾಲೇಜು ಸ್ಥಾಪಿಸಲು 370 ಎಕರೆ ಜಾಗ ನೀಡಿದರು. ಅದೇ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆ 'ದಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್' (IISC). ಹೀಗೆ ಇಬ್ಬರು ದೇಶ ಭಕ್ತರು ಸೇರಿದಾಗ ಹೊಸ ಶಕ್ತಿಯೇ ದೇಶದಲ್ಲಿ ನಿರ್ಮಾಣವಾಯಿತು. ಅದು ಭಾರತದ ಆಸ್ತಿಯೂ ಆಯಿತು. ಇದು ನಮ್ಮ ನಡವಳಿಕೆ.

ನಮ್ಮಲ್ಲಿ ಮನಸ್ಸಿದ್ದರೆ ಮಾರ್ಗ ಎಂಬ ಮಾತಿದೆ. ನಾವು ಹೇಗಿರಬೇಕೆಂದು ಯೋಚಿಸುತ್ತೇವೆಯೋ ಹಾಗೆ ನಮಗೆ ಮಾರ್ಗವೂ ದೊರಕುತ್ತದೆ. ನಾವು ನಮ್ಮತನದ ರೀತಿಯಲ್ಲಿ ಯೋಚಿಸಬೇಕು, ಅದನ್ನು ಸಾಧಿಸಲು ನಮ್ಮಂತೆಯೇ ಯೋಚಿಸುವವರನ್ನು ಗುರುತಿಸಿ, ಅವರೊಡನೆ ಸೇರಿದರೆ ಎಂತಹ ಅದ್ಭುತವನ್ನಾದರೂ ಮಾಡಿ ತೋರಿಸಬಹುದು. ಯಾರನ್ನೋ ಅನುಕರಣೆ ಮಾಡಲು ಹೋಗಿ ನಗೆಪಾಟಲಿಗೆ ಗುರಿಯಾಗುವುದಕ್ಕಿಂತ ನಮ್ಮ ಆಲೋಚನೆ ಹಾಗೂ ಕರ್ತೃತ್ವ ಶಕ್ತಿಯಂತೆ ನಡೆದುಕೊಂಡರೆ ಬಹಳಷ್ಟು ಸಾಧಿಸಬಹುದು.

ವಿವೇಕಾನಂದರ ಮೈಸೂರು ಭೇಟಿಯ ಸನ್ನಿವೇಶ ಆಧಾರಿತ 'ಮೈಸೂರಿಗೆ ವಿವೇಕ ಬಾಂಧವ್ಯ' ನಾಟಕ ಅದ್ಭುತ ಪ್ರದರ್ಶನ

ರಾಮಕೃಷ್ಣ ವಿದ್ಯಾಶಾಲಾ ದೇಶದಲ್ಲೇ ಅತ್ಯುತ್ತಮ ಶಾಲೆ: ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ನಿರ್ದೇಶಕ ಪ್ರೊ.ದೇಬಬ್ರತಾ ದಾಸ್ ಪ್ರಶಂಸೆ




ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ 70ನೇ ಕಾಲೇಜು ದಿನಾಚರಣೆಯಲ್ಲಿ 'ಮೈಸೂರಿಗೆ ವಿವೇಕ ಬಾಂಧವ್ಯ' ನಾಟಕ ಪ್ರದರ್ಶನ ನಡೆಯಿತು. ಬಲ ಚಿತ್ರದಲ್ಲಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ, ಪ್ರೊ. ಪ್ರೊ.ದೇಬಬ್ರತಾ ದಾಸ್, ಶಾಲೆ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದ, ಪ್ರಾಂಶುಪಾಲ ಎಸ್.ಬಾಲಾಜಿ ಇತರರಿದ್ದಾರೆ.

ಮೈಸೂರು, ಡಿ.24(ಎಂಕೆ)– ಮೈಸೂರಿಗೆ ಸ್ವಾಮಿ ವಿವೇಕಾನಂದರ ಭೇಟಿಯ ಸನ್ನಿವೇಶ ಆಧಾರಿತ 'ಮೈಸೂರಿಗೆ ವಿವೇಕ ಬಾಂಧವ್ಯ' ನಾಟಕ ಪ್ರದರ್ಶನದ ಮೂಲಕ ಇತಿಹಾಸದ ಪುಟಗಳನ್ನು ನೋಡುಗರ ಕಣ್ಣಮುಂದೆ ತಂದ ಶ್ರೀ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿಗಳ ಕಲಿಕಾ ಕೌಶಲ್ಯತೆ, ಶಿಸ್ತು ಪರಿಪಾಲನೆ ನೆರೆದಿದ್ದ ಪೋಷಕರು ಹಾಗೂ ಶಿಕ್ಷಕ ವೃಂದದ ಹೃನ್ಮನ ಗೆದ್ದಿತು.

ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 70ನೇ ಕಾಲೇಜು ದಿನಾಚರಣೆಯಲ್ಲಿ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ತಾತಯ್ಯ ಅನಾಥಾಲಯ–ನಿರಂಜನ ಮಠಕ್ಕೆ ಸ್ವಾಮಿ ವಿವೇಕಾನಂದರು ಭೇಟಿ ನೀಡಿದ ಸಂದರ್ಭವನ್ನು 'ಮೈಸೂರಿಗೆ ವಿವೇಕ ಬಾಂಧವ್ಯ' ನಾಟಕವನ್ನು ಅದ್ಭುತವಾಗಿ ಪ್ರಸ್ತುತಪಡಿಸಿದ ಶ್ರೀ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿಗಳು, ಇತಿಹಾಸದ ಪುಟಗಳನ್ನು ನೋಡುಗರ ಕಣ್ಣಮುಂದೆ ತಂದರು.

ಇದಕ್ಕೂ ಮುನ್ನ ಸಾಲಾಗಿ ನಿಂತು ಮುಖ್ಯ ಅತಿಥಿಗಳಿಗೆ ನಮಸ್ಕರಿಸಿ, ಕಾರ್ಯಕ್ರಮಕ್ಕೆ ಸ್ವಾಗತಿಸುವುದರಿಂದ ಹಿಡಿದು ಭಜನೆ, ಭಾಷಣ, ಹಾಡು–ನೃತ್ಯ ಹಾಗೂ ಜಯಿಸಿದ ಬಹುಮಾನಗಳನ್ನು ಪಡೆದುಕೊಳ್ಳುವುದರಲ್ಲಿಯೂ ಶಿಸ್ತು ತೋರಿದ ವಿದ್ಯಾರ್ಥಿಗಳು ಶಿಸ್ತಿನ ಮಹತ್ವವನ್ನು ತೋರಿಸಿಕೊಟ್ಟರು. ಸರತಿ ಸಾಲಿನಲ್ಲಿ ನಿಂತು ಅಧ್ಯಯನ ಸಾಮಗ್ರಿಗಳನ್ನು ಬಹುಮಾನವನ್ನಾಗಿ ಪಡೆದ ವಿದ್ಯಾರ್ಥಿಗಳಲ್ಲಿ ಶ್ರಮಕ್ಕೆ ತಕ್ಕ ಪ್ರತಿಫಲ ಪಡೆದ ಸಾರ್ಥಕತೆ ಕಾಣುತ್ತಿತ್ತು.

ಕಲೆ–ಸಾಹಿತ್ಯ, ಚರ್ಚೆ, ಕ್ರೀಡೆ, ಸಂಘಟನೆ ಸೇರಿದಂತೆ ಎಲ್ಲಾ ಬಗೆಯ ಅಧ್ಯಯನದಲ್ಲೂ ಮುನ್ನಡೆ ಸಾಧಿಸಿದ 10ನೇ ತರಗತಿ ವಿದ್ಯಾರ್ಥಿ ಶಿವಪ್ರಸಾದ್ ಕಿವಡೆ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿ ಶ್ರೇಯಸ್‌ಗೌಡ ಗೋಲ್ಡ್ ಮೆಡಲ್ ಪಡೆದುಕೊಂಡರು. ಅವರೊಂದಿಗೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳು ಬಹುಮಾನಗಳನ್ನು ಪಡೆದು ಸಂಭ್ರಮಿಸಿದರು.

ಬಿವಿಬಿಗೆ ರೋಲಿಂಗ್ ಶೀಲ್ಡ್: ಶ್ರೀ ರಾಮಕೃಷ್ಣ ವಿದ್ಯಾಶಾಲೆ ಹೊರತುಪಡಿಸಿ ನಗರದ ಇತರೆ ಶಾಲೆಗಳ ನಡುವೆ ಆಯೋಜಿಸಿದ್ದ ವಿವಿಧ ಬಗೆಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗೆದ್ದ ವಿದ್ಯಾರ್ಥಿಗಳು ಹಾಗೂ ಪ್ರತಿನಿಧಿಸಿದ ಶಿಕ್ಷಣ ಸಂಸ್ಥೆಗಳಿಗೆ ಬಹುಮಾನ ವಿತರಿ ಸಲಾಯಿತು. ಶಿಕ್ಷಣ ಸಂಸ್ಥೆಗಳಲ್ಲಿ ಭಾರ ತೀಯ ವಿದ್ಯಾ ಭವನ(ಬಿವಿಬಿ) ಪ್ರಥಮ ಸ್ಥಾನದೊಂದಿಗೆ ಮತ್ತೊಮ್ಮೆ ರೋಲಿಂಗ್ ಶೀಲ್ಡ್ ಪಡೆದುಕೊಂಡಿತು. ಬಿವಿಬಿ ಪ್ರಾಂಶುಪಾಲರಾದ ವಿಜಯ ನರಸಿಂಹಂ ಹಾಗೂ ಶಿಕ್ಷಕಿ ಶಶಿಕಲಾ ಬಹುಮಾನ ಪಡೆದುಕೊಂಡರು. ಹಾಗೆಯೇ ಸದ್ವಿದ್ಯಾ ಪ್ರೌಢಶಾಲೆ ದ್ವಿತೀಯ, ಎಕ್ಸೆಲ್ ಪಬ್ಲಿಕ್ ಸ್ಕೂಲ್ ತೃತೀಯ ಬಹುಮಾನ ಪಡೆದರೆ, ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಮತ್ತು ಮರಿಮಲ್ಲಪ್ಪ ಪ್ರೌಢಶಾಲೆ 4 ಮತ್ತು 5ನೇ ಬಹುಮಾನ ಪಡೆದವು.

ದೇಶದಲ್ಲೇ ಅತ್ಯುತ್ತಮ ಶಾಲೆ: ನಂತರ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ.ದೇಬಬ್ರತಾ ದಾಸ್ ಮಾತನಾಡಿ, ಶ್ರೀ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿಗಳಲ್ಲಿನ ಕಲಿಕೆ, ಶಿಸ್ತು ಮನಸೆಳೆಯುವಂತಿದೆ. ಈ ಶಾಲೆ ಬರೀ ಒಳ್ಳೆಯ ಶಾಲೆ ಮಾತ್ರವಲ್ಲ ದೇಶದಲ್ಲೇ ಅತ್ಯುತ್ತಮ ಶಾಲೆಯಾಗಿದೆ. ನಿರಂತರ ಕಲಿಕಾ ತರಬೇತಿ ಮೂಲಕ ವಿಷಯ ಜ್ಞಾನದ ಜೊತೆಗೆ ಮಾನವೀಯ ಮೌಲ್ಯಯುತ ಗುಣಗಳನ್ನು ಕಲಿಯು ತ್ತಿರುವ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳು, ತಮ್ಮ ಮುಂದಿನ ಬದುಕಿನಲ್ಲಿ ಇದೇ ರೀತಿ ಶಿಸ್ತು ಅಳವಡಿಸಿಕೊಂಡು ಸಾಗಿದರೆ, ಸಾಧಕರಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರುಚಿಕರ ಅಡುಗೆ ಸವಿದಾಗ ಆಹಾ.. (AHA..) ಎನ್ನುವಂತೆ ವಿದ್ಯಾರ್ಥಿಗಳನ್ನು ನೋಡಿದರೆ ಆಹಾ... ಎನ್ನುವಂತಿರಬೇಕು. ಆಹಾ... ಎಂದರೆ A-attitude, H-health, A-academy ಎಂದರ್ಥ. ವಿದ್ಯಾರ್ಥಿಗಳ ಕಲಿಕಾ ಕೌಶಲ್ಯತೆ, ಆರೋಗ್ಯ ಶಿಕ್ಷಣ ಸಂಸ್ಥೆಗೆ ಹಿರಿಮೆಯನ್ನು ತಂದುಕೊಡುತ್ತದೆ. ಈ ನಿಟ್ಟಿನಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಪ್ರಮುಖ ಪಾತ್ರವಹಿಸಿದೆ ಎಂದು ಶ್ಲಾಘಿಸಿದರಲ್ಲದೆ ಸದಾ ಸಕಾರಾತ್ಮಕ ಚಿಂತನೆ, ಕಠಿಣ ಪರಿಶ್ರಮ, ಗೆಲ್ಲುವ ಹಂಬಲವಿದ್ದರೆ ಗುರಿ ಸಾಧಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿ ಶಿಕ್ಷಣ ಸಂಸ್ಥೆಯ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕಾಗುತ್ತದೆ. ಒಂದು ತಂಡವಾಗಿ ಕೆಲಸ ಮಾಡಿದರೆ ಬದಲಾವಣೆ ಸಾಧ್ಯ ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ, ಶ್ರೀ ರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದ, ಪ್ರಾಂಶುಪಾಲ ಎಸ್.ಬಾಲಾಜಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 25 ಭಾನುವಾರ 2022

ಸಂಪುಟ: 43 | ಸಂಚಿಕೆ: 248 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಫೆಬ್ರವರಿಯಲ್ಲೇ ಬಜೆಟ್ ಮಂಡನೆ


● ತೀವ್ರ ಕುತೂಹಲ ಮೂಡಿಸಿರುವ ಮುಖ್ಯಮಂತ್ರಿ ಬೊಮ್ಮಾಯಿ ತೀರ್ಮಾನ
● ಬಜೆಟ್ ರೂಪಿಸುವ ಪ್ರಕ್ರಿಯೆ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು, ಡಿ.24 (ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 2023–24ನೇ ಸಾಲಿನ ಮುಂಗಡ ಪತ್ರವನ್ನು ಫೆಬ್ರವರಿ ಮೊದಲ ವಾರವೇ ಮಂಡಿಸಲು ತೀರ್ಮಾನಿಸಿದ್ದಾರೆ.

ಮುಖ್ಯಮಂತ್ರಿಯವರ ಈ ತೀರ್ಮಾನ ರಾಜಕೀಯ ಪಡಸಾಲೆಯಲ್ಲಿ ಅನೇಕ ವ್ಯಾಖ್ಯಾನಗಳಿಗೆ ಎಡೆಮಾಡಿದೆ. ಬಿಜೆಪಿ ಸರ್ಕಾರದ ಆಡಳಿತಾವಧಿ 2023ರ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಏಪ್ರಿಲ್–ಮೇ 2023ರಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ಜರುಗಬೇಕು. ಚುನಾವಣಾ ವರ್ಷದಲ್ಲಿ ಆಡಳಿತ ನಡೆಸುತ್ತಿರುವವರು ಸಾಮಾನ್ಯವಾಗಿ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಬಜೆಟ್ ಮಂಡನೆ ಮಾಡಿ, ಚುನಾವಣೆಗೆ ತೆರಳುತ್ತಾರೆ. ಆದರೆ ಬೊಮ್ಮಾಯಿ ಅವರು ಫೆಬ್ರವರಿ ಮೊದಲ ಭಾಗದಲ್ಲೇ ಮುಂಗಡ ಪತ್ರ ಮಂಡಿಸುತ್ತಿರುವುದು ಅವಧಿಗೂ ಮುನ್ನವೇ ಚುನಾವಣೆ ಸಾಧ್ಯತೆಯೇ ಎಂಬ ಮಾತುಗಳು ಹರಿದಾಡುತ್ತಿವೆ. ಚುನಾವಣೆಗಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಈಗಾಗಲೇ ಜನರ ಬಳಿಗೆ ತೆರಳಿ ಮತದಾರರ ಓಲೈಕೆ ಕೆಲಸ ಮಾಡುತ್ತಿವೆ. ಉಳಿದಿರುವ ಅವಧಿಯಲ್ಲಿ ತಮ್ಮ ಪಕ್ಷಗಳ ಸಂಘಟನೆಗೆ ಒತ್ತು ಕೊಟ್ಟು ಬಿಜೆಪಿಯ ಮೇಲೆ ಸವಾರಿ ಮಾಡುತ್ತಾರೆ ಎಂಬ ಪ್ರಶ್ನೆ ಆ ಪಕ್ಷದ ಮುಖಂಡರಲ್ಲಿ ಎದುರಾಗಿದೆ. ಕರ್ನಾಟಕದಲ್ಲಿ ಎಂದೂ


▶ 7ನೇ ಪುಟಕ್ಕೆ

ಅವಧಿಗೆ ಮುನ್ನ ಚುನಾವಣೆ ಇಲ್ಲ



ಬೆಂಗಳೂರು, ಡಿ.24(ಕೆಎಂಶಿ)– ಅವಧಿ ಪೂರ್ವ ಚುನಾವಣೆ ಮಾಡುವ ಯೋಚನೆಯನ್ನು ನಮ್ಮ ಸರ್ಕಾರ ಅಥವಾ ಪಕ್ಷ ಮಾಡಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರಿಗೆ ನಮ್ಮ ಕಾರ್ಯಕ್ರಮ ಮುಟ್ಟಿಸಿ, ಆ ವರದಿಯ ಆಧಾರದ ಮೇಲೆ ಸಕಾರಾತ್ಮಕ ಜನಾದೇಶ ಪಡೆಯಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹುಶಃ ಕಾಂಗ್ರೆಸ್‌ಗೆ ಸಮಯ ಕೊಟ್ಟಷ್ಟು ಅವರ ಒಳಜಗಳ ಹೆಚ್ಚಾಗುತ್ತದೆ ಎಂದು ಅಭದ್ರತೆ ಕಾಡುತ್ತಿದೆ. ಚುನಾವಣೆ ಮುಂಚೆಯಾಗುತ್ತದೆ. ಜಗಳವಾಡಬೇಡಿ ಎಂದು ಕಾಂಗ್ರೆಸ್‌ನ ಕಾರ್ಯಕರ್ತರಿಗೆ ನೀಡಿರುವ ಸಂದೇಶ ಎಂದರು.

ಡಿ.30, ಮಂಡ್ಯಕ್ಕೆ ಅಮಿತ್ ಶಾ



ಮಂಡ್ಯ, ಡಿ.24– ವಿಧಾನಸಭಾ ಚುನಾವಣೆಗೆ ಕೇವಲ ಎರಡ್ಮೂರು ತಿಂಗಳು ಬಾಕಿ ಇದ್ದು, ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ ಜೆಡಿಎಸ್ ಪಂಚರತ್ನ ಯಾತ್ರೆ ಮೂಲಕ ಮತದಾರರನ್ನು ಸೆಳೆಯಲು ಹೊರಟಿದ್ದು, ಜಿಲ್ಲೆಯಲ್ಲಿ ಅಷ್ಟೇನು ಬಲವಿಲ್ಲದ ಬಿಜೆಪಿ ಬಲಪಡಿಸಲು ಬಿಜೆಪಿ 'ಚಾಣಕ್ಯ' ಕೇಂದ್ರ ಗೃಹ ಸಚಿವ ಅಮಿತ್ ಶಾ ಡಿ.30ಕ್ಕೆ ಮಂಡ್ಯಕ್ಕೆ ಆಗಮಿಸುತ್ತಿದ್ದಾರೆ.

ಅಮಿತ್ ಶಾ ಬರುವುದು ಖಾತ್ರಿಯಾಗಿದ್ದು, ಅಂದು ಮಂಡ್ಯದ ಗೆಜ್ಜಲಗೆರೆಯಲ್ಲಿರುವ ಮೆಗಾ ಡೈರಿಯನ್ನು ಸಹಕಾರ ಸಚಿವರೂ ಆಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಲಿದ್ದಾರೆ. ಬಳಿಕ ಮಂಡ್ಯ ನಗರಕ್ಕೆ ಆಗಮಿಸಲಿದ್ದು, ಮಂಡ್ಯ ವಿಶ್ವವಿದ್ಯಾನಿಲಯದ ಆವರಣ (ಬಾಯ್ಸ್ ಕಾಲೇಜು)ದಲ್ಲಿ ಬೃಹತ್ ಬಿಜೆಪಿ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ.

ಟೆಂಪೋ– ಕ್ಯಾಂಟರ್ ನಡುವೆ ಭೀಕರ ಅಪಘಾತ

ಪಾಂಡವಪುರದ ಮೂವರು ದುರ್ಮರಣ: ಇಬ್ಬರ ಸ್ಥಿತಿ ಗಂಭೀರ

ಚನ್ನಪಟ್ಟಣ, ಡಿ.24(ಮೋಹನ್‌ರಾಜ್)– ಟೆಂಪೋ ಟ್ರಾವೆಲರ್ ಮತ್ತು ಕ್ಯಾಂಟರ್ ನಡುವೆ ನಡೆದ ಅವಘಡದಲ್ಲಿ ಮೂವರು ಸಾವಿಗೀಡಾಗಿ, ಇಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಮುದುಗೆರೆ ಸಮೀಪದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಶನಿವಾರ ಮುಂಜಾನೆ ಸಂಭವಿಸಿದೆ. ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಚಿಕ್ಕಾಡೆ ಗ್ರಾಮದ ಕೃಷ್ಣೇಗೌಡ(40), ಇವರ ಪುತ್ರ ಶ್ರೀನಿವಾಸ್(14), ಮಹೇಶ್(40) ಮೃತರು. ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ಇಬ್ಬರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮಂಡ್ಯ ಮಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗಿದೆ. ಮೃತರು ತಿರುಪತಿ ತಿಮ್ಮಪ್ಪನ ದರ್ಶನ ಪಡೆದು ಸ್ವಗ್ರಾಮಕ್ಕೆ ಹಿಂದಿರುಗುವಾಗ ಈ ದುರ್ಘಟನೆ ನಡೆದಿದೆ.



ಘಟನೆ ವಿವರ: ಪಾಂಡವಪುರ ತಾಲೂಕಿನ ಚಿಕ್ಕಾಡೆ ಗ್ರಾಮದ 11 ಮಂದಿ ಟೆಂಪೋ ಟ್ರಾವೆಲರ್‌ನಲ್ಲಿ ತಿರುಪತಿಗೆ ಹೋಗಿದ್ದರು. ತಿಮ್ಮಪ್ಪನ ದರ್ಶನ ಪಡೆದು ಹಿಂದಿರುಗುವ ವೇಳೆ ಟೆಂಪೋ ಟ್ರಾವೆಲರ್ ಮುಂದೆ ಹೋಗುತ್ತಿದ್ದ ಕ್ಯಾಂಟರ್ ಹಿಂದಿಕ್ಕುವ ಭರದಲ್ಲಿ ಮುಂದೆ ಇದ್ದ ಕ್ಯಾಂಟರ್‌ಗೆ ಡಿಕ್ಕಿ

▶ 7ನೇ ಪುಟಕ್ಕೆ



ಮೇಲುಕೋಟೆ ಕ್ಷೇತ್ರದಲ್ಲಿ ಜೆಡಿಎಸ್ ಪಂಚರತ್ನ ಯಾತ್ರೆಗೆ ಹರಿದು ಬಂದ ಜನಸಾಗರ

● ಭಾರೀ ಜನಸ್ತೋಮದ ನಡುವೆ ಸಾಗಿದ ಕುಮಾರಸ್ವಾಮಿ ರಥ ● ಪಾಂಡವಪುರದಲ್ಲಿ ಯಾತ್ರೆಗೆ ಭರ್ಜರಿ ರೆಸ್ಪಾನ್ಸ್ ● ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ, ಬೃಹತ್ ಹಾರಗಳ ಅಭಿನಂದನೆ ● ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಇಡೀ ದಿನದ ಮಹಾಯಾತ್ರೆ ● ಕುಮಾರಸ್ವಾಮಿ, ಪುಟ್ಟರಾಜು ಪರ ಮೊಳಗಿದ ಘೋಷಣೆ, ಅಪಾರ ಪಟಾಕಿ ಸದ್ದು, ಪೂರ್ಣಕುಂಭ ಸ್ವಾಗತ



ಪಾಂಡವಪುರ, ಡಿ.24(ಸಿ.ಎ.ಲೋಕೇಶ್)–ಕಳೆದ ಮೂರ್ನಾಲ್ಕು ದಿನಗಳಿಂದ ಮಂಡ್ಯ ಜಿಲ್ಲೆಯಲ್ಲಿ ಯಶಸ್ವಿಯಾಗಿ ಸಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಹು ನಿರೀಕ್ಷಿತ ಪಂಚರತ್ನ ಯಾತ್ರೆ ಶನಿವಾರ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಧೂಳೆಬ್ಬಿಸಿತು. ಕೃಷ್ಣರಾಜಸಾಗರದ ಬೃಂದಾವನ ಗಾರ್ಡನ್‌ನಿಂದ ಆರಂಭವಾದ ಯಾತ್ರೆಗೆ ಪಾಂಡವಪುರ ತಾಲೂಕಿನಲ್ಲಿ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಯಿತು. ನಿನ್ನೆ ಶ್ರೀರಂಗಪಟ್ಟಣದಲ್ಲಿ ನಡೆದ ಪಂಚರತ್ನ ರಥಯಾತ್ರೆ ಶುಕ್ರವಾರ ತಡರಾತ್ರಿ ಕೆಆರ್‌ಎಸ್‌ನಲ್ಲಿ ಅಂತ್ಯಗೊಂಡಿತ್ತು. ಅಲ್ಲೇ ವಾಸ್ತವ್ಯ ಹೂಡಿದ್ದ ಹೆಚ್.ಡಿ.ಕುಮಾರಸ್ವಾಮಿ, ಬೆಳಿಗ್ಗೆ ಉಪಾಹಾರ ಸೇವಿಸಿ, ಬೃಂದಾವನ ಗಾರ್ಡನ್ ಬಳಿಯಿಂದ ಯಾತ್ರೆ ಆರಂಭಿಸಿದರು.

ಕಾವೇರಿ ಮಾತೆಗೆ ಪೂಜೆ ಸಲ್ಲಿಕೆ: ಇಂದು ಬೆಳಗ್ಗೆ ಕೆಆರ್‌ಎಸ್ ಅಣೆಕಟ್ಟೆ ಬಳಿ ಕಾವೇರಿ ಮಾತೆಗೆ ಹೆಚ್.ಡಿ.ಕುಮಾರಸ್ವಾಮಿ ವಿಶೇಷ ಪೂಜೆ ಸಲ್ಲಿಸಿ ಯಾತ್ರೆಗೆ ಚಾಲನೆ ನೀಡಿದರು. ಈ ವೇಳೆ ಶಾಸಕರಾದ ಸಿ.ಎಸ್.ಪುಟ್ಟರಾಜು, ರವೀಂದ್ರ ಶ್ರೀಕಂಠಯ್ಯ ಅವರಿಗೆ ಸಾಥ್ ನೀಡಿದರು.

ಬೈಕ್ ಜಾಥಾ, ಕಲಾತಂಡಗಳ ಮೆರವಣಿಗೆ: ಪಂಚರತ್ನ ಯಾತ್ರೆ ಆರಂಭವಾಗುತ್ತಿದ್ದಂತೆ

▶ 7ನೇ ಪುಟಕ್ಕೆ

ಮೈಸೂರಿನಲ್ಲಿ ಸಂಭ್ರಮದ ಕ್ರಿಸ್‌ಮಸ್ ಆಚರಣೆ



ಬಿಷಪ್ ಡಾ.ಕೆ.ವಿಲಿಯಂ ಕ್ರಿಬ್(ಗೋದಲಿ)ನಲ್ಲಿ ಪ್ರತಿಷ್ಠಾಪಿಸಿ ಬಾಲಯೇಸುವಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮೈಸೂರು, ಡಿ.24(ಜಿಎ)–ಮೈಸೂರಿನ ಲಷ್ಕರ್ ಮೊಹಲ್ಲಾದ ಸೇಂಟ್ ಫಿಲೋಮಿನಾ ಚರ್ಚ್ ಸೇರಿದಂತೆ ನಗರದ ವಿವಿಧ ಚರ್ಚ್‌ಗಳಲ್ಲಿ ರಾತ್ರಿ ಸಂಭ್ರಮ ಸಡಗರದಿಂದ ಕ್ರಿಸ್‌ಮಸ್ ಆಚರಿಸಲಾಯಿತು. ಸೇಂಟ್ ಫಿಲೋಮಿನಾ ಚರ್ಚ್‌ನಲ್ಲಿ ಕ್ರೈಸ್ತ ಧರ್ಮಿಯರು ಬಾಲಯೇಸುವಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡಿದರು. ವಿವಿಧ ಬಡಾವಣೆಗಳಿಂದ ಬಂದಿದ್ದ ಕ್ರೈಸ್ತಬಾಂಧವರು ಕರೋಲಾ ಗೀತೆಗಳನ್ನು ಹಾಡುವ ಮೂಲ ಬಾಲಯೇಸುವಿನ ಗುಣಗಾನ ಮಾಡಿದರು.

12 ಗಂಟೆ ಮೂರ್ತಿ ಸ್ಥಾಪನೆ: ಚರ್ಚ್‌ನಲ್ಲಿ ನೆರೆದಿದ್ದ ಕ್ರೈಸ್ತ ಬಾಂಧವರು ರಾತ್ರಿ 10.30 ರಿಂದ 11.30ರವರೆಗೂ ದೇವರ ಗೀತೆಗಳನ್ನು ಹಾಡಿದರು. 12 ಗಂಟೆಗೆ ಬಲಿಪೂಜೆ ಆರಂಭಿಸಿ ನಂತರ ಮೈಸೂರಿನ ಬಿಷಪ್ ಡಾ.ಕೆ.ವಿಲಿಯಂ ಕ್ರಿಬ್(ಗೋದಲಿ)ನಲ್ಲಿ ಬಾಲಯೇಸುವಿನ ಮೂರ್ತಿಯನ್ನು ಸ್ಥಾಪಿಸಿ ದೀಪ ಬೆಳಗಿಸಿ ಪೂಜಿಸಿದರು. ಈ ವೇಳೆ ನೆರೆದಿದ್ದ ಕ್ರೈಸ್ತ ಬಾಂಧವರಿಗೆ ಧರ್ಮ ಗುರುಗಳು ವಿಶೇಷ ಸಂದೇಶವನ್ನು ನೀಡಿದರು. ಚರ್ಚ್‌ನ ಆವರಣದಲ್ಲಿ ನಿರ್ಮಿಸಿರುವ

▶ 7ನೇ ಪುಟಕ್ಕೆ

ಮೈಸೂರು ಅರಮನೆ ಆವರಣದಲ್ಲಿ ಸೃಷ್ಟಿಯಾಗಿದೆ ಹೂವಿನ ಲೋಕ

● ಉಸ್ತುವಾರಿ ಸಚಿವ ಸೋಮಶೇಖರ್ ಅವರಿಂದ 'ಫಲಪುಷ್ಪ ಪ್ರದರ್ಶನ' ಉದ್ಘಾಟನೆ ● ಜನವರಿ 2ರವರೆಗೆ ಕಣ್ತುಂಬಿಕೊಳ್ಳುವ ಅವಕಾಶ
● ಹೂವಿನಿಂದಲೇ ಮೈದಳೆದ ಕಾಶಿ ವಿಶ್ವನಾಥ ದೇವಾಲಯ ● ರಂಗನತಿಟ್ಟಿನ ಪ್ರಕೃತಿ ಸೊಬಗು ಅನಾವರಣ ● ಮೈಸೂರು ರಾಜವಂಶಸ್ಥರ ವಿಶೇಷ ಸ್ಮರಣೆ





ಮೈಸೂರು, ಡಿ.24(ಎಸ್‌ಬಿಡಿ)– ಮೈಸೂರಿನಲ್ಲಿ ಅತ್ಯಾಕರ್ಷಕ 'ಅರಮನೆ ಫಲಪುಷ್ಪ ಪ್ರದರ್ಶನ' ಮೈದಳೆದಿದ್ದು, ಕಣ್ಮನ ತಣಿಸುವುದರೊಂದಿಗೆ ಧಾರ್ಮಿಕ, ಐತಿಹಾಸಿಕ, ಪ್ರಾಕೃತಿಕ ಹಾಗೂ ಪ್ರಚಲಿತ ಸಂಗತಿಗಳನ್ನು ಕಣ್ಣಿಗೆ ಕಟ್ಟುವಂತಿದೆ.

ಪ್ರತಿವರ್ಷದಂತೆ ಮಾಗಿ ಕಾಲದಲ್ಲಿ ಮೈಸೂರು ಅರಮನೆ ಆವರಣದಲ್ಲಿ ಅರಮನೆ ಮಂಡಳಿ ವತಿಯಿಂದ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದ್ದು, ಸಹಕಾರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ಸಂಜೆ ವಿಧ್ಯುಕ್ತವಾಗಿ ಉದ್ಘಾಟಿಸಿ, ಗಣ್ಯರೊಂದಿಗೆ ಒಂದು ಸುತ್ತು ಹಾಕಿ ಕಣ್ತುಂಬಿಕೊಂಡರು.

ಕಾಶಿ ವಿಶ್ವನಾಥ ದೇವಾಲಯ: ಗಂಗಾ ನದಿ ಪಶ್ಚಿಮ ದಡದಲ್ಲಿರುವ ಕಾಶಿ ವಿಶ್ವನಾಥ ದೇವಾಲಯವನ್ನು ಮೈಸೂರಿನ ಅರಮನೆ ಅಂಗಳದಲ್ಲಿ ಕಣ್ತುಂಬಿಕೊಳ್ಳಬಹುದು. ದೇವಾಲಯದ ಮಾದರಿಯನ್ನು ಕೆಂಪು–ಹಳದಿ ಹೂವುಗಳಿಂದ ರೂಪಿಸಲಾಗಿದೆ. ಗರ್ಭಗುಡಿಯಲ್ಲಿ ಪುಷ್ಪಗಳಿಂದಲೇ ಸಿಂಗರಿಸಲಾದ ಶಿವಲಿಂಗ ಮಾದರಿಯನ್ನೂ ಪ್ರತಿಷ್ಠಾಪಿಸಲಾಗಿದೆ. ಬಣ್ಣ ಬಣ್ಣದ ಹೂಗಳಿಂದ ನಿರ್ಮಾಣವಾದ ಈ ದೇವಾಲಯವನ್ನು ಕಂಡಾಕ್ಷಣ ಮನಸ್ಸಿನಲ್ಲಿ ಭಕ್ತಿಭಾವ ಜಾಗೃತವಾಗುತ್ತದೆ.

ರಂಗನತಿಟ್ಟು ನೋಡಬನ್ನಿ: ಶ್ರೀರಂಗಪಟ್ಟಣ ಬಳಿಯ ರಂಗನತಿಟ್ಟು ಪಕ್ಷಿಧಾಮ ಈ ಬಾರಿಯ ಫಲಪುಷ್ಪ ಪ್ರದರ್ಶನದ ಮತ್ತೊಂದು ಆಕರ್ಷಣೆಯಾಗಿದೆ. ಕಾವೇರಿ ನದಿಯ ದ್ವೀಪದಲ್ಲಿ ಸ್ವಚ್ಛಂದವಾಗಿ ವಿರಮಿಸುತ್ತಿರುವ ಪಕ್ಷಿಗಳ ಮಾದರಿ ಗಮನ ಸೆಳೆಯುತ್ತವೆ. ರಂಗನತಿಟ್ಟು ಮಾದರಿ ವೀಕ್ಷಣೆಗಾಗಿ ವಿಶೇಷ ದ್ವಾರಗಳನ್ನು ನಿರ್ಮಿಸಲಾಗಿದೆ. ಆ ಪ್ರದೇಶಕ್ಕೆ ಪ್ರವೇಶಿಸುವ ಹಾಗೂ ಹೊರಬರುವ ದ್ವಾರಗಳನ್ನು ಪಕ್ಷಿ ಮಾದರಿಯ ತೂಗು ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದ್ದು, ನೋಡುಗರಿಗೆ ವಿಶೇಷ ಅನುಭವ ನೀಡುತ್ತದೆ. ಪಕ್ಷಿಧಾಮದ ಪಕ್ಕದಲ್ಲೇ ಇರುವ ಹಸಿರು ಹಾಗಲಕಾಯಿಗಳಿಂದ ನಿರ್ಮಿಸಿರುವ ಮೊಸಳೆ ಆಕೃತಿಯೂ ವಿಶೇಷವಾಗಿದೆ.

ರಾಜವಂಶಸ್ಥರ ಸ್ಮರಣೆ: ಉದ್ಯಾನದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸಹಿತ ಸಂರಕ್ಷಿತ

▶ 6ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 25 ಡಿಸೆಂಬರ್ 2022

ಮುಂಬರುವ ಚುನಾವಣೆಯಲ್ಲಿ ಜೆಡಿಎಸ್‌ಗೆ ಅಧಿಕಾರ ನೀಡಿದರೆ

ಪಂಚರತ್ನ ಯೋಜನೆ ಮೂಲಕ ಜನರ ಬದುಕು ಹಸನು ಮಾಡುವೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭರವಸೆ

- ಅಧಿಕಾರಕ್ಕೆ ಬಂದ 24 ಗಂಟೆಯೊಳಗೆ ಸ್ತ್ರೀಶಕ್ತಿ ಸಾಲ ಮನ್ನಾ
- ವಿಕಲಚೇತನರು, ವಿಧವೆಯರ ಮಾಸಾಶನ ಏರಿಕೆ
- ಆನ್‌ಲೈನ್ ರಮ್ಮಿ, ಕ್ರಿಕೆಟ್ ಬೆಟ್ಟಿಂಗ್‌ಗೆ ಕಡಿವಾಣ ಹಾಕುವೆ



ಪಾಂಡವಪುರ, ಡಿ.24– ರಾಜ್ಯದ ಜನತೆ ಕಾಂಗ್ರೆಸ್, ಬಿಜೆಪಿಗೆ ಅಧಿಕಾರ ನೀಡಿ ಅವರಿಂದ ಯಾವುದೇ ಅಭಿವೃದ್ಧಿ ಸಾಧ್ಯವಾಗದ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿದ್ದೀರಾ. ಹೀಗಾಗಿ ಜೆಡಿಎಸ್‌ಗೆ ಅಧಿಕಾರ ನೀಡಿದರೇ ಪಂಚರತ್ನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನರ ಬದುಕು ಹಸನು ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಪಟ್ಟಣದಲ್ಲಿ ನಡೆದ ಪಂಚರತ್ನ ರಥಯಾತ್ರೆ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಅಧಿಕಾರಕ್ಕೆ ಬಂದ 24 ಗಂಟೆಯೊಳಗೆ ರಾಜ್ಯದ ಎಲ್ಲಾ ಸ್ತ್ರೀಶಕ್ತಿ ಸಾಲ ಮನ್ನಾ ಮಾಡುತ್ತೇನೆ. ವಯೋವೃದ್ಧರ ಮಾಸಾಶನವನ್ನು 5 ಸಾವಿರಕ್ಕೆ, ವಿಕಲಚೇತನರು, ವಿಧವೆಯರ ಮಾಸಾಶನ ಏರಿಸುತ್ತೇನೆ. ಪಂಚರತ್ನ ಯಾತ್ರೆ ಯೋಜನೆಗಳ ಅನುಷ್ಠಾನಕ್ಕೆ 1.25 ಲಕ್ಷ ಕೋಟಿ ರೂ.ಗಳ ಕ್ರಿಯಾ ಯೋಜನೆ ರೂಪಿಸಲಾಗಿದ್ದು, ಅಧಿಕಾರಕ್ಕೆ ಬಂದ 5 ವರ್ಷದಲ್ಲಿ ಪಂಚರತ್ನ ಯೋಜನೆಗಳನ್ನು ರಾಜ್ಯದ ಪ್ರತಿ ಕುಟುಂಬಕ್ಕೂ ತಲುಪಿಸುತ್ತೇನೆ ಎಂದು ಭರವಸೆ ನೀಡಿದರು.

2 ಬಾರಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದಕ್ಕಿಂತ ಹೆಚ್ಚಾಗಿ ದಲಿತರ ಮನೆಯಲ್ಲಿ ಗ್ರಾಮ ವಾಸ್ತವ್ಯ ಮಾಡಿ ಜನಸಾಮಾನ್ಯರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ ಕೆಲಸ ಮಾಡಿದ್ದೇನೆ. ರಾಜ್ಯದ ರೈತರ 26 ಸಾವಿರ ಕೋಟಿ ಕೃಷಿ ಸಾಲ ಮನ್ನಾ ಮಾಡಿದ್ದೇನೆ. ರೈತರು ನಷ್ಟ ಅನುಭವಿಸದಂತೆ ತಡೆಯಲು ಹಲವು ಯೋಜನೆಗಳನ್ನು ರೂಪಿಸಿದ್ದೇನೆ. ರೈತರು ಬೆಳೆ ಬೆಳೆಯಲು ಅವರ ಮನೆ ಬಾಗಿಲಿಗೆ ಪ್ರೋತ್ಸಾಹಧನ ತಲುಪಿಸುತ್ತೇನೆ. ರೈತರ ಬೆಳೆಗೆ ಸೂಕ್ತ ಬೆಲೆ ನೀಡಿ ರೈತರ ಆರ್ಥಿಕ ಸಬಲೀಕರಣಕ್ಕೆ ಶ್ರಮಿಸುತ್ತೇನೆ. ಗ್ರಾಪಂ ಮಟ್ಟದಲ್ಲಿ ಉತ್ತಮ ಆಸ್ಪತ್ರೆ ಸೌಲಭ್ಯ ಕಲ್ಪಿಸಿ ದಿನದ 24 ಗಂಟೆಯೂ ಸಾರ್ವಜನಿಕರಿಗೆ ಎಲ್ಲಾ ರೀತಿಯ ಚಿಕಿತ್ಸೆ ಸೌಲಭ್ಯ ದೊರಕಿಸಿಕೊಡುತ್ತೇನೆ. ಗ್ರಾಮೀಣ ಭಾಗದಲ್ಲೂ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಗುಣಮಟ್ಟದ ಶಿಕ್ಷಣ ದೊರಕಿಸಿಕೊಡುವ ಕೆಲಸ ಮಾಡುತ್ತೇನೆ. ಯುವಕರು, ಮಹಿಳೆಯರಿಗೆ ಉದ್ಯೋಗ ನೀಡುವ ಹಲವು ಮಹತ್ತರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತೇನೆ ಎಂದು ಭರವಸೆ ನೀಡಿದರು.

2006ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ನಿಷೇಧಿಸಿದ್ದೆ. ಅಧಿಕಾರಕ್ಕೆ ಬಂದರೆ ಆನ್‌ಲೈನ್ ರಮ್ಮಿ, ಕ್ರಿಕೆಟ್ ಬೆಟ್ಟಿಂಗ್ ದಂಧೆಗೂ ಕಡಿವಾಣ ಹಾಕುತ್ತೇನೆ. ರಾಜ್ಯದ ಜನತೆ ಚುನಾವಣೆ ಸಂದರ್ಭ ಯಾವುದೇ ಜಾತಿ ವ್ಯಾಮೋಹ ಬಿಟ್ಟು, ಆಮಿಷಗಳಿಗೆ ಬಲಿಯಾಗದೆ ನಿಮ್ಮ ಮನೆ ಮಗ, ಮಣ್ಣಿನ ಮಗ ಜನಪರ, ರೈತಪರ ಸರ್ಕಾರ ನಡೆಸಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ನಾನು 2 ಬಾರಿ ಹೃದಯ ಚಿಕಿತ್ಸೆಗೆ ಒಳಗಾಗಿದ್ದೇನೆ. ಆದರೂ ಸಹ ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವ ಉದ್ದೇಶದಿಂದ ಪಂಚರತ್ನ ರಥಯಾತ್ರೆ ನಡೆಸುತ್ತಿದ್ದೇನೆ. ದಿನದ 20 ಗಂಟೆ ರಥಯಾತ್ರೆ ನಡೆಸುತ್ತಿದ್ದೇನೆ. ಕೇವಲ 3 ಗಂಟೆಗೆ ಮಾತ್ರ ನಿದ್ರೆ ಮಾಡುತ್ತಿದ್ದೇನೆ. ಕಳೆದ 2018ರ ಚುನಾವಣೆಯಲ್ಲಿ ನಮಗೆ ಸ್ಪಷ್ಟ ಬಹುಮತ ಸಿಗದೆ ಇದ್ದರೂ ಸಹ ಜಿಲ್ಲೆಯ 7 ಕ್ಷೇತ್ರಗಳಲ್ಲೂ ಜೆಡಿಎಸ್ ಶಾಸಕರನ್ನು ಗೆಲ್ಲಿಸುವ ಮೂಲಕ ಸಮ್ಮಿಶ್ರ ಸರ್ಕಾರದ ಮೂಲಕ ಅಧಿಕಾರ ನಡೆಸಲು ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗಾಗಿ ಈ ಬಾರಿಯೂ ಜಿಲ್ಲೆಯ ಏಳು ಸ್ಥಾನಗಳಲ್ಲೂ ಜೆಡಿಎಸ್ ಶಾಸಕರನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಹೃದಯವಂತ. ಕ್ಷೇತ್ರದ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ. ಸಣ್ಣ ನೀರಾವರಿ ಸಚಿವರಾಗಿ ಕ್ಷೇತ್ರದಲ್ಲಿ ಹಲವಾರು ನೀರಾವರಿ ಸೌಲಭ್ಯ ದೊರಕಿಸಿಕೊಟ್ಟಿದ್ದಾರೆ. ಪುಟ್ಟರಾಜು ಅವರು ಮುಂದಿನ ಬಾರಿಯೂ ಮಂತ್ರಿಯಾಗಿ ಕೆಲಸ ಮಾಡಲು ಕ್ಷೇತ್ರದ ಜನತೆ ಗೆಲ್ಲಿಸಿಕೊಡಬೇಕೆಂದು ಮನವಿ ಮಾಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಪಂಚರತ್ನ ರಥಯಾತ್ರೆಗೆ ಕ್ಷೇತ್ರದ ಜನತೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅಭೂತಪೂರ್ವ ಸ್ವಾಗತ ಕೋರಿದ್ದೀರಿ. ಮುಂದಿನ ಚುನಾವಣೆಯಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗುವುದರಲ್ಲಿ ಅನುಮಾನವಿಲ್ಲ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸುವ ಮೂಲಕ ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ನನಗೆ ಒಂದು ನೋವಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ನಾನು ಸಂಸದನಾದಾಗ ಪಡೆ ದಿದ್ದಕ್ಕಿಂತ ಅಧಿಕ ಮತಗಳಿಸಿದರೂ ಅವರಿಗೆ ಸೋಲುಂಟಾಯಿತು. ಆ ಸೋಲಿನ ಸೇಡು ತೀರಿಸಿಕೊಳ್ಳಬೇಕಾಗಿದೆ. ಇದೀಗ ನಿಖಿಲ್ ಕುಮಾರಸ್ವಾಮಿ ಅವರು ರಾಮನಗರ ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. ಅಲ್ಲಿ ಅವರ ಗೆಲುವು ಖಚಿತ. ಆದರೆ, ಅವರು ಕೇವಲ ಒಂದು ವರ್ಷ ಮಾತ್ರ ಶಾಸಕರಾಗಿ ಕೆಲಸ ಮಾಡಿ ಮತ್ತೆ ಮಂಡ್ಯ ಲೋಕಸಭೆ ಚುನಾವಣೆ ಅಭ್ಯರ್ಥಿಯಾಗಿ ಕಣಕ್ಕಿಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಪಂಚರತ್ನ ರಥಯಾತ್ರೆಯಲ್ಲಿ ಶಾಸಕ ಸಾ.ರಾ.ಮಹೇಶ್, ಮಾಜಿ ಶಾಸಕ ಕೆ.ಟಿ. ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಮನ್‌ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರು, ನಿರ್ದೇಶಕ ಹೆಚ್.ಟಿ.ಮಂಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್‌ಕುಮಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಉದ್ಯಮಿ ಮಧುಸೂದನ್ ಸೇರಿದಂತೆ ಹಲವಾರು ಗಣ್ಯರು, ಮುಖಂಡರು ಪಾಲ್ಗೊಂಡಿದ್ದರು.

ಹೆಚ್‌ಡಿಡಿ, ಹೆಚ್‌ಡಿಕೆ ಕೈ ಬಲಪಡಿಸಿ: ನಿಖಿಲ್ ಕುಮಾರಸ್ವಾಮಿ

ಚಿತ್ರನಟ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದ ಜನರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರೈತರ ಆರ್ಥಿಕ ಸದೃಢತೆಗಾಗಿ ಉತ್ತಮ ಸರ್ಕಾರವನ್ನು ಅಧಿಕಾರಕ್ಕೆ ತರಲು ಶ್ರಮಿಸುತ್ತಿದ್ದಾರೆ. ಅವರಿಗೆ ಜನತೆ ಬೆಂಬಲ ನೀಡುವ ಮೂಲಕ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕೆಂದು ಮನವಿ ಮಾಡಿದರು.


ಕಳೆದ ಲೋಕಸಭಾ ಚುನಾವಣೆಯಲ್ಲಿ ನಮ್ಮ ಸಿ.ಎಸ್.ಪುಟ್ಟರಾಜಣ್ಣ ಅವರು ಲೋಕಸಭೆಯಲ್ಲಿ ಗೆದ್ದಾಗ ನೀಡಿದಕ್ಕಿಂತ 50 ಸಾವಿರ ಮತಗಳನ್ನು ಅಧಿಕವಾಗಿ ನೀಡಿದರೂ, ಕೆಲವರ ಷಡ್ಯಂತರದಿಂದ ಸೋಲಾಗಿದೆ. ಜಿಲ್ಲೆಯ ಜನತೆ ನನ್ನ, ನಮ್ಮ ಕುಟುಂಬದ ಮೇಲೆ ಇಟ್ಟಿರುವ ಪ್ರೀತಿ ಎಲ್ಲದಕ್ಕಿಂತ ಹೆಚ್ಚು. ರಾಮನಗರದಲ್ಲಿ ನನ್ನ ತಾಯಿ ನನ್ನನ್ನು ಅಭ್ಯರ್ಥಿಯಾಗಿ ಘೋಷಿಸಿದ್ದಾರೆ. ಮಂಡ್ಯ ಜಿಲ್ಲೆಯಂತೆಯೇ ರಾಮನಗರ ಜಿಲ್ಲೆ ಜನ ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ ಅವರನ್ನು ಬೆಳೆಸಿದ್ದಾರೆ. ಅದೇ ರೀತಿ ನನ್ನನ್ನು ಬೆಳೆಸಲಿದ್ದಾರೆ ಎನ್ನುವ ನಂಬಿಕೆ, ವಿಶ್ವಾಸವಿದೆ ಎಂದರು.



ಕೆ.ಎಸ್. ಪುಟ್ಟಣ್ಣಯ್ಯ ಅವರ ಪ್ರತಿಮೆಗೆ ಮಾಜಿ ಸಿಎಂ ಕುಮಾರಸ್ವಾಮಿ ಮಾಲಾರ್ಪಣೆ ಮಾಡಿದರು.

ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡರ ಹುಟ್ಟುಹಬ್ಬ

ರಕ್ತದಾನ ಶಿಬಿರ, ದೇವಾಲಯಗಳಲ್ಲಿ ವಿಶೇಷ ಪೂಜೆ



ಭಾರತೀನಗರ, ಡಿ.24– ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡರ ಹುಟ್ಟುಹಬ್ಬದ ಅಂಗವಾಗಿ ಶನಿವಾರ ಭಾರತೀ ಕಾಲೇಜಿನ ಆವರಣದಲ್ಲಿ ರಕ್ತದಾನ ಶಿಬಿರ ನಡೆಯಿತು.

ಭಾರತೀ ಪದವಿಪೂರ್ವ ಕಾಲೇಜು, ಭಾರತೀ ಪದವಿ ಕಾಲೇಜು, ಹಿರಿಯ ವಿದ್ಯಾರ್ಥಿಗಳ ಬಳಗ, ಭಾರತೀ ಕಾಲೇಜಿನ ಎನ್‌ಸಿಸಿ, ಎನ್‌ಎಸ್‌ಎಸ್, ಹಿರಿಯ ವಿದ್ಯಾರ್ಥಿಗಳ ಬಳಗ, ಸಂಜೀವಿನಿ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ನಡೆದ ಬೃಹತ್ ರಕ್ತದಾನ ಶಿಬಿರಕ್ಕೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪಿ. ನಾಗಮಾದಯ್ಯ ಚಾಲನೆ ನೀಡಿದರು.

ಪಿ.ನಾಗಮಾದಯ್ಯ ಮಾತನಾಡಿ, ಮಧು ಜಿ.ಮಾದೇಗೌಡರ ಹುಟ್ಟುಹಬ್ಬದ ಅಂಗವಾಗಿ ಪ್ರತಿ ವರ್ಷ ರಕ್ತದಾನ ಶಿಬಿರ ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುತ್ತಿದ್ದಾರೆ. ರಕ್ತದಾನ ಮಹಾಶ್ರೇಷ್ಠ. ಹಾಗಾಗಿ ಪ್ರತಿಯೊಬ್ಬರು ರಕ್ತದಾನ ಮಾಡುವ ಮೂಲಕ ಸಂಕಷ್ಟದಲ್ಲಿರುವ ಜೀವಗಳನ್ನು ಉಳಿಸಲು ಮುಂದಾಗಬೇಕು. ಮಧು ಜಿ.ಮಾದೇಗೌಡರಿಗೆ ದೇವರು ಆಯಸ್ಸು, ಆರೋಗ್ಯ ಕರುಣಿಸಿ ಇನ್ನೂ ಉನ್ನತ ಸ್ಥಾನ ಪಡೆಯಲಿ ಎಂಬುದು ನಮ್ಮ ವಿದ್ಯಾಸಂಸ್ಥೆ ಆಶಯ ಎಂದರು.

ಇದೇ ವೇಳೆ ಹಿರಿಯ ವಿದ್ಯಾರ್ಥಿಗಳ ಬಳಗದ ಸಂಚಾಲಕ ಜಯರಾಮೇಗೌಡ, ನಿವೃತ್ತ ಪ್ರಾಂಶುಪಾಲ ಡಾ.ಎಸ್.ಶಿವಸ್ವಾಮಿ, ಜಿಎಂಐಟಿ ಪ್ರಾಂಶುಪಾಲ ಡಾ.ಪ್ರವೀಣ್ ಕುಮಾರ್, ಮುಖ್ಯಶಿಕ್ಷಕರಾದ ರಾಜೇಂದ್ರ ಅರಸು, ಎಚ್.ಪಿ.ಪ್ರತಿಮಾ, ಸಂಜೀವಿನಿ ರಕ್ತನಿಧಿ ಕೇಂದ್ರದ ರಾಘು ಸೇರಿದಂತೆ ಇತರರಿದ್ದರು.

ಹಾಲಿನ ಟ್ಯಾಂಕರ್ ಪಲ್ಟಿ



ಮದ್ದೂರು, ಡಿ.24– ತಾಲೂಕಿನ ಗೆಜ್ಜಲಗೆರೆ ಜಿಲ್ಲಾ ಹಾಲು ಒಕ್ಕೂಟದಿಂದ(ಮನ್ಮುಲ್) ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ತುಂಬಿಕೊಂಡು ಬೆಂಗಳೂರಿಗೆ ಹೋಗುತ್ತಿದ್ದ ಹಾಲಿನ ಕ್ಯಾಂಟರ್ ಬ್ರೇಕ್ ಫೇಲ್‌ನಿಂದ ಮದ್ದೂರು ಬೈಪಾಸ್‌ನ ಕೆ.ಕೋಡಿಹಳ್ಳಿ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿರುವ ಘಟನೆ ಶುಕ್ರವಾರ ರಾತ್ರಿ ಸಂಭವಿಸಿದೆ.

ಡಿಕ್ಕಿ ಹೊಡೆದ ರಭಸಕ್ಕೆ ವಾಹನದಲ್ಲಿದ್ದ ಸುಮಾರು 3 ಸಾವಿರಕ್ಕೂ ಹೆಚ್ಚು ಲೀಟರ್ ಹಾಲು, ಮೊಸರು, ಮಜ್ಜಿಗೆ ರಸ್ತೆಗೆ ಚೆಲ್ಲಿ ನಷ್ಟ ಉಂಟಾಗಿದೆ. ಚಾಲಕ ಮತ್ತು ಕ್ಲೀನರ್‌ಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಕೆ.ಆರ್.ಪೇಟೆಗೆ ಪಂಚರತ್ನ ಯಾತ್ರೆ

ಕೆ.ಆರ್.ಪೇಟೆ, ಡಿ.24– ಜೆಡಿಎಸ್‌ನ ಪಂಚರತ್ನ ರಥಯಾತ್ರೆ ಡಿ.25ರಂದು ಕೆ.ಆರ್.ಪೇಟೆಗೆ ಆಗಮಿಸಲಿದ್ದು, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಯಾತ್ರೆಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳು, ಬ್ಯಾನರ್‌ಗಳು ಮತ್ತು ನಾಯಕರ ಕಟೌಟ್‌ಗಳು ರಾರಾಜಿಸುತ್ತಿವೆ.

ತಾಲೂಕಿನ ಗಡಿಭಾಗ ಅಶೋಕನಗರ ಗ್ರಾಮಕ್ಕೆ ಪಂಚರತ್ನ ರಥಯಾತ್ರೆ ಆಗಮಿಸಲಿದ್ದು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಹಾಗೂ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ರೇವಣ್ಣ ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರು, ಪಕ್ಷದ ಪದಾಧಿಕಾರಿಗಳು ಹಾಗೂ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಪಂಚರತ್ನ ರಥಯಾತ್ರೆ ಅಶೋಕನಗರ ಗ್ರಾಮದಿಂದ ಬೈಕ್ ರ್‍ಯಾಲಿ ಮೂಲಕ ಆರಂಭವಾಗಿ ಐಚನಹಳ್ಳಿ ಬೂಕನಕೆರೆ, ನಾಟನಹಳ್ಳಿ ಬಳ್ಳೇಕೆರೆ, ಕಾಮನಹಳ್ಳಿ ಗೇಟ್, ನಾರ್ಗೋನಹಳ್ಳಿ ಚೌಡೇನಹಳ್ಳಿ ಗ್ರಾಮದ ಮಾರ್ಗವಾಗಿ ಹೊಸಹೊಳಲು ಗ್ರಾಮಕ್ಕೆ ಆಗಮಿಸಲಿದೆ. ನಂತರ ಕೃಷ್ಣರಾಜಪೇಟೆ ಪಟ್ಟಣದ ಪುರಸಭಾ ಕಚೇರಿ ಪಕ್ಕದ ಮೈದಾನದಲ್ಲಿ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಿಕ್ಕೋಸಹಳ್ಳಿ, ಹರಿರಾಯನಹಳ್ಳಿ, ಚಿಲ್ಲದ ಹಳ್ಳಿ, ಅಗ್ರಹಾರಬಾಚಹಳ್ಳಿ ಮಾರ್ಗವಾಗಿ ರಂಗನಾಥಪುರ ಕ್ರಾಸ್, ಹರಪನಹಳ್ಳಿ ಕ್ರಾಸ್ ಮೂಲಕ ಸಂತೆಬಾಚಹಳ್ಳಿ ಗ್ರಾಮದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಕಾರ್ಯಕರ್ತರ ಜತೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ರಥಯಾತ್ರೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀ ರಾಂ ಮನವಿ ಮಾಡಿದ್ದಾರೆ.

ಮೈಸೂರು ಅರಮನೆ ಆವರಣದಲ್ಲಿ ಸೃಷ್ಟಿಯಾಗಿದೆ ಹೂವಿನ ಲೋಕ

ಐದನೇ ಪುಟದಿಂದ

ಪ್ರಾಚೀನ ಸ್ಮಾರಕವನ್ನು ಬಗೆ ಬಗೆಯ ಹೂಕುಂಡಗಳು ಹಾಗೂ ಹಚ್ಚಸಿರ ಗಿಡಗಳಿಂದ ಅಲಂಕೃತಗೊಳಿಸಲಾಗಿದೆ. ಜೊತೆಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್, ಶ್ರೀ ಜಯಚಾಮರಾಜ ಒಡೆಯರ್ ಹಾಗೂ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನೆನಪಿನಾರ್ಥ ಆಕರ್ಷಕವಾದ ಬೃಹತ್ ಕಳಶಗಳನ್ನು ನಿರ್ಮಿಸಲಾಗಿದೆ. ಹಾಗೆಯೇ ಶ್ರೀ ಜಯಚಾಮರಾಜ ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯನವರು ಸಮಾಲೋಚನೆ ನಡೆಸುತ್ತಿರುವಂತೆ ಪ್ರತಿಕೃತಿ ನಿರ್ಮಿಸಿ, ಹೂಗಳಿಂದ ಸಿಂಗರಿಸಿರುವುದು ನಿಜದೃಶ್ಯವನ್ನು ಕಣ್ಣಿಗೆ ಕಟ್ಟುವಂತಿದೆ.

ಮತ್ತಷ್ಟು ವಿಶೇಷತೆ: ಶ್ರೀ ಆದಿ ಶಂಕರಾಚಾರ್ಯರ ಪ್ರತಿಮೆ, ರಾಷ್ಟ್ರೀಯ ಅಮರ್ ಜವಾನ್ ಯುದ್ಧ ಸ್ಮಾರಕ ಜ್ಯೋತಿ, ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಮಾದರಿ, ಯೋಗಪಟು, ನಮೀಬಿಯಾದಿಂದ ಆಮದು ಮಾಡಿಕೊಂಡ ಚೀತಾಗಳ ಪ್ರತಿಕೃತಿಯನ್ನು ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಲಾಗಿದೆ. ಹಣ್ಣು ಮತ್ತು ತರಕಾರಿಯಲ್ಲಿ ಕಲೆ ಅನಾವರಣಗೊಳಿಸಿರುವುದು ಅತ್ಯಾಕರ್ಷಕವಾಗಿದೆ. ಮಹಾರಾಜರು, ವಿವಿಧ ಪ್ರಾಣಿ–ಪಕ್ಷಿಗಳು ಸೇರಿದಂತೆ ವೈವಿಧ್ಯಮಯ ಚಿತ್ರಗಳನ್ನು ಹಣ್ಣು–ತರಕಾರಿಯಲ್ಲಿ ಪಡಿಮೂಡಿಸುವ ಮೂಲಕ ಕಲಾವಿದರು ಕಲಾಪ್ರತಿಭೆ ಮೆರೆದಿದ್ದಾರೆ.

ಸಾಧಕರ ದರ್ಶನ: ಮೊದಲ ಮಹಿಳಾ ಶಿಕ್ಷಕಿ ಮಹಿಳಾ ಅಕ್ಷರದಾತೆ ಸಾವಿತ್ರಿಬಾಯಿ ಫುಲೆ, ಸುರಂಗ ಕೊರೆದು ನೀರು ಹರಿಸಿದ ಕರಾವಳಿಯ ಭಗೀರಥ ಖ್ಯಾತಿಯ ಪದ್ಮಶ್ರೀ ಪುರಸ್ಕೃತ ಅಮೈ ಮಹಾಲಿಂಗನಾಯ್ಕ, ಹಾಕಿ ಜಾದೂಗಾರ ಮೇಜರ್ ಧ್ಯಾನ್‌ಚಂದ್, ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್ ಫೋಟೋಗಳು ಹಾಗೂ ಖ್ಯಾತ ವರ್ಣಚಿತ್ರಕಾರ ರಾಜಾ ರವಿವರ್ಮರ ಪ್ರತಿಮೆಯನ್ನು ವರ್ಣಮಯ ಹೂಗಳಿಂದ ಅಲಂಕರಿಸಿ, ಸಾಧಕರ ಸಾಧನೆಗೆ ಗೌರವ ಸೂಚಿಸಲಾಗಿದೆ. ಕಳೆದ ನವೆಂಬರ್ 24ರಂದು ಕಾಲವಾದ ದಸರಾ ಆನೆ ಗೋಪಾಲಸ್ವಾಮಿ(39) ಫೋಟೋ ಅಳವಡಿಸಿ ಶ್ರದ್ಧಾಂಜಲಿ ಸಲ್ಲಿಸಲಾಗಿದೆ.

ಫೋಟೋ ಪ್ರಿಯರಿಗಾಗಿ: ಫಲಪುಷ್ಪ ಪ್ರದರ್ಶನದಲ್ಲಿ ಫೋಟೋ ಪ್ರಿಯರಂತೂ ಹೆಜ್ಜೆ ಹೆಜ್ಜೆಗೂ ಫೋಟೋ ಕ್ಲಿಕ್ಕಿಸಿಕೊಳ್ಳಬಹುದು. ಈ ಬಾರಿ ಹೃದಯ ಮಾದರಿ, ಹಣ್ಣು ಮಾದರಿ ಫ್ರೇಮ್, ಟೊಮೋಟೋ ಹಾಗೂ ಹೂಗಳಿಂದ ನಿರ್ಮಿಸಿರುವ ಟೋಪಿ ಮಾದರಿ ಫೋಟೋ ಜೋನ್‌ಗಳು ಎಲ್ಲರನ್ನೂ ಆಕರ್ಷಿಸುತ್ತಿವೆ. ಮಿಕ್ಕಿಮೌಸ್, ಚೋಟಾ ಭೀಮ್ ಸೇರಿದಂತೆ ಮಕ್ಕಳನ್ನು ಆಕರ್ಷಿಸುವ ಬೊಂಬೆಗಳೂ ಇಲ್ಲಿವೆ. ಕಳೆದ ದಸರೆಗೆ ಆಗಮಿಸಿದ್ದ ಲಕ್ಷ್ಮೀ ಆನೆ ಮರಿಗೆ ಜನ್ಮ ನೀಡಿದ್ದನ್ನು ನೆನಪಿಸುವಂತೆ ತಾಯಿ ಲಕ್ಷ್ಮಿ, ಪುತ್ರ ಶ್ರೀ ದತ್ತಾತ್ರೇಯ ಜೊತೆಗಿರುವ ಮಾದರಿಯೂ ಕಣ್ಮನ ಸೆಳೆಯುತ್ತದೆ. ಕರಾವಳಿ ಕಂಬಳ ಮಾದರಿ, ಗೋಪುರ ಮಾದರಿ ಧ್ವಾರಗಳು, ಬೃಹತ್ ಸೇಬು ಮಾದರಿ, ಕ್ರಿಸ್‌ಮಸ್ ಟ್ರೀ ಹೀಗೆ ಪ್ರತಿಯೊಂದು ಮಾದರಿಗಳೂ ಅತ್ಯಾಕರ್ಷಕವಾಗಿವೆ. ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸ್ಪಿಲೋಷಿಯ, ನಸ್ಟರ್‌ಸಿಯಂ, ಆಂಟಿರೈನಂ, ಬೋನ್ಸಾತ್ ಗಿಡಗಳು ಸೇರಿದಂತೆ 32 ಜಾತಿಯ ಸುಮಾರು 20 ಸಾವಿರ ಅಲಂಕಾರಿಕ ಹೂವಿನ ಗಿಡ, ಗುಲಾಬಿ, ಕ್ರೈಸಾಂಥಿಯಮ್, ಪಿಂಗ್ ಪಾಂಗ್, ಕಾರ್ನೆಷನ, ಆಸ್ಟ್ರಮೇರಿಯ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂ ಡೈಸಿ, ಡ್ರೆಸಿನಾ ಇನ್ನಿತರ ಬಗೆಯ ಲಕ್ಷಾಂತರ ಹೂಗಳನ್ನು ಬಳಸಲಾಗಿದೆ.

ಛಾಯಾಚಿತ್ರ ಪ್ರದರ್ಶನ: ಫಲಪುಷ್ಪ ಪ್ರದರ್ಶನದ ಭಾಗವಾಗಿ 'ದಸರಾ ಅಂದು–ಇಂದು' ಶೀರ್ಷಿಕೆಯಡಿ ಛಾಯಾಚಿತ್ರ ಪ್ರದರ್ಶನ, ದಸರಾ ಇತಿಹಾಸ ವೈಭವ ಸಾರುವ ಸಾಕ್ಷ್ಯಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ನವರಾತ್ರಿ ವೇಳೆ ವಿಶೇಷವಾಗಿ ಮನೆಯಲ್ಲಿ ಗೊಂಬೆ ಕೂರಿಸಿದ್ದ ಐವರಿಗೆ ಇಲ್ಲಿ ಅವಕಾಶ ನೀಡಿದ್ದು, ಇವರು ಜೋಡಿಸಿರುವ ಬೊಂಬೆಗಳು ಮನಸೂರೆಗೊಳ್ಳುತ್ತವೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆರೋಗ್ಯ ಕಾರ್ಯಕ್ರಮಗಳ ಸಮಗ್ರ ಮಾಹಿತಿಯ ಮಳಿಗೆ, ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಪ್ಲಾಸ್ಟಿಕ್ ತ್ಯಾಜ್ಯದಿಂದ ಸಿದ್ಧಪಡಿಸಿರುವ ಪೀಠೋಪಕರಣ, ದಿನಬಳಕೆ ವಸ್ತುಗಳ ಪ್ರದರ್ಶನ ಮಳಿಗೆಗಳಿವೆ. ಅಲ್ಲಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಿ, ದೈಹಿಕ ಅಂತರ ಕಾಯ್ದುಕೊಳ್ಳಿ ಎಂಬ ಫಲಕ ಅಳವಡಿಸಿ, ಸಾರ್ವಜನಿಕರಿಗೆ ಮುಂಜಾಗ್ರತೆ ವಹಿಸುವಂತೆ ಮನವಿ ಮಾಡಲಾಗಿದೆ.

ಹೆಜ್ಜೆ ಹಾಕಿದ ಸಚಿವರು: ಫಲಪುಷ್ಪ ಪ್ರದರ್ಶನ ಉದ್ಘಾಟಿಸಿದ ಬಳಿಕ ಅರಮನೆ ಮುಂಭಾಗದ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ಸಚಿವ ಎಸ್.ಟಿ.ಸೋಮಶೇಖರ್, ಮೈಸೂರು ಅರಮನೆ ಮಂಡಳಿಯ 2023ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಿದರಲ್ಲದೆ ಜಾನಪದ ಹಾಡಿಗೆ ಸಚಿವರು, ಕಲಾವಿದರ ಜೊತೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

ಈ ವೇಳೆ ಶಾಸಕ ಎಸ್.ಎ.ರಾಮದಾಸ್, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪಾ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಕಾಡಾ ಅಧ್ಯಕ್ಷ ನಿಜಗುಣ ರಾಜು, ಮಾಜಿ ಎಂಎಲ್‌ಸಿ ತೋಂಟದಾರ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಬಿಜೆಪಿ ಮುಖಂಡ ಬಿ.ಪಿ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀ ನಿಮಿಷಾಂಬ ನೃತ್ಯಶಾಲೆಯ ಶ್ರೀಧರ್ ಜೈನ್ ನೇತೃತ್ವದಲ್ಲಿ ಪ್ರಸ್ತುತಪಡಿಸಿದ 'ಮೇರಾ ಭಾರತ್' ನೃತ್ಯ ಸಂಭ್ರಮದ ದೃಶ್ಯ

10 ದಿನ ಪ್ರದರ್ಶನ; ಉಚಿತ ಪ್ರವೇಶ

ಇಂದಿನಿಂದ 10 ದಿನ ಅಂದರೆ ಮುಂದಿನ ಜನವರಿ 2ರವರೆಗೆ ಅರಮನೆ ಅಂಗಳದಲ್ಲಿ ಫಲಪುಷ್ಪ ಪ್ರದರ್ಶನವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಉಚಿತ ಪ್ರವೇಶ ಕಲ್ಪಿಸಲಾಗಿದ್ದು, ನಿತ್ಯ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ವೀಕ್ಷಣೆಗೆ ಅವಕಾಶವಿದೆ. ಈ ದಿನಗಳಲ್ಲಿ ಸಂಜೆ 7ರಿಂದ 9ರವರೆಗೆ ಅರಮನೆಗೆ ವಿದ್ಯುತ್ ದೀಪಾಲಂಕಾರ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮೊದಲ ದಿನವಾದ ಇಂದು ಸಾವಿರಾರು ಸಂಖ್ಯೆಯ ಜನ ಫಲಪುಷ್ಪ ಪ್ರದರ್ಶನ ವೀಕ್ಷಿಸಿದರಲ್ಲದೆ, ಅರಮನೆ ಅಂಗಳದ ವೇದಿಕೆಯಲ್ಲಿ ನಡೆದ ಯದುಕುಮಾರ್ ಅವರ ವಾದ್ಯಗೋಷ್ಠಿ ಪ್ರಸ್ತುತಿ ಹಾಗೂ ಶ್ರೀ ನಿಮಿಷಾಂಬ ನೃತ್ಯಶಾಲೆಯ ಶ್ರೀಧರ್ ಜೈನ್ ನೇತೃತ್ವದಲ್ಲಿ 500 ಕಲಾವಿದರು ಪ್ರಸ್ತುತಪಡಿಸಿದ 'ಮೇರಾ ಭಾರತ್' ನೃತ್ಯ ಸಂಭ್ರಮವನ್ನು ಸವಿದರು.

ಮುಂಜಾಗ್ರತೆ ವಹಿಸಲಾಗಿದೆ...

ದೇಶ ವಿದೇಶದ ಪ್ರವಾಸಿಗರನ್ನು ಆಕರ್ಷಿಸುವುದು ಫಲಪುಷ್ಪ ಪ್ರದರ್ಶನ ಆಯೋಜನೆಯ ಉದ್ದೇಶವಾಗಿದೆ. ಕೊರೊನಾ ಬಗ್ಗೆ ಸದ್ಯಕ್ಕೆ ಯಾವುದೇ ಆತಂಕಪಡುವ ಪ್ರಮೇಯವಿಲ್ಲ. ವರ್ಷಾಂತ್ಯದಲ್ಲಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಿದೆ. ಡಿ.31ರ ಮಧ್ಯರಾತ್ರಿ ಅರಮನೆ ಮುಂಭಾಗ ಸಿಡಿಮದ್ದು ಸಿಡಿಸಿ ಹೊಸವರ್ಷ ಸ್ವಾಗತಿಸುವ ಕಾರ್ಯಕ್ರಮವೂ ನಡೆಯಲಿದೆ. ರಾಜ್ಯದ ರೈತರಿಗೆ ನೇರವಾಗಲೆಂದು ಸಹಕಾರ ಇಲಾಖೆಯ ಮುಖಾಂತರ ಶೂನ್ಯ ಬಡ್ಡಿ ದರದಲ್ಲಿ 24 ಸಾವಿರ ಕೋಟಿ ನೂತನ ಸಾಲ ನೀಡಲಾಗುತ್ತಿದ್ದು, ಈ ಹಿಂದೆ ಸಾಲ ಪಡೆದ ರೈತರೂ ಇದರ ಉಪಯೋಗ ಪಡೆಯಬಹುದು.

–ಎಸ್.ಟಿ.ಸೋಮಶೇಖರ್, ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವ

ಮೈಸೂರು ಮಿತ್ರ

ಐದನೇ ಪುಟದಿಂದ

ಹರಿದು ಬಂದ ಜನಸಾಗರ

ರಥದ ಮುಂದೆ ಸಾವಿರಾರು ಬೈಕ್‌ಗಳಲ್ಲಿ ಕಾರ್ಯಕರ್ತರ ಜಾಥಾ ಸಾಗಿತು. ವಿವಿಧ ಹಳ್ಳಿಗಳಿಂದ ಬೈಕ್‌ನಲ್ಲಿ ಆಗಮಿಸಿದ್ದ ಕಾರ್ಯಕರ್ತರು ತಮ್ಮ ತಮ್ಮ ಬೈಕ್‌ಗಳಲ್ಲಿ ಹೆಚ್ಡಿಕೆ, ಸಿಎಸ್‌ಪಿ ಫೋಟೋ ಅಳವಡಿಸಿಕೊಂಡು ಜೆಡಿಎಸ್ ಬಾವುಟದೊಂದಿಗೆ ಬೈಕ್ ರ್ಯಾಲಿ ನಡೆಸಿದರು. ಜೊತೆಗೆ ಕಲಾ ತಂಡಗಳ ಮೆರವಣಿಗೆ, ಮಹಿಳೆಯರ ಪೂರ್ಣಕುಂಭ ಸ್ವಾಗತ ದೊರೆಯಿತು. ಪ್ರತಿ ಗ್ರಾಮದಲ್ಲೂ ತಮಟೆ, ಡೊಳ್ಳು ವಾದ್ಯಗಳ ಮೂಲಕ ಹಲವಡೆ ಬರಮಾಡಿಕೊಂಡರು.

ಮುಂದುವರೆದ ಹೆಲಿಕಾಪ್ಟರ್ ಪುಷ್ಪವೃಷ್ಟಿ: ಸಾವಿರಾರು ಜನಸ್ತೋಮದ ನಡುವೆ ಯಾತ್ರೆ ಸಾಗುವ ವೇಳೆ ಹೆಲಿಕಾಪ್ಟರ್‌ನಲ್ಲಿ ಪುಷ್ಪವೃಷ್ಟಿ ಮಾಡಲಾಗುತ್ತಿತ್ತು. ಕೆಜಿಗಟ್ಟಲೇ ತಂದಿದ್ದ ಬಿಡಿ ಹೂವನ್ನು ಬಾನಿಂದ ಯಾತ್ರೆಯ ಜನಸ್ತೋಮ ನಡುವೆ ಕುಮಾರಸ್ವಾಮಿ ಸಾಗುತ್ತಿದ್ದ ರಥದ ಮೇಲೆ ಹೂಮಳೆ ಸುರಿಸಲಾಯಿತು. ಯಾತ್ರೆ ಸಾಗಿದ ಕೆಆರ್‌ಎಸ್ ನಾರ್ಥ್‌ಬ್ಯಾಂಕ್ ಸರ್ಕಲ್, ಕ್ಯಾತನಹಳ್ಳಿ, ಪಾಂಡವಪುರ ಟೌನ್, ದೇವೇಗೌಡನ ಕೊಪ್ಪಲು ಸರ್ಕಲ್, ಸುಂಕಾತೊಣ್ಣೂರು ಗ್ರಾಮಗಳಲ್ಲಿ ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡಲಾಯಿತು. ಹಲವೆಡೆ ಪಟಾಕಿ ಸಿಡಿಸಿ ಕುಮಾರಸ್ವಾಮಿ ಅವರನ್ನು ಸ್ವಾಗತಿಸಲಾಯಿತು. ಕೆಲವೆಡೆ ಮಾಜಿ ಸಿಎಂ ಕುಮಾರಸ್ವಾಮಿ ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ಪರ ಘೋಷಣೆಗಳು ಮೊಳಗಿದವು.

ಗಮನ ಸೆಳೆದ ಬೃಹತ್ ನಾನಾ ಹಾರಗಳು: ಯಾತ್ರೆ ನಡುವೆ ಕುಮಾರಸ್ವಾಮಿ ಅವರಿಗೆ ಹಾಕಲಾಗುತ್ತಿದ್ದ ಬೃಹತ್ ಹಾರಗಳು ಗಮನ ಸೆಳೆದವು. ಕೆಆರ್‌ಎಸ್, ಕ್ಯಾತನಹಳ್ಳಿ, ಕಟ್ಟೇರಿ, ಪಾಂಡವಪುರ ಟೌನ್, ಬೆಟ್ಟಹಳ್ಳಿ ಸೇರಿದಂತೆ ಹಲವೆಡೆ ಬೃಹತ್ ಸೇಬಿನ ಹಾರ, ಭತ್ತದ ತೆನೆ ಹಾರ, ಜೋಳದ ಹಾರ, ಕಬ್ಬಿನ ಹಾರ, ತುಳಸಿ-ಹೂವಿನ ಹಾರ ಸೇರಿದಂತೆ ವಿವಿಧ ಹಾರಗಳು ಗಮನ ಸೆಳೆದವು. ಹಲವೆಡೆ ನೂರಾರು ಈಡುಗಾಯಿ ಒಡೆದು ಸ್ವಾಗತ ಕೋರಲಾಯಿತು.

ನಿಮ್ಮ ಮನೆ ಮಗ ಪುಟ್ಟರಾಜು ಮತ್ತೆ ಗೆಲ್ಲಿಸಿ: ಕಟ್ಟೇರಿಯಲ್ಲಿ ಮಾತನಾಡಿದ ಹೆಚ್‌ಡಿಕೆ, ಪುಟ್ಟರಾಜು ಅವರ ರಾಜಕೀಯ ಭವಿಷ್ಯವನ್ನು ಶಕ್ತಿಯುತವಾಗಿ ಬೆಳೆಸಿದ್ದೀರಿ. ಪಂಚರತ್ನ ಯಾತ್ರೆಗೆ ಅಭೂತಪೂರ್ವ ಬೆಂಬಲ ಸಿಗುತ್ತಿದ್ದು, ನಿಮಗೆ ಧನ್ಯವಾದ ಅರ್ಪಿಸುತ್ತೇನೆ. ನಾನು ಸಿಎಂ ಆಗಿದ್ದ ಅವಧಿಯಲ್ಲಿ ಪುಟ್ಟರಾಜು ಮಂತ್ರಿಯಾಗಿದ್ದರು. ಮೇಲುಕೋಟೆಗೆ ಹಲವು ಅಭಿವೃದ್ಧಿ ಕಾರ್ಯಕ್ರಮ ಕೊಟ್ಟಿದ್ದಾರೆ. ಪುಟ್ಟರಾಜು, ನಿಮ್ಮ ಮನೆ ಮಗನಾಗಿ ಸೇವೆ ಸಲ್ಲಿಸುವ ಗುಣ ಹೊಂದಿದ್ದಾರೆ. ಕುತಂತ್ರಕ್ಕೆ ಬಲಿಯಾಗದೇ ಕಳೆದ ಬಾರಿಗಿಂತ ಅತೀ ಹೆಚ್ಚು ಅಂತರದಿಂದ ಗೆಲ್ಲಿಸಿ ಎಂದು ಮನವಿ ಮಾಡಿದರು.

ಕ್ಯಾತನಹಳ್ಳಿಯಲ್ಲಿ ಪುಟ್ಟಣ್ಣಯ್ಯ ಪ್ರತಿಮೆಗೆ ಮಾಲಾರ್ಪಣೆ: ಪಂಚರತ್ನ ಯಾತ್ರೆ ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ ತವರೂರು ಕ್ಯಾತನಹಳ್ಳಿಗೆ ಆಗಮಿಸುತ್ತಿದ್ದಂತೆ ಸಾವಿರಾರು ಜನರ ನಡುವೆ ರಥದಿಂದ ಕೆಳಗಿಳಿದ ಕುಮಾರಸ್ವಾಮಿ ಹಾಗೂ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ದಿ.ಕೆ.ಎಸ್.ಪುಟ್ಟಣ್ಣಯ್ಯ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ರೈತ ನಾಯಕರನ್ನು ನೆನೆಸಿದರು. ಜೊತೆಗೆ ರೈತ ಸಂಘದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ತವರೂರಲ್ಲಿ ಹೆಚ್‌ಡಿಕೆ ಹಾಗೂ ಸಿಎಸ್.ಪುಟ್ಟರಾಜು ಬೃಹತ್ ಶಕ್ತಿ ಪ್ರದರ್ಶನ ನಡೆಯಿತು.

ಪಾಂಡವಪುರದಲ್ಲಿ ಭರ್ಜರಿ ಪ್ರತಿಕ್ರಿಯೆ: ಸಂಜೆ ವೇಳೆಗೆ ಪಾಂಡವಪುರ ಪ್ರವೇಶಿಸಿದ ಯಾತ್ರೆಗೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿಕೊಂಡರು. ತಾಲೂಕು ಆಸ್ಪತ್ರೆ, ಬೃಹತ್ ಕಟ್ಟಡಗಳ ಮೇಲೆ ನಿಂತು ಸಾವಿರಾರು ಜನ ಯಾತ್ರೆಯನ್ನು ವೀಕ್ಷಿಸಿದರು. ಪಾಂಡವಪುರ ಟೌನ್‌ನಲ್ಲಿ ತೆರೆದ ವಾಹನದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಕುಮಾರಸ್ವಾಮಿ ಮಾತನಾಡಿದರು. ಯಾತ್ರೆಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಪಾಲ್ಗೊಂಡಿದ್ದರು.

ಶಿವಳ್ಳಿಯಲ್ಲಿ ಗ್ರಾಮ ವಾಸ್ತವ್ಯ: ಕೆಆರ್‌ಎಸ್ ನಾರ್ಥ್ ಬ್ಯಾಂಕ್ ಸರ್ಕಲ್‌ನಿಂದ ಶುರುವಾದ ಪಂಚರತ್ನ ಯಾತ್ರೆ, ಮೇಲುಕೋಟೆ ಕ್ಷೇತ್ರದ ಕಟ್ಟೇರಿ, ಅರಳಕುಪ್ಪೆ, ಹರವು, ಕ್ಯಾತನಹಳ್ಳಿ, ಕೆನ್ನಾಳು, ಪಾಂಡವಪುರ ಟೌನ್, ಚಿಕ್ಕಾಡೆ, ಚಿಕ್ಕಬ್ಯಾಡರಹಳ್ಳಿ ಸರ್ಕಲ್, ಕನಗನಮರಡಿ, ಕುರಹಟ್ಟಿ, ಸುಂಕಾತೊಣ್ಣೂರು, ಕಾಳೇನಹಳ್ಳಿ, ಹುಲಿಕೆರೆ, ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ಹುಳ್ಳೇನಹಳ್ಳಿ, ಹಾಡ್ಯ ಮೂಲಕ ತಡರಾತ್ರಿ ಶಿವಳ್ಳಿ ತಲುಪಿತು. ಶಿವಳ್ಳಿಯಲ್ಲಿ ಹೆಚ್‌ಡಿಕೆ ಗ್ರಾಮ ವಾಸ್ತವ್ಯ ಹೂಡಿದ್ದಾರೆ. ಭಾನುವಾರ ಕೆ.ಆರ್.ಪೇಟೆ ತಾಲೂಕಿನಲ್ಲಿ ಪಂಚರತ್ನ ಯಾತ್ರೆ ನಡೆಯಲಿದೆ.

> **ಪಂಚರತ್ನ ರಥಯಾತ್ರೆ ನನ್ನ ಸ್ವಾರ್ಥಕ್ಕಾಗಿ ಅಲ್ಲ, ಸಿಎಂ ಆಗುವುದಕ್ಕಾಗಿ ಅಲ್ಲ, ಜನರ ಹಿತಕ್ಕಾಗಿ. ಕಳೆದ ಬಾರಿ ಚುನಾವಣೆಯಲ್ಲಿ ಮಂಡ್ಯದ ಜನತೆ 7 ಕ್ಷೇತ್ರದಲ್ಲಿ ಜೆಡಿಎಸ್ ಗೆಲ್ಲುವ ಹಾಗೆ ಮಾಡಿದ್ದರು. ಈ ಬಾರಿ ಅಧಿಕ ಮತಗಳ ಅಂತರದಲ್ಲಿ ಗೆಲ್ಲುವ ಹಾಗೆ ಜನರು ಆಶೀರ್ವದಿಸುತ್ತಾರೆ ಎನ್ನುವ ನಂಬಿಕೆ ಇದೆ.**
> – ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಜೆರುಸಲೇಮ್‌ನಲ್ಲಿರುವ ಮಾದರಿ ಕಿಟ್ಟ ಮತ್ತು ಅದರ ಮುಂದಿರುವ ದೊಡ್ಡ ಬೈಬಲ್, ಸೇಂಟ್ ಫಿಲೋಮಿನ ಚರ್ಚ್ ಆಕೃತಿ, ಯೇಸು ಕ್ರಿಸ್ತನ ಶಿಷ್ಯರನ್ನು ಸೂಚಿಸುವ 12 ನಕ್ಷತ್ರಗಳು ಹಾಗೂ ವಿಶೇಷ ಸೌರಮಂಡಲ ಹಾಗೂ ಪ್ರಾಣಿ ಸಂಕುಲವು ಯೇಸು ಕ್ರಿಸ್ತನ ಜನನವನ್ನು ಸಂಭ್ರಮಿಸುವ ಲೋಕವು ಚರ್ಚ್‌ಗೆ ಭೇಟಿ ನೀಡಿದ್ದ ಕ್ರೈಸ್ತ ಬಾಂಧವರು ಮತ್ತು ಪ್ರವಾಸಿಗರನ್ನು ಆಕರ್ಷಿಸಿತು. ನಗರದ ಬನ್ನಿಮಂಟಪದಲ್ಲಿನ ಧೀನರ ಮಾತೆಯ ಚರ್ಚ್, ಗಾಯಿತ್ರಿಪುರಂ ಸಂತ ಅಂತೋಣಿ ಚರ್ಚ್, ಬೆಲವತ್ತ ಗ್ರಾಮ ಸಮೀಪದ ಮಿಷ್ಟಗಿರಿ ಚರ್ಚ್, ಯಾದವಗಿರಿಯ ಸೇಕ್ರೆಡ್ ಹಾರ್ಟ್ ಚರ್ಚ್, ಹಿನಕಲ್ ಹೋಲಿ ಫ್ಯಾಮಿಲಿ ಚರ್ಚ್ ಇತರ ಚರ್ಚ್‌ಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಲಾಯಿತು.

ಫೆಬ್ರವರಿಯಲ್ಲೇ ಬಜೆಟ್ ಮಂಡನೆ

ಬಿಜೆಪಿ ಪೂರ್ಣ ಬಹುಮತದಿಂದ ಅಧಿಕಾರವನ್ನು ಹಿಡಿದಿಲ್ಲ. ಆದರೆ ಈ ಬಾರಿ ಪೂರ್ಣ ಬಹುಮತ ಪಡೆಯಲೇಬೇಕೆಂದು ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ.

ಅದರಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಳ ಮಾಡಿದೆ. ಇದೀಗ ಪಂಚಮಸಾಲಿ ಮತ್ತು ಒಕ್ಕಲಿಗರಿಗೆ ಮೀಸಲಾತಿ ಹೆಚ್ಚಳ ಮಾಡಲು ಸರ್ಕಾರ ಸಿದ್ಧತೆ ಮಾಡಿದೆ.

ಇದಲ್ಲದೆ, ಅನೇಕ ಜನಪರ ಯೋಜನೆಗಳನ್ನು ಜನರ ಮನೆ ಬಾಗಿಲಿಗೇ ತಲುಪಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದೆ. ರಾಜ್ಯ ವಿಧಾನಸಭಾ ಚುನಾವಣೆ ಸಮೀಪದಲ್ಲಿಟ್ಟುಕೊಂಡೇ ಕೇಂದ್ರ ಸರ್ಕಾರ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ಯುನಿಟ್‌ಗೆ 2 ರಿಂದ 5 ಕೆಜಿ ಆಹಾರ ಧಾನ್ಯವನ್ನು ಇನ್ನೂ ಒಂದು ವರ್ಷಕಾಲ ಉಚಿತವಾಗಿ ವಿತರಿಸಲು ತೀರ್ಮಾನಿಸಿದೆ. ಜನಪರ ಕಾರ್ಯಕ್ರಮಗಳನ್ನು ನೀಡಿಯು ಮುಖ್ಯಮಂತ್ರಿಯು ಫೆಬ್ರವರಿ ಮೊದಲ ವಾರದಲ್ಲೇ ಬಜೆಟ್ ಮಂಡನೆಗೆ ಮುಂದಾಗಿರುವುದು ಪ್ರತಿಪಕ್ಷಗಳು ಪೂರ್ಣ ಸಿದ್ಧತೆಗೆ ಮೊದಲೇ ಚುನಾವಣೆಗೆ ತೆರಳುವ ಹುನ್ನಾರ ಎಂದು ಹೇಳಲಾಗುತ್ತಿದೆ. ಅಷ್ಟೇ ಅಲ್ಲ, ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ದೆಹಲಿ ನಾಯಕರು ಸೋಮವಾರ ಉನ್ನತ ಮಟ್ಟದ ಸಭೆ ನಡೆಸುತ್ತಿದ್ದಾರೆ. ಈ ಸಭೆಗೂ ಮುನ್ನವೇ ಮುಖ್ಯಮಂತ್ರಿಯವರು ಬಜೆಟ್ ಘೋಷಣೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಫೆಬ್ರವರಿಯಲ್ಲೇ ಬಜೆಟ್ ಮಂಡನೆ ಮಾಡುತ್ತೇನೆ. ಅದಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದಿದ್ದಾರೆ. ಜನವರಿ ಮೊದಲ ವಾರದಿಂದಲೇ ಬಜೆಟ್ ಮಂಡನೆಗೆ ಸಂಬಂಧಿಸಿದಂತೆ ಚರ್ಚೆ ಆರಂಭಿಸುವುದಾಗಿಯೂ ಹೇಳಿದ್ದಾರೆ.

ದುರ್ಮರಣ: ಇಬ್ಬರ ಸ್ಥಿತಿ ಗಂಭೀರ

ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಸ್ಥಳದಲ್ಲೇ ಇಬ್ಬರು ಸಾವಿಗೀಡಾದರೆ, ಚಾಲಕ ಶ್ರೀನಿವಾಸ್ ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ. ಸ್ಥಳಕ್ಕೆ ಡಿವೈಎಸ್ಪಿ ಓಂಪ್ರಕಾಶ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಚನ್ನಪಟ್ಟಣ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರ ಮನೆಗೆ ಕುಮಾರಸ್ವಾಮಿ ಭೇಟಿ, ಸಾಂತ್ವನ: ಚನ್ನಪಟ್ಟಣದ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ಸಾವನ್ನಪ್ಪಿದ ಪಾಂಡವಪುರ ತಾಲೂಕಿನ ಚಿಕ್ಕಾಡೆ ಗ್ರಾಮದ ಮೃತರ ಮನೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.


ಗ್ರಾಮದ ಮಹೇಶ್ ಹಾಗೂ ಕೃಷ್ಣೇಗೌಡರ ಮನೆಗೆ ಭೇಟಿ ನೀಡಿದ ಮುಖಂಡರು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ಮೃತರ ಕುಟುಂಬದವರು ಮಾಜಿ ಸಿಎಂ ಬಳಿ ಕಣ್ಣೀರಿಟ್ಟ ವೇಳೆ ಹೆಚ್ಡಿಕೆ ಮತ್ತು ನಿಖಿಲ್ ಧೈರ್ಯ ತುಂಬಿದರು.

ಇದೇ ವೇಳೆ ಅನಾರೋಗ್ಯದಿಂದ ಮೃತಪಟ್ಟ ಜೆಡಿಎಸ್ ಮುಖಂಡರೊಬ್ಬರ ನಿವಾಸಕ್ಕೂ ಕುಮಾರಸ್ವಾಮಿ ಭೇಟಿ ನೀಡಿ ಸಾಂತ್ವನ ಹೇಳಿದರು.

> **ಓವರ್ ಟೇಕ್ ಮಾಡುವಾಗ ಮುಂದಿನ ವಾಹನ ಕಾಣದೆ ಅಪಘಾತ ಸಂಭವಿಸಿದೆ. ಒಂದು ವಾಹನ 130 ಕಿಮೀ ವೇಗದಲ್ಲಿದ್ದರೆ ಮತ್ತೊಂದು 30 ಕಿಮೀ ವೇಗದಲ್ಲಿತ್ತು ಎಂದು ಮಾಹಿತಿ ದೊರೆತಿದ್ದು, ಈ ಬಗ್ಗೆ ತನಿಖೆ ಕೈಗೊಳ್ಳಲಾಗಿದೆ. ಅಪಘಾತದಲ್ಲಿ ಮೂವರು ಮೃತಪಟ್ಟಿದ್ದು, ಮೃತರು ಪಾಂಡವಪುರ ತಾಲೂಕಿನ ಚಿಕ್ಕಾಡೆ ಗ್ರಾಮದವರು. ಇಬ್ಬರು ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.**
> – ಸಂತೋಷ್ ಬಾಬು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ.

> **ಮುಂದೆ ಹೋಗುತ್ತಿದ್ದ ಕ್ಯಾಂಟರ್ ಚಾಲಕ ಇದ್ದಕ್ಕಿದ್ದಂತೆ ಬ್ರೇಕ್ ಹಾಕಿದ್ದರಿಂದ ನಮ್ಮ ಚಾಲಕ ನಿಯಂತ್ರಣ ಕಳೆದುಕೊಂಡು ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದ್ದಾನೆ. ಅಪಘಾತಕ್ಕೆ ಕ್ಯಾಂಟರ್ ವಾಹನ ಚಾಲಕನ ಅಜಾಗರೂಕತೆಯೇ ಕಾರಣ.**
> –ಪ್ರದೀಪ್, ಗಾಯಾಳು.

ಮೈಸೂರಲ್ಲಿ ಕ್ರಿಸ್‌ಮಸ್ ಸಂಭ್ರಮ: ಹರಿದು ಬರುತ್ತಿದೆ ಪ್ರವಾಸಿಗರ ದಂಡು



ಮೂರ್ನಾಲ್ಕು ದಿನದಿಂದ ವಾಹನ ದಟ್ಟಣೆ



ಮೈಸೂರು,ಡಿ.24(ಆರ್‌ಕೆ)–ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರ ದಂಡೇ ಹರಿದುಬರುತ್ತಿದೆ.

ಇಂದು (ಡಿ. 24) ನಾಲ್ಕನೇ ಶನಿವಾರದ ರಜೆ, ನಾಳೆ (ಡಿ. 25) ಕ್ರಿಸ್‌ಮಸ್ ಹಾಗೂ ಅರಮನೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನ ಆಯೋಜಿಸಿರುವುದರಿಂದ ರಾಜ್ಯವೇ ಅಲ್ಲದೆ ನೆರೆಯ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಗೋವಾದಿಂದಲೂ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಶುಕ್ರವಾರವೇ ಮೈಸೂರಿನ ಎಲ್ಲಾ ಹೋಟೆಲ್‌ಗಳಲ್ಲಿ ಕೊಠಡಿಗಳು ಭರ್ತಿಯಾಗಿದ್ದು, ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಸೆಂಟ್ ಫಿಲೋಮಿನಾ ಚರ್ಚ್ ಸೇರಿದಂತೆ ಎಲ್ಲಾ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ನೂಕು–ನುಗ್ಗಲು ಇತ್ತು. ಅದೇ ರೀತಿ ಸುತ್ತಲಿನ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣದ ಶ್ರೀ ರಂಗನಾಥ ದೇವಾಲಯ, ದರಿಯಾ ದೌಲತ್, ಶ್ರೀ ನಿಮಿಷಾಂಬ ದೇವಸ್ಥಾನಗಳಲ್ಲೂ ಪ್ರವಾಸಿಗರ ದಂಡು ಕಾಣುತ್ತಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಹೊರ ರಾಜ್ಯಗಳಿಂದಲೂ ಶಾಲಾ ಮಕ್ಕಳನ್ನು ಮೈಸೂರಿಗೆ ಕರೆತರುತ್ತಿರುವುದರಿಂದ ಎಲ್ಲಿ ನೋಡಿದರೂ ಪ್ರವಾಸಿಗರ ವಾಹನ ಸಂಚಾರ ದಟ್ಟವಾಗಿದ್ದು, ಹೋಟೆಲ್‌ಗಳಲ್ಲಿ ತಿಂಡಿ–ಊಟಕ್ಕೆ ಭಾರೀ ಬೇಡಿಕೆ ಉಂಟಾಗಿದೆ. ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪ, ಸಿದ್ದಾರ್ಥನಗರದ ಸಿಐಟಿಬಿ ಕಲ್ಯಾಣ ಮಂಟಪ, ಸಮುದಾಯ ಭವನಗಳಲ್ಲಿ ರಾತ್ರಿವೇಳೆ ನಾನಾ ಕಡೆಯಿಂದ ಶಾಲಾ ಪ್ರವಾಸ ಬಂದಿರುವ ವಿದ್ಯಾರ್ಥಿಗಳಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದ್ದು, ಹೋಟೆಲ್‌ಗಳಿಂದ ತಿಂಡಿ–ಊಟ ಪೂರೈಸಲಾಗುತ್ತಿದೆ. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಆಯೋಜಿಸಿರುವ ಅಂಬಾರಿ ಡಬಲ್ ಡೆಕ್ಕರ್ ಬಸ್ಸಿಗೂ ಭಾರೀ ಬೇಡಿಕೆ ಉಂಟಾಗಿದ್ದು, ರಜಾ ದಿನಗಳಲ್ಲಿ ನಿತ್ಯ 4 ಬಸ್ಸುಗಳು 6 ಟ್ರಿಪ್‌ಗಳನ್ನು ಮಾಡುತ್ತಿವೆ. ಪ್ರವಾಸಿ ಟ್ಯಾಕ್ಸಿ, ಬಸ್, ಮಿನಿ ಬಸ್, ಟೆಂಪೋಗಳಿಗೂ ಭಾರೀ ಬೇಡಿಕೆ ಬಂದಿದೆಯಲ್ಲದೆ, ಪ್ರವಾಸಿ ಮಾರ್ಗದರ್ಶಿಗಳು ನಿರಂತರ ಸೇವೆ ಕಲ್ಪಿಸುತ್ತಿದ್ದಾರೆ.

ವಾಹನ ದಟ್ಟಣೆ: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಆಗಮಿಸುತ್ತಿರುವುದರಿಂದ ಮೈಸೂರು ನಗರದಲ್ಲಿ ವಾಹನ ದಟ್ಟಣೆ ಉಂಟಾಗುತ್ತಿದ್ದು, ಬಿಎನ್ ರಸ್ತೆ, ಇರ್ವಿನ್ ರಸ್ತೆ, ಅರಮನೆ ಸುತ್ತಮುತ್ತ, ಧನ್ವಂತರಿ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಸೆಂಟ್ ಫಿಲೋಮಿನಾ ಚರ್ಚ್ ಸುತ್ತಲಿನ ರಸ್ತೆ, ಲಲಿತಮಹಲ್ ರಸ್ತೆ ಸೇರಿದಂತೆ ಮೈಸೂರು ನಗರದಾದ್ಯಂತ ಅಲ್ಲಲ್ಲಿ ಸಂಜೆ ಮತ್ತು ಬೆಳಗ್ಗೆ ಸಮಯದಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದ್ದು, ಸಂಚಾರ ಪೊಲೀಸರು ಪರದಾಡುವಂತಾಗಿದೆ.

ಮೈಸೂರು–ಬೆಂಗಳೂರು ರಸ್ತೆಯಲ್ಲಿ ಗುರುವಾರದಿಂದ ನಿತ್ಯ ಸಂಜೆಯಿಂದ ರಾತ್ರಿವರೆಗೂ ವಾಹನ ಸಂಚಾರವಿದ್ದು, ಮೈಸೂರಿಗೆ ಬರುವ ವಾಹನಗಳು ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಸಿಗ್ನಲ್‌ನಿಂದ ಮೂರ್ನಾಲ್ಕು ಕಿಲೋಮೀಟರ್ ಸಾಲುಗಟ್ಟಿ ನಿಲ್ಲುತ್ತಿವೆ. ಅಧಿಕ ಸಂಖ್ಯೆಯಲ್ಲಿ ವಾಹನಗಳು ಬರುತ್ತಿರುವುದರಿಂದ ಮೈಸೂರು ನಗರದಲ್ಲಿ ಪಾರ್ಕಿಂಗ್ ಮಾಡಲು ಜಾಗದ ಕೊರತೆಯಿಂದಾಗಿ ಪ್ರವಾಸಿಗರ ವಾಹನ ಚಾಲಕರು ಪರದಾಡುವಂತಾಗಿದೆ. ಕಳೆದ 2 ವರ್ಷಗಳಿಂದ ಕೋವಿಡ್‌ನಿಂದಾಗಿ ಕಳೆಗುಂದಿದ್ದ ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಯನ್ನು ಈ ಬಾರಿ ಅದ್ಧೂರಿಯಾಗಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಮೈಸೂರಿಗೆ ಬರುವ ನಿರೀಕ್ಷೆ ಇದೆ. ಇಲ್ಲಿನ ಸಂಚಾರ ದಟ್ಟಣೆ ನಿಭಾಯಿಸಲು ಪೊಲೀಸರು ಸರ್ವ ರೀತಿ ಸಿದ್ಧತೆ ಮಾಡಿಕೊಂಡಿದ್ದಾರೆ.

ನಾಡಿನ ಜನತೆಗೆ ಮೈಸೂರು ಬಿಷಪ್‌ರಿಂದ ಕ್ರಿಸ್‌ಮಸ್ ಸಂದೇಶ



ಮೈಸೂರು, ಡಿ. 24 (ಆರ್‌ಕೆ)– ನಾಡಿನ ಜನತೆಗೆ ಮೈಸೂರು ಪ್ರಾಂತ್ಯದ ಕ್ರೈಸ್ತ ಧರ್ಮಗುರು ರೆವರೆಂಡ್ ಫಾದರ್ ಡಾ.ಕೆ.ಆಂಟನಿ ವಿಲಿಯಂ ಅವರು 2022ರ ಕ್ರಿಸ್‌ಮಸ್ ಸಂದೇಶ ನೀಡಿದ್ದಾರೆ.

ಮೈಸೂರಿನ ಹೈವೇ ಸರ್ಕಲ್ ಬಳಿ ನಿರ್ಮಿಸಿರುವ ಬಿಷಪ್ ಹೌಸ್ ನೂತನ ಕಟ್ಟಡದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೊರೊನಾ ಪರಿಸ್ಥಿತಿಯಿಂದಾಗಿ ಕಳೆದ 2 ವರ್ಷ ಸರಳ ರೀತಿಯಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಗಿತ್ತು ಎಂದರು.

2 ಸಾವಿರ ವರ್ಷಗಳ ಹಿಂದೆ ಜನ್ಮ ತಾಳಿದ ಜೀಸಸ್ ಸಮಾಜದಲ್ಲಿದ್ದ ಅಸಮಾನತೆ ತೊಡೆದು ಹಾಕಿ ಶಾಂತಿ, ಪ್ರೀತಿ, ಬ್ರಾತೃತ್ವ ಬೆಳೆಸುವ ಉದ್ದೇಶದಿಂದ ಸಂದೇಶಗಳನ್ನು ಸಾರಿದರು. ನವೀನ ವಿಜ್ಞಾನ ತಂತ್ರಜ್ಞಾನವನ್ನು ಮಾನವನ ಅಭಿವೃದ್ಧಿಗಾಗಿ ಬಳಸಬೇಕೇ ಹೊರತು ಸರ್ವನಾಶಕ್ಕಲ್ಲ ಎಂಬ ಸಂದೇಶವನ್ನು ಪ್ರಚುರಪಡಿಸ ಬೇಕಾಗಿದೆ. ಸಂಸ್ಕೃತಿ, ನಂಬಿಕೆ, ಸಂಬಂಧಗಳನ್ನು ಬೆಸೆದು ಪರಸ್ಪರ ಪ್ರೀತಿ ವಿಶ್ವಾಸ ಮೂಡಿಸಿ ಸಮಾಜವನ್ನು ಶಾಂತಿಯ ನಾಡನ್ನಾಗಿಸುವ ಅವಶ್ಯಕತೆ ಇದೆ. ಮೌಲ್ಯಗಳೊಂದಿಗೆ ಶಾಂತಿ, ನೆಮ್ಮದಿಯ ಜೀವನ ನಡೆಸಿದಾಗ ಸಮೃದ್ಧ ಸಮಾಜ ನಿರ್ಮಿಸಲು ಸಾಧ್ಯ ಎಂಬುದನ್ನು ಏಸುಕ್ರಿಸ್ತ ಸಾರಿದ್ದರಿಂದಲೇ ಕ್ರಿಸ್‌ಮಸ್ ಹಬ್ಬವನ್ನು ಸಡಗರ–ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದು ಡಾ.ವಿಲಿಯಂ ನುಡಿದರು.

ಮನುಕುಲವು ಸ್ನೇಹ, ಸೌಹಾರ್ದತೆ, ಶಾಂತಿ–ಗೌರವದಿಂದ ಬಾಳೋಣ, ಸಮಾಜದ ಒಳತಿಗಾಗಿ ಕೆಲಸ ಮಾಡುವ ಮೂಲಕ ಇಡೀ ನಾಡನ್ನು ಸಮೃದ್ಧ ಮಾಡಬೇಕೆಂಬುದೇ ಕ್ರಿಸ್‌ಮಸ್ ಆಚರಣೆಯ ಮುಖ್ಯ ಉದ್ದೇಶ ಎಂದ ಬಿಷಪ್, ವೈರತ್ವ, ಅಹಂಕಾರ, ಕೋಪ, ಕ್ರೋಧಗಳನ್ನು ತ್ಯಜಿಸಿ ಒಳಿತು ಮಾಡೋಣ ಎಂಬ ಸಂದೇಶದ ಪ್ರತೀಕವೇ ಕ್ರಿಸ್‌ಮಸ್ ಎಂದರು.

ಕ್ರಿಸ್‌ಮಸ್ ಅಂಗವಾಗಿ ಈ ಭಾರಿ ಸೇಂಟ್ ಫಿಲೋಮಿನಾ, ಸೇಂಟ್ ಬಾರ್ತಲೋಮಿಯಾ, ವೆಸ್ಲಿ, ಹಿನಕಲ್, ರಾಮಕೃಷ್ಣನಗರ, ಗಾಯಿತ್ರಿಪುರಂ ಸೇರಿದಂತೆ ಮೈಸೂರಿನ ಎಲ್ಲಾ ಕ್ರೈಸ್ತ ದೇವಾಲಯಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ವಿಶೇಷ ಸಾಮೂಹಿಕ ಪ್ರಾರ್ಥನೆ ಏರ್ಪಡಿಸಲಾಗಿದೆ ಎಂದು ಅವರು ನುಡಿದರು.

ಸೇಂಟ್ ಫಿಲೋಮಿನಾ ಚರ್ಚ್ ಆವರಣದಲ್ಲಿ ಭೂಮಿಯಲ್ಲಿರುವ ಎಲ್ಲಾ ಪ್ರಾಣಿ, ಪಕ್ಷಿ, ಜಲಚರಗಳ ಪ್ರತಿರೂಪ ಸ್ಥಾಪಿಸಲಾಗಿದೆ. ಏಸುಕ್ರಿಸ್ತ ಜನಿಸಿದ ಕೊಟ್ಟಿಗೆ, ನಕ್ಷತ್ರ, ಗ್ರಹಗಳ ಆಕೃತಿ, ಬೆಟ್ಟ ಗುಡ್ಡ, ಮರ ಗಿಡ, ತೊರೆ, ನದಿಗಳನ್ನೊಳಗೊಂಡ ಪ್ರಕೃತಿಯನ್ನೇ ಸಿದ್ಧಪಡಿಸಲಾಗಿದ್ದು, ಸಾವಿರಾರು ಮಂದಿ ಪ್ರವಾಸಿಗರು ಭೇಟಿ ನೀಡಿ, ಸೆಲ್ಫಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಬಿಷಪ್ ರೆವರೆಂಡ್ ಫಾದರ್ ಡಾ. ಕೆ.ಎ.ವಿಲಿಯಂ ನುಡಿದರು. ಧರ್ಮ ಗುರುಗಳಾದ ರೆವರೆಂಡ್ ಫಾದರ್ ಆಲ್ಫ್ರೆಡ್ ಜಾನ್ ಮೆಂಡೋನ್ಸ್, ರೆ. ಫಾ. ಡೊಮಿನಿಕ್ ವಾಸ್, ಫಾ. ಜೋಸೆಫ್ ಪಾಕ್ಯರಾಜ್, ಫಾ. ಕ್ಲಿಫರ್ಡ್, ಫಾ. ವಿಜಯಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಾರ್ಡ್ ನಂ.19ರ ಹೊಸೂರು ಕಾಲೋನಿಯಲ್ಲಿ 40 ಲಕ್ಷ ರೂ. ವೆಚ್ಚದ ರಸ್ತೆಗಳಿಗೆ ಡಾಂಬರೀಕರಣ, ಇನ್ನಿತರೆ ಕಾಮಗಾರಿಗಳಿಗೆ ಹಾಗೂ ವಾರ್ಡ್ ನಂ.42ರ ಸರಸ್ವತಿಪುರಂ ಬಡಾವಣೆಯ 3ನೇ ಮೇನ್, 5ನೇ ಮೇನ್, ಜವರೇಗೌಡ ಪಾರ್ಕ್ ಸುತ್ತಲಿನ ರಸ್ತೆಗಳಿಗೆ 150 ಲಕ್ಷ ರೂ. ವೆಚ್ಚದಲ್ಲಿ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಕಾರ್ಪೊರೇಟರ್‌ಗಳಾದ ಶ್ರೀಮತಿ ಭಾಗ್ಯ ಮಾದೇಶ್, ಶಿವಕುಮಾರ್, ಪಿಡಬ್ಲ್ಯೂ ಡಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಾಗರಾಜು, ನಾಮ ನಿರ್ದೇಶಿತ ಸದಸ್ಯರಾದ ಚಿಕ್ಕವೆಂಕಟು, ಮುಖಂಡರಾದ ಸೋಮಶೇಖರರಾಜು, ಶಿವಕುಮಾರ್, ಶಿವಲಿಂಗು, ಗೋಪಾಲ್, ಮಹಾದೇವನ್, ಚಲುವೇಗೌಡ, ಚನ್ನಪ್ಪ, ಎಂ.ಸಿ.ಕುಮಾರ್, ಹರೀಶ್, ಪುನೀತ್, ಚಲುವರಾಜು, ಗೋವಿಂದರಾಜ್, ಬಾಬು, ಧನರಾಜ್, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಬೊಮ್ಮಾಯಿ ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಬಂಧನ

ಬೆಂಗಳೂರು: ಬೊಮ್ಮಾಯಿ ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿದ್ದ ಕರ್ನಾಟಕ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರನ್ನು ಪೊಲೀಸರು ಬಂಧಿಸಿದ್ದಾರೆ.



ಸಚಿವ ಮುನಿರತ್ನ ಅವರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು (ಡಿ.24) ಬೆಂಗಳೂರಿನ ವೈಯಾಲಿಕಾವಲ್ ಪೊಲೀಸರು, ಡಿ.ಕೆಂಪಣ್ಣ ಜೊತೆಗೆ ವಿ.ಕೃಷ್ಣಾರೆಡ್ಡಿ, ನಟರಾಜು, ಗುರುಸಿದ್ದಪ್ಪ ಅವರನ್ನೂ ಅರೆಸ್ಟ್ ಮಾಡಿದ್ದಾರೆ.

ಕೆಂಪಣ್ಣ ಅವರು ಇತ್ತೀಚೆಗೆ ಬೊಮ್ಮಾಯಿ ಸರ್ಕಾರ ಮಾತ್ರವಲ್ಲದೇ ಸಚಿವರುಗಳ ವಿರುದ್ಧವೂ ಸಹ ಕಮಿಷನ್ ಆರೋಪ ಮಾಡಿದ್ದರು. ಅದರಲ್ಲೂ ಸಚಿವ ಮುನಿರತ್ನ ಅವರ ವಿರುದ್ಧ ಬಹಿರಂಗವಾಗಿಯೇ ಕಮಿಷನ್ ಆರೋಪ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಮುನಿರತ್ನ ಅವರು ಕೆಂಪಣ್ಣ ಮಾನಹಾನಿ ಕೇಸ್ ದಾಖಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ದಂತೆ ಕೆಂಪಣ್ಣ ಅವರು ಕೋರ್ಟ್‌ಗೆ ಗೈರಾಗಿದ್ದಕ್ಕೆ ವಾರೆಂಟ್ ಜಾರಿಯಾಗಿತ್ತು ಬೆಂಗಳೂರಿನ 8ನೇ ಎಸಿಎಂಎಂ ಕೋರ್ಟ್, ರಾಜ್ಯ ಗುತ್ತಿಗೆದಾ ರರ ಸಂಘದ ಅಧ್ಯಕ್ಷನ ಡಿ.ಕೆಂಪಣ್ಣ ವಿ.ಕೃಷ್ಣಾರೆಡ್ಡಿ ಸೇರಿ 19 ಪ್ರತಿವಾದಿಗಳ ವಿರುದ್ಧ ಜಾಮೀನು ರಹಿತ ವಾರೆಂಟ್ ಹೊರಡಿಸಿತ್ತು. ಆದರೂ ೦ಯಾವುದೇ ಉತ್ತರ ನೀಡದಿದ್ದರಿಂದ ಬಂಧಿಸಲಾಗಿದೆ ಎಂದು ತಿಳಿದುಬಂದಿದೆ.

ಕಮಿಷನ್ ಆರೋಪ ಮಾಡಿದ್ದ ಕೆಂಪಣ್ಣ: ಮೊದಲಿಗೆ ಕರ್ನಾಟಕ ಬಿಜೆಪಿ ಸರ್ಕಾರದ ವಿರುದ್ಧ 40% ಕಮಿಷನ್ ಆರೋಪ ಮಾಡಿದ್ದ ಕೆಂಪಣ್ಣ,ಬಳಿಕ MLAಗಳಿಗೆ 10 ಪರ್ಸೆಂಟ್ ಕಮಿಷನ್ ಕೊಡಬೇಕು, ಮಂತ್ರಿಗಳಿಗೆ ಶೇಕಡಾ 5ರಷ್ಟು ಪರ್ಸೆಂಟೇಜ್ ಕೊಡಬೇಕು ಎಂಬ ಸ್ಫೋಟಕ ಬಾಂಬ್ ಸಿಡಿಸಿದ್ದರು.

ಕೆಂಪಣ್ಣಗೆ ಪಿಎಂ ಕಾ೦ರ್ಯಾಲ೦ಯದಿಂದ ಕರೆ: ರಾಜ್ಯದಲ್ಲಿ 40 ಪಸೆಂಟ್ ಕಮಿಷನ್ ವ್ಯವಹಾರ ನಡೆ೦ಯುತ್ತಿದೆ ಎಂದು ಆರೋಪಿಸಿ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣಗೆ ಪ್ರಧಾನಿ ನರೇಂದ್ರ ಮೋದಿ ಕಾ೦ರ್ಯಾಲ೦ಯದ ಅಧಿಕಾರಿಗಳು ಕರೆ ಮಾಡಿ ಮಾತನಾಡಿದ್ದರು. ಆರೋಪದ ಬಗ್ಗೆ ಸಂಪೂರ್ಣ ವರದಿ ನೀಡುವಂತೆ ಪಿಎಂ ಕಾ೦ರ್ಯಾಲ೦ಯವು ಕೆಂಪಣ್ಣ ಅವರಿಗೆ ಸೂಚನೆ ನೀಡಿತ್ತು.

ಲೋಕಾಯುಕ್ತ ಬಲೆಗೆ ಬಿದ್ದ ಮುಡಾ ಎಫ್‌ಡಿಎ ರಂಗಪ್ಪ ಅಮಾನತು ನಿರ್ಧಾರ

- ತಹಸೀಲ್ದಾರ್ ವಿಚಾರದಲ್ಲಿ ಕಂದಾಯ ಇಲಾಖೆಗೆ ವರದಿ
- ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಪ್ರತಿಕ್ರಿಯೆ

ಮೈಸೂರು,ಡಿ.24(ಆರ್‌ಕೆ)–ನಿವೇಶನಗಳಿಗೆ ಖಾತೆ ಮಾಡಿಕೊಡಲು 14 ಸಾವಿರ ರೂ. ಲಂಚ ಪಡೆದು ಲೋಕಾಯುಕ್ತ ಬಲೆಗೆ ಬಿದ್ದು, ಜೈಲು ಸೇರಿರುವ ಎಫ್‌ಡಿಎ ರಂಗಪ್ಪ ಅಲಿಯಾಸ್ ರಂಗಣ್ಣನನ್ನು ಸೋಮವಾರ ಸೇವೆಯಿಂದ ಅಮಾನತುಗೊಳಿಸಲಾಗುವುದು ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ನಗದು ಸಮೇತ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿರುವ ರಂಗಪ್ಪ ನ್ಯಾಯಾಂಗ ಬಂಧನದಲ್ಲಿರುವುದರಿಂದ ನಿಯಮಾನುಸಾರ ಸೇವೆಯಿಂದ ಅಮಾನತು ಮಾಡುತ್ತೇನೆ ಎಂದರು.

ವಿಶೇಷ ತಹಶೀಲ್ದಾರ್ ಶ್ರೀನಿವಾಸ್ ಅವರೂ ಪ್ರಕರಣದಲ್ಲಿ ಆರೋಪಿತರಾಗಿ ಜೈಲು ಸೇರಿರುವುದರಿಂದ ಘಟನೆ ಸಂಬಂಧ ಅವರ ಮಾತೃ ಇಲಾಖೆ ಕಂದಾಯ ಇಲಾಖೆ ಮುಖ್ಯಸ್ಥರಿಗೆ ವರದಿ ನೀಡುತ್ತೇನೆ. ವಿಶೇಷ ತಹಶೀಲ್ದಾರ್ ಮಟ್ಟದ ಅಧಿಕಾರಿಯನ್ನು ಅಮಾನತುಪಡಿಸಲು ನನಗೆ ಅಧಿಕಾರವಿಲ್ಲ ಎಂದು ತಿಳಿಸಿದ್ದಾರೆ. ಉಳಿದಂತೆ ಡಿ–ಗ್ರೂಪ್ ಸಿಬ್ಬಂದಿ ವರಲಕ್ಷ್ಮಿ ಹೊರ ಗುತ್ತಿಗೆ ನೌಕರರಾದ ಕಾರಣ, ಕೆಲಸದಿಂದ ಬಿಡು ಗಡೆ ಮಾಡಲಾಗುವುದು. ಅವರನ್ನು ಅಮಾನತುಪಡಿಸುವ ಅಗತ್ಯವಿಲ್ಲ ಎಂದರು.

ಅಂಗಡಿ ಬೀಗ ಮುರಿದು 1.50 ಲಕ್ಷ ಮೌಲ್ಯದ ವಸ್ತು, 12 ಸಾವಿರ ನಗದು ಕಳವು

ಮೈಸೂರು, ಡಿ.24–ಕೇವಲ 15 ದಿನದ ಹಿಂದೆಯಷ್ಟೇ ಆರಂಭಿಸಲ್ಪಟ್ಟ ಅಂಗಡಿಯೊಂದರ ಬೀಗ ಮುರಿದು 1.50 ಲಕ್ಷ ರೂ. ಮೌಲ್ಯದ ವಸ್ತುಗಳು ಹಾಗೂ 12 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ಮೈಸೂರಿನ ಆಲನಹಳ್ಳಿ ಸಮೀಪವಿರುವ ತಿ.ನರಸೀಪುರ ಸಿಗ್ನಲ್ ಲೈಟ್ ಬಳಿಯ ರಿಂಗ್ ರಸ್ತೆಯಲ್ಲಿ ನಡೆದಿದೆ.

ಈ ರಸ್ತೆಯಲ್ಲಿ ತಿ.ನರಸೀಪುರ ನಿವಾಸಿ ಜಿತೇಂದ್ರ(22) ಎಂಬುವರು 15 ದಿನಗಳ ಹಿಂದೆಯಷ್ಟೇ ಕೃಷ್ಣ ಎಲೆಕ್ಟ್ರಿಕಲ್ ಅಂಡ್ ಹಾರ್ಡ್‌ವೇರ್ ಅಂಗಡಿ ಆರಂಭಿಸಿದ್ದರು. ಡಿ.20ರಂದು ರಾತ್ರಿ ಅಂಗಡಿ ಬಾಗಿಲು ಹಾಕಿಕೊಂಡು ಊರಿಗೆ ಹೋಗಿದ್ದು, ಮರುದಿನ ಬೆಳಗ್ಗೆ ಬಂದಾಗ ರೋಲಿಂಗ್ ಶೆಟ್ಟರ್‌ಗೆ ಹಾಕಿದ್ದ ಬೀಗ ಮುರಿದಿರುವುದು ಕಂಡು ಬಂದಿದೆ. ಖದೀಮರು ಅಂಗಡಿಯಲ್ಲಿದ್ದ 1.50 ಲಕ್ಷ ರೂ. ಮೌಲ್ಯದ ವೈರ್ ಹಾಗೂ ಬಲ್ಬ್‌ಗಳು ಮತ್ತು ಕ್ಯಾಷ್ ಕೌಂಟರ್‌ನಲ್ಲಿದ್ದ 12 ಸಾವಿರ ರೂ. ಕಳವು ಮಾಡಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲೆ ಮಹದೇಶ್ವರ ರಸ್ತೆ ಅಭಿವೃದ್ಧಿ ಕಾಮಗಾರಿ: ಅಧಿಕಾರಿಗಳ ವಿವೇಚನಾರಹಿತ ನಿರ್ಧಾರದಿಂದ ಪ್ರವಾಸಿಗರ ಪರದಾಟ!

ಕಾಮಗಾರಿಗಳನ್ನು ಯಾವ ಕಾಲದಲ್ಲಿ ಕೈಗೆತ್ತಿಕೊಳ್ಳಬೇಕು ಎಂಬುದನ್ನು ಅಧಿಕಾರಿಗಳಿಗೆ ಹೇಳಿಕೊಡಬೇಕಾ...!

ಮೈಸೂರು,ಡಿ.24–ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಆಗದಂತೆ ರಸ್ತೆ ಕಾಮಗಾರಿಗಳನ್ನು ಯಾವ ಸಂದರ್ಭದಲ್ಲಿ ಕೈಗೆತ್ತಿಕೊಳ್ಳಬೇಕು ಎಂಬ ವಿವೇಚನೆ ಅಧಿಕಾರಿಗಳಲ್ಲಿ ಇರಬೇಕು. ಆದರೆ, ಮೈಸೂರಿನಲ್ಲಿ ಅಧಿಕಾರಿಗಳು ಈ ವಿಚಾರದಲ್ಲಿ ವಿವೇಕರಹಿತರಾಗಿದ್ದಾರೆ ಎಂಬುದಕ್ಕೆ ಮಲೆ ಮಹದೇಶ್ವರ ರಸ್ತೆ ಅಭಿವೃದ್ಧಿ ಕಾಮಗಾರಿಯೇ ದಿಟ್ಟ ನಿದರ್ಶನ.

ಕ್ರಿಸ್‌ಮಸ್ ಆಚರಣೆ, ಮೂರ್ನಾಲ್ಕು ದಿನ ಕಳೆದರೆ ಹೊಸ ವರ್ಷಾಚರಣೆ. ಹೀಗಾಗಿ ಮೈಸೂರಿಗೆ ಆಗಮಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುತ್ತದೆ. ಪ್ರವಾಸಿಗರ ವಾಹನ ಸಂಚಾರವೂ ಕೂಡ ಅಧಿಕವಾಗಿರುತ್ತದೆ. ನಗರಕ್ಕೆ ಆಗಮಿಸುವ ಪ್ರವಾಸಿಗರು ಹಾಗೂ ವಾಹನಗಳು ಸರಾಗವಾಗಿ ಸಂಚರಿಸುವಂತಹ ಸೌಕರ್ಯವನ್ನು ಮಾಡಿಕೊಡುವುದು ಸ್ಥಳೀಯ ಆಡಳಿತದ ಆದ್ಯ ಕರ್ತವ್ಯ. ಮೇಲಾಗಿ ಮೈಸೂರು ಪ್ರಸಿದ್ಧ ಪ್ರವಾಸಿ ತಾಣವಾಗಿದೆ.

ಆದರೆ, ಮಲೆ ಮಹದೇಶ್ವರ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ನಜರ್‌ಬಾದ್ ಪೊಲೀಸ್ ಠಾಣೆ ವೃತ್ತದಿಂದ ಡೈರಿ ಸರ್ಕಲ್‌ವರೆಗೆ ವಾಹನ ಸಂಚಾರವನ್ನು ನಿಷೇಧಿಸಿ, ರಸ್ತೆ ಬಂದ್ ಮಾಡಲಾಗಿದೆ. ಹೀಗಾಗಿ ಈ ರಸ್ತೆಯಲ್ಲಿ ಸಂಚರಿಸಬಹುದಾದ ಎಲ್ಲಾ ವಾಹನಗಳು ಪರ್ಯಾಯ ಮಾರ್ಗಗಳಲ್ಲಿ ಸಾಗಬೇಕಾದಂತಹ ಅನಿವಾರ್ಯತೆ ಬಂದೊದಗಿದೆ.ಇದರ ಪರಿಣಾಮವಾಗಿ ತಿ.ನರಸೀಪುರ, ಬನ್ನೂರು, ಮಳವಳ್ಳಿ ಮಾತ್ರವಲ್ಲ ಬೆಂಗಳೂರಿಗೆ ಪ್ರಯಾಣಿಸುವ ಪರ್ಯಾಯ ಮಾರ್ಗವಾಗಿರುವ ಈ ರಸ್ತೆಯಲ್ಲಿ ಸಾಗಬೇಕಾದ ವಾಹನಗಳು ಎಸ್ಪಿ ಕಚೇರಿ ರಸ್ತೆ, ಚಾಮುಂಡಿಬೆಟ್ಟ ರಸ್ತೆ, ಮೃಗಾಲಯ ಸುತ್ತಮುತ್ತಲಿನ ರಸ್ತೆಗಳು, ಕಾರಂಜಿಕೆರೆ ರಸ್ತೆ, ಲಲಿತಮಹಲ್ ರಸ್ತೆ ಹಾಗೂ ಸಿದ್ದಾರ್ಥನಗರದ ಅಡ್ಡ ರಸ್ತೆಗಳಲ್ಲಿ ಸಂಚರಿಸುತ್ತಿರುವುದರಿಂದ ವಾಹನ ಚಾಲಕರಿಗೆ ಮಾತ್ರವಲ್ಲದೇ, ತುರ್ತು ವಾಹನಗಳ ಸಂಚಾರಕ್ಕೂ ತೀವ್ರ ಅಡಚಣೆಯಾಗುತ್ತಿದೆ. ಬನ್ನೂರು ರಸ್ತೆ ಮಾರ್ಗವಾಗಿ ಗೋಪಾಲಗೌಡ ಆಸ್ಪತ್ರೆಗೆ ಬರುವ ವಾಹನಗಳು ಡೈರಿ ಸರ್ಕಲ್ ಬಳಿ ಬಂದಾಗ ರಸ್ತೆ ಬಂದ್ ಆಗಿರುವುದನ್ನು ನೋಡಿ ವಾಪಸ್ ಹೋಗಿ ಪರ್ಯಾಯ ಮಾರ್ಗದಲ್ಲಿ ಸುತ್ತಿ ಬಳಸಿ ಬರಬೇಕಾದ ಅನಿವಾರ್ಯತೆ ಒದಗಿದೆ. ಮೈಸೂರಿಗೆ ಈ ಮಾರ್ಗವಾಗಿ ಬರುವ ಪ್ರವಾಸಿ ವಾಹನಗಳ ಚಾಲಕರು ಪರ್ಯಾಯ ರಸ್ತೆ ಗೊತ್ತಿಲ್ಲದೇ ಪರದಾಡುತ್ತಿರುವ ಪರಿಸ್ಥಿತಿಯೂ ಕೂಡ ಕಾಣಬಹುದಾಗಿದೆ.





ನವೆಂಬರ್ ಅಥವಾ ಜನವರಿ ನಂತರ ವಾಹನ ಸಂಚಾರ ಅಧಿಕವಿರುವ ಈ ಪ್ರಮುಖ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದಾಗಿತ್ತು. ಆದರೆ, ಈ ವಿಷಯದಲ್ಲಿ ಅಧಿಕಾರಿಗಳು ವಿವೇಚನೆಯುಕ್ತ ನಿರ್ಧಾರ ಕೈಗೊಂಡಿಲ್ಲ. ದುರದೃಷ್ಟವಶಾತ್ ಇತ್ತೀಚಿನ ವರ್ಷಗಳಲ್ಲಿ ಮೈಸೂರಿನಲ್ಲಿ ಹೇಳಿಕೊಳ್ಳುವಂತಹ ವಿವೇಚನೆ ಹಾಗೂ ಪ್ರಬುದ್ಧತೆ ಇರುವ ಅಧಿಕಾರಿಗಳು ಕಾಣಬರುತ್ತಿಲ್ಲ.

ವಿಯೆಟ್ನಾಂನಂತಹ ಪುಟ್ಟ ಬಡ ದೇಶಗಳಲ್ಲೂ ಸಾರ್ವಜನಿಕರಿಗೆ ತೊಂದರೆ ಆಗಬಾರದೆಂಬ ಉದ್ದೇಶದಿಂದ ರಸ್ತೆ ಕಾಮಗಾರಿಗಳನ್ನು ರಾತ್ರಿ ವೇಳೆ ಕೈಗೆತ್ತಿಕೊಳ್ಳಲಾಗುತ್ತದೆ. ಆದರೆ ನಮ್ಮಲ್ಲಿ ಸ್ವಲ್ಪವೂ ಮುಂದಾಲೋಚನೆ ಇಲ್ಲದೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ ಎಂಬ ಕನಿಷ್ಟ ಪರಿಜ್ಞಾನವೂ ಇಲ್ಲದೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಜನ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತಹ ಹೀನ ಪ್ರವೃತ್ತಿ ಮುಂದುವರೆದಿದೆ.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯನವರ ಜನ್ಮದಿನ ಆಚರಣೆ

ವೀರಯೋಧರ ಸ್ಮರಣೆ ಮೂಲಕ ದೇಶಾಭಿಮಾನ ಮೆರೆಯಿರಿ



ಮಡಿಕೇರಿ, ಡಿ.24– 1965ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ(ಮರಣೋತ್ತರ) ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ ಜನ್ಮದಿನವನ್ನು ಕೊಡವ ಮಕ್ಕಡ ಕೂಟದಿಂದ ಆಚರಿಸಲಾಯಿತು.

ನಗರದ ಸ್ಕ್ವಾಲೀ. ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲಿರುವ ಅಜ್ಜಮಾಡ ಬಿ.ದೇವಯ್ಯನವರ ಪುತ್ಥಳಿಗೆ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು. ನಂತರ ಮಾತನಾಡಿದ ಅವರು, ವೀರಯೋಧರ ಸ್ಮರಣೆಯ ಮೂಲಕ ಗೌರವ ಸಲ್ಲಿಸುವುದರೊಂದಿಗೆ ಪ್ರತಿಯೊಬ್ಬರು ದೇಶಾಭಿಮಾನ ಮೆರೆಯಬೇಕೆಂದು ಕರೆ ನೀಡಿದರು. ಅಜ್ಜಮಾಡ ಕುಟುಂಬದ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಕೊಡವ ಮಕ್ಕಡ ಕೂಟದ ಸದಸ್ಯರು ಹಾಗೂ ಅಭಿಮಾನಿಗಳು ಹಾಜರಿದ್ದರು.

ಅಮರರಾದ ದೇವಯ್ಯ: 1965ನೇ ಇಸವಿ ಭಾರತ–ಪಾಕ್ ಯುದ್ಧದ ಸಂದರ್ಭ ವಿಂಗ್ ಕಮಾಂಡರ್ ಆಗಿದ್ದ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರಿಗೆ ಪಾಕ್ ಭದ್ರಕೋಟೆಯಾಗಿದ್ದ ಸರಗೋಡ ವಾಯುನೆಲೆಯ ಮೇಲೆ ದಾಳಿ ನಡೆಸುವ ಜವಾಬ್ದಾರಿ ವಹಿಸಲಾಗಿತ್ತು. ದೇವಯ್ಯ ಅವರ ತಂಡ ಶತ್ರುಗಳ ವಾಯುನೆಲೆಯನ್ನು ಧ್ವಂಸಗೊಳಿಸಿ ಹಿಂತಿರುಗಿ ಬರುವ ಸಂದರ್ಭದಲ್ಲಿ ಶತ್ರು ಸೇನೆಯ ಯುದ್ಧ ವಿಮಾನಗಳು ಹಿಂಬಾಲಿಸಿ ದಾಳಿಗೆ ಮುಂದಾದವು. ಆ ವೇಳೆ ತಮ್ಮ ತಂಡದ ಇತರೆ ಯುದ್ಧ ವಿಮಾನಗಳ ಮೇಲೆ ದಾಳಿಯಾಗದಿರಲಿ ಎಂದು ಬೆಂಗಾವಲಾಗಿ ಬರುತ್ತಿದ್ದ ಸ್ಕ್ವಾಡ್ರನ್ ಲೀಡರ್ ದೇವಯ್ಯ, ಹಿಂಬಾಲಿಸಿದ ಶತ್ರು ವಿಮಾನದೊಂದಿಗೆ ಮತ್ತೆ ಹೋರಾಟ ನಡೆಸಬೇಕಾದ ಅನಿವಾರ್ಯತೆ ಎದುರಾಯಿತು.

ಎದೆಗುಂದದ ದೇವಯ್ಯ ಅವರು ಪ್ರಾಣದ ಹಂಗು ತೊರೆದು ಹೋರಾಟ ಮುಂದುವರೆಸಿ ಶತ್ರುಗಳ ಬಲಿಷ್ಠವಾದ ಸೂಪರ್ ಸಾನಿಕ್ ವಿಮಾನವನ್ನು ಹೊಡೆದುರುಳಿಸುವ ಮೂಲಕ ಭಾರತೀಯ ವಾಯುಪಡೆಯಲ್ಲಿ ಅಮೋಘ ಸಾಹಸದ ದಾಖಲೆ ಬರೆದರು. ಹೋರಾಟದ ಕೊನೆಯಲ್ಲಿ ದೇವಯ್ಯನವರ ಯುದ್ಧ ವಿಮಾನಕ್ಕೂ ಹಾನಿಯಾಯಿತು. ಆ ಸಂದರ್ಭ ಪ್ಯಾರಾಚೂಟ್ ಮೂಲಕ ಸುರಕ್ಷಿತವಾಗಿ ಹೊರ ಜಿಗಿಯುವ ಅವಕಾಶವಿತ್ತಾದರೂ ಶತ್ರುವಿಗೆ ಸೆರೆಯಾಗಲು ದೇವಯ್ಯ ತಯಾರಿರಲಿಲ್ಲ. ಪರಿಣಾಮ ಯುದ್ಧವಿಮಾನ ಪತನಗೊಂಡು ದೇವಯ್ಯ ಹುತಾತ್ಮರಾದರು.

ಕೊಡಗಿನ ಶ್ರೀಮಂಗಲದ ಕುರ್ಚಿ ಗ್ರಾಮದ ಅಜ್ಜಮಾಡ ಬೋಪಯ್ಯ, ನೀಲಮ್ಮ ದಂಪತಿಗಳ ಪುತ್ರ ದೇವಯ್ಯ 1954ರಲ್ಲಿ ಸೇನೆಗೆ ಸೇರಿ 11 ವರ್ಷಗಳ ದೇಶ ಸೇವೆಯಲ್ಲಿ ಅಸಾಮಾನ್ಯ ಸಾಹಸ ಮೆರೆದಿದ್ದಾರೆ. ಇವರ ತ್ಯಾಗ–ಬಲಿದಾನವನ್ನು ಪರಿಗಣಿಸಿ ಭಾರತ ಸರ್ಕಾರ ಮರಣೋತ್ತರವಾಗಿ 1988ರಲ್ಲಿ 'ಮಹಾವೀರ ಚಕ್ರ' ಪ್ರಶಸ್ತಿಯನ್ನು ನೀಡಿತು. ಅಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರು ದಿ.ದೇವಯ್ಯ ಅವರ ಪತ್ನಿ ಸುಂದರಿ ದೇವಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದ್ದರು.

ರಾಜಾಸೀಟಿನ ಪ್ರಕೃತಿ ಮಡಿಲಲ್ಲಿ ಜೇನು ಉತ್ಸವ

ವೈವಿಧ್ಯಮಯ ಜೇನಿನ ಸಿಹಿ ಸವಿದ ಪ್ರವಾಸಿಗರು, ಕೃಷಿಕರು



ಮಡಿಕೇರಿ,ಡಿ.24– ಪ್ರಕೃತಿಯನ್ನು ಸಮತೋಲನದಲ್ಲಿಡಲು ಜೇನು ಹುಳುಗಳು ಮಹತ್ವದ ಕಾಣಿಕೆ ನೀಡುತ್ತಿವೆ. ಜೇನುಹುಳುಗಳಿಂದ ಜೇನು ಕೃಷಿಯನ್ನು ನಡೆಸುವ ಎಲ್ಲ ಹಂತಗಳ ಸೂಕ್ಷ್ಮತೆಗಳನ್ನು ತೆರೆದಿಡುತ್ತಲೆ, ವಿವಿಧ ಋತುಗಳ ಜೇನಿನ ಸವಿಯುಣಿಸುವ 'ಜೇನು ಉತ್ಸವ' ಪ್ರಕೃತಿ ರಮಣೀಯ ರಾಜಾಸೀಟಿನಲ್ಲಿ ಆರಂಭಗೊಂಡಿದ್ದು, ಜೇನು ಕೃಷಿಕರು ಹಾಗೂ ಪ್ರವಾಸಿಗರನ್ನು ತನ್ನೆಡೆಗೆ ಸೆಳೆಯಲಾರಂಭಿಸಿದೆ.

ಕೊಡಗು ಜಿಲ್ಲಾಡಳಿತ, ಕೊಡಗು ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿರುವ 'ಜೇನು ಉತ್ಸವ'ದಲ್ಲಿ ಕೊಡಗು ಮತ್ತು ನೆರೆಯ ದಕ್ಷಿಣ ಕನ್ನಡದ ವಿವಿಧ ಸಂಘ ಸಂಸ್ಥೆಗಳ 17 ಮಳಿಗೆಗಳನ್ನು ಹಾಕಲಾಗಿದೆ. ಜೇನು ಕೃಷಿಗೆ ಸಂಬಂಧಿಸಿದ ಉಪಕರಣಗಳು, ಜೇನನ್ನು ಪ್ರದರ್ಶಿಸಿ ಮಾರಾಟ ಮಾಡಲು ಅವಕಾಶವನ್ನು ಒದಗಿಸಲಾಗಿದೆ. ಇದು ಜಿಲ್ಲೆಯಲ್ಲಿ ಮತ್ತೆ ಜೇನಿನ ಪುನರುಜ್ಜೀವನಕ್ಕೆ ಹೊಸ ಹಾದಿಯನ್ನು ತೋರ್ಪಡಿಸುವ ನಿರೀಕ್ಷೆಗಳನ್ನು ಗರಿಗೆದರಿಸಿದೆ.

ಆಸಕ್ತಿ ಮೂಡಿಸುವ ಪ್ರಯತ್ನ: ಕೆಲ ದಶಕಗಳ ಹಿಂದೆ ಕೊಡಗು ಜಿಲ್ಲೆಯಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಜೇನಿನ ಉತ್ಪಾದನೆಯಾಗುತಿತ್ತು. ಜೇನು ಹುಳುಗಳು 'ಥಾಯಿ ಸ್ಯಾಕ್ ಬ್ರೂಡ್' ಎನ್ನುವ ಕಾಯಿಲೆಗೆ ತುತ್ತಾಗಲಾರಂಭಿಸಿದ ಬಳಿಕ ಜೇನಿನ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಕುಂಠಿತವಾಯಿತು. ಈ ನಡುವೆ ಇತ್ತೀಚಿನ ವರ್ಷಗಳಲ್ಲಿ ನಿಧಾನವಾಗಿ ಮತ್ತೆ ಜೇನಿನ ಉತ್ಪಾದನೆ ಹೆಚ್ಚುತ್ತಿದೆ. ಹೀಗಿದ್ದೂ, ಜೇನು ಕೃಷಿಯತ್ತ ಕೃಷಿಕರ ಆಸಕ್ತಿ ನಿರೀಕ್ಷೆಯ ಮಟ್ಟದಲ್ಲಿ ಕಂಡು ಬರುತ್ತಿಲ್ಲ. ಕೃಷಿಕರಲ್ಲಿ ಮತ್ತೆ ಜೇನು ಕೃಷಿಯತ್ತ ಆಸಕ್ತಿ ಮೂಡಿಸುವ ಪ್ರಯತ್ನ ಜೇನು ಉತ್ಸವದ ಪ್ರಮುಖ ಉದ್ದೇಶವಾಗಿದೆ.

ವಿವಿಧ ರುಚಿಯ ಜೇನು: ಆಯಾ ಋತುಮಾನಗಳಲ್ಲಿ ಪರಿಸರದಲ್ಲಿ ಹೆಚ್ಚಾಗಿ ಅರಳುವ ನಿರ್ದಿಷ್ಟ ಸಸ್ಯ ಸಂಪತ್ತಿನ ವನಸುಮಗಳು ಜೇನಿನ ರುಚಿಯನ್ನು ನಿರ್ಧರಿಸುತ್ತವೆ. ಇಂತಹ ಸೂಕ್ಷ್ಮವನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಗಮನ ಸೆಳೆಯುತ್ತಿದೆ. ಜೇನು ಉತ್ಸವದಲ್ಲಿ ಇವರ ಮಳಿಗೆಯಲ್ಲಿ ಕೊಡಗಿನಲ್ಲಿ ವಿವಿಧ ಹೂಗಳು ಅರಳುವ ಸಂದರ್ಭ ಸಂಗ್ರಹಿಸಿದ ಜೇನು, ಕಾಫಿ ಹೂ ಅರಳುವ ಸಂದರ್ಭ ಸಂಗ್ರಹವಾಗುವ ಒಂದಷ್ಟು ಕಹಿ ಒಗರಿನ ಜೇನು, ಏಕರೂಪದ ಹೂ ಅರಳುವ ಸಂದರ್ಭ ಹೆಚ್.ಡಿ.ಕೋಟೆಯಲ್ಲಿ ಸಂಗ್ರಹಿತ ಅತ್ಯಂತ ಹೆಚ್ಚಿನ ಸಿಹಿಯನ್ನು ಹೊಂದಿದ ಜೇನಿನ ಈ ವೈವಿಧ್ಯಗಳು ಬೆರಗನ್ನು ಮೂಡಿಸುತ್ತವೆ.

ಕೃಷಿಕರಿಗೆ 'ಜೇನು ಪೆಟ್ಟಿಗೆಗಳು': ಜೇನು ಉತ್ಸವದ ಬಹುತೇಕ ಮಳಿಗೆಗಳಲ್ಲಿ ಸರಿಸುಮಾರು ಸಾವಿರ ರೂ.ಗಳ ಆಸುಪಾಸಿನಲ್ಲಿ ಜೇನು ಪೆಟ್ಟಿಗೆಗಳು ಲಭ್ಯವಿದೆ. ಕೆಲ ಮಳಿಗೆಯವರು ಜೇನು ಪೆಟ್ಟಿಗೆಯೊಂದಿಗೆ ಜೇನು ಕಾಲೋನಿ(ರಾಣಿ ಹುಳು ಸೇರಿದಂತೆ ಜೇನುಹುಳು)ಗಳನ್ನು ಒದಗಿಸಲು ಸಿದ್ಧರಿದ್ದೇವೆ ಎಂದು ಹೇಳುತ್ತಾರೆ. ಇನ್ನು ಜೇನು ಪೆಟ್ಟಿಗೆಗಳಲ್ಲಿ 'ಮುಜೆಂಟಿ ಜೇನು' ಪೆಟ್ಟಿಗೆ ಕುತೂಹಲ ಮೂಡಿಸುತ್ತವೆ. ಮುಜೆಂಟಿ ಎಂದು ಕರೆಯುವ ಈ ಜೇನು ಹುಳುಗಳು ಅತ್ಯಂತ ಸಣ್ಣದಾಗಿದ್ದು, ಇವುಗಳನ್ನು ಪೆಟ್ಟಿಗೆಯಲ್ಲಿ ಕೂಡಿ ಹಾಕಿ ಜೇನು ಸಂಗ್ರಹಿಸುವುದು ಅತ್ಯಂತ ಸಾಹಸವೇ ಎನ್ನಬೇಕು. ಆದರೆ, ಇಂದು ಅದಕ್ಕಾಗಿಯೇ ವಿನೂತನವಾದ ಪೆಟ್ಟಿಗೆ ಸಿದ್ಧವಾಗಿದೆ. ಪರಿಸರದಲ್ಲಿ ನಮ್ಮ ನೋಟಕ್ಕೆ ಸಿಲುಕದ ಸಣ್ಣಸಣ್ಣ ಹೂಗಳಿಂದ ಮುಜೆಂಟಿ ಜೇನು ಹುಳುಗಳು ಪರಾಗವನ್ನು ಸಂಗ್ರಹಿಸುತ್ತವೆ. ಇದು ಅತ್ಯಂತ ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿರುವ ವಿಶೇಷವಾದ ಜೇನಾಗಿದ್ದು, 1 ಕೆ.ಜಿ. ಜೇನಿಗೆ ಕನಿಷ್ಠ 5 ಸಾವಿರ ರೂ. ಬೆಲೆ ಇದೆ ಎನ್ನುತ್ತಾರೆ ಜೇನು ಕೃಷಿಕರು. ಜೇನು ಪೆಟ್ಟಿಗೆಯೊಂದಿಗೆ ಕೃಷಿಕ ಎರಿ (ಜೇನು ಪೆಟ್ಟಿಗೆಯಲ್ಲಿ ಜೇನು ಹುಳುಗಳು ಜೇನು ಸಂಗ್ರಹಿಸಿಡಲು ಮಾಡಿಕೊಡುವ ವ್ಯವಸ್ಥೆ)ಗಳ ಮಾರಾಟ, ಜೇನು ಎರಿಗಳಿಂದ ಜೇನನ್ನು ತೆಗೆಯುವ ಯಂತ್ರ, ಕೈಗವಸು ಹೀಗೆ ಹತ್ತಾರು ಸಾಮಗ್ರಿಗಳು, ಜೇನು ಕೃಷಿಯ ಮಾಹಿತಿಗಳು ಜೇನು ಉತ್ಸವದ ಮಹತ್ವವನ್ನು ಹೆಚ್ಚಿಸಿದೆ.

ವಿಭಿನ್ನ ದರಗಳು: ಪ್ರತಿ ಕೆ.ಜಿ. ಜೇನಿಗೆ 315 ರೂ.ಗಳಿಂದ 800ರೂ.ಗಳವರೆಗೆ ವಿಭಿನ್ನವಾಗಿದ್ದು, ಅಚ್ಚರಿ ಮೂಡಿಸುತ್ತಿದೆ. ಭಾಗಮಂಡಲದ ಕೊಡಗು ಪ್ರಗತಿಪರ ಜೇನು ಕೃಷಿಕರ ಸಹಕಾರ ಸಂಘದಲ್ಲಿ ಪ್ರತಿ ಕೆ.ಜಿ. ಜೇನು 315 ರೂ.ಗಳಿಗೆ ಲಭ್ಯವಿದ್ದರೆ, ಭಾಗಮಂಡಲ ಖಾಸಗಿ ಹನಿ ಇಂಡಸ್ಟ್ರೀಸ್ ಮಳಿಗೆ ಒಂದರಲ್ಲಿ ಈ ದರ 800 ರೂ.ಗಳಾಗಿವೆ. ಕಾಫಿ ತೋಟಗಳಲ್ಲಿ ಪೆಟ್ಟಿಗೆ ಜೇನು ಕೃಷಿ ನಡೆಸಿದಲ್ಲಿ ಫಸಲಿನ ಹೆಚ್ಚಳವಾಗುವುದು ಪ್ರಾಯೋಗಿಕವಾಗಿಯೇ ರುಜುವಾತಾಗಿರುವ ವಿಚಾರವಾಗಿದೆ. ಇದು ಕೇವಲ ಒಂದು ಫಸಲಿಗೆ ಮಾತ್ರವಲ್ಲ, ಪ್ರತಿಯೊಂದು ಕೃಷಿಯಲ್ಲೂ ಜೇನು ಹುಳುಗಳು ತಮ್ಮ ಕರಾಮತ್ತನ್ನು ತೋರಿಸಿ ಕೃಷಿಕರ ಕೈಹಿಡಿಯುತ್ತವೆ. ಇಂತಹ ಪರಿಸರ ಸ್ನೇಹಿ ಜೇನು ಕೃಷಿಯತ್ತ ಒಲವು ಮೂಡಿಸುವ ಜೇನು ಉತ್ಸವ ಡಿ.25ರ ಭಾನುವಾರವೂ ನಡೆಯಲಿದೆ.

ರಾಜ್ಯ ಬ್ಯಾಡ್ಮಿಂಟನ್ ತಂಡಕ್ಕೆ ದಿಯಾ ಭೀಮಯ್ಯ ಆಯ್ಕೆ



ಪೊನ್ನಂಪೇಟೆ, ಡಿ.24– ರಾಜ್ಯದ ಪ್ರಥಮ ಶ್ರೇಯಾಂಕಿತ ಆಟಗಾರ್ತಿಯಾದ, ಮೂಲತಃ ಕೊಡಗಿನ ಬೊಪ್ಪಂಡ ದಿಯಾ ಭೀಮಯ್ಯ ರಾಜ್ಯ ಬ್ಯಾಡ್ಮಿಂಟನ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಇದೇ ಡಿ.26ರಿಂದ 30ರವರೆಗೆ ಓಡಿಸಾದ ಭುವನೇಶ್ವರದಲ್ಲಿ ನಡೆಯಲಿರುವ 34ನೇ ಸಬ್ ಜೂನಿಯರ್ ಯೋನೆಕ್ಸ್ ಸನ್ ರೈಸ್ ರಾಷ್ಟ್ರೀಯ ಬಾಡ್ಮಿಂಟನ್ ಪಂದ್ಯಾವಳಿಯಲ್ಲಿ ದಿಯಾ ಭೀಮಯ್ಯ ಅವರು 15 ವರ್ಷದೊಳಗಿನ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳೆರಡರಲ್ಲಿಯೂ ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಮೈಸೂರಿನ ಪ್ರಗತಿ ಎಲೈಟ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿರುವ ದಿಯಾ ಭೀಮಯ್ಯ, ಮೈಸೂರಿನ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಮೇದುರ ಅರುಣ್ ಪೆಮ್ಮಯ್ಯ ಹಾಗೂ ಬಿ.ಪಿ.ಭೀಮಯ್ಯ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ. ಇವರು ಮಡಿಕೇರಿಯ ದೇಚೂರಿನವರಾದ ಬೊಪ್ಪಂಡ ಕುಸುಮ ಹಾಗೂ ಭೀಮಯ್ಯ ಅವರ ಪುತ್ರಿ.

ಚೀಟಿ ವ್ಯವಹಾರ: 1.5 ಕೋಟಿ ರೂ. ವಂಚನೆ

ಕುಶಾಲನಗರ ಪೊಲೀಸ್ ಠಾಣೆಯಲ್ಲಿ 6 ಮಂದಿ ವಿರುದ್ಧ ದೂರು

ಕುಶಾಲನಗರ, ಡಿ.24– ಮುಳ್ಳುಸೋಗೆ ಗ್ರಾಮದ ಚಂದ್ರ ಎಂಬವರ ಪತ್ನಿ ಲಕ್ಷ್ಮಿ ಚೀಟಿ ವ್ಯವಹಾರ ನಡೆಸಿ 1.50 ಕೋಟಿ ರೂ.ಗಳಷ್ಟು ಹಣ ನೀಡದೆ ವಂಚಿಸಿ ರುವ ಬಗ್ಗೆ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಶನಿವಾರ ದೂರು ದಾಖಲಾಗಿದೆ.

ವಂಚನೆಗೊಳಗಾದವರ ಪರವಾಗಿ ರವಿಕುಮಾರ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಲಕ್ಷ್ಮಿ ಆಕೆಯ ಪತಿ ಚಂದ್ರ, ಮಕ್ಕಳಾದ ರವಿ, ಅಶೋಕ, ಅಶ್ವಿನಿ, ಸಹಚರೆ ಸರಸ್ವತಿ ಎಂಬುವರು ಹಣಕೊಡದೆ ವಂಚಿಸಿದ್ದಾರೆ ಎಂದು ಆಪಾದಿಸಿದ್ದಾರೆ.

ಕಳೆದೆರೆಡು ವರ್ಷಗಳಿಂದ ವಿವಿಧ ಮೊತ್ತದ ಚೀಟಿ ವ್ಯವಹಾರ ನಡೆಸಿರುವ ಲಕ್ಷ್ಮಿ ಗ್ರಾಮದ ನೂರಾರು ಮಹಿಳೆಯರಿಗೆ ಹಣ ನೀಡದೆ ಸುಮಾರು 1.50 ಕೋಟಿಯಷ್ಟು ವಂಚನೆ ಮಾಡಿದ್ದಾರೆ. ಕೇಳಲು ತೆರಳಿದರೆ ಹಲ್ಲೆಗೆ ಮುಂದಾಗುತ್ತಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ತಮಗೆ ಸೂಕ್ತ ನ್ಯಾಯ ಒದಗಿಸಿಕೊಡುವಂತೆ ಸಂತ್ರಸ್ಥರು ದೂರು ನೀಡಿದ್ದಾರೆ. ಹಣ ವಾಪಾಸ್ ನೀಡುವಂತೆ ಒತ್ತಾಯಿಸಿ ಮೋಸ ಹೋದವರು ಗುರುವಾರ ಸಂಜೆ ಲಕ್ಷ್ಮಿ ಎಂಬವರ ಮನೆಗೆ ಮುತ್ತಿಗೆ ಹಾಕಿದ ಸಂದರ್ಭ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದರು.

ಶಬರಿಮಲೆಗೆ ಪಾದಯಾತ್ರೆ



ಮಡಿಕೇರಿ,ಡಿ.24– ಸಂಪಾಜೆ ಸಮೀಪದ ಕಲ್ಲುಗುಂಡಿಯ ಮೂವರು ಶ್ರೀ ಅಯ್ಯಪ್ಪ ಭಕ್ತರು ಶಬರಿಮಲೆಗೆ ಪಾದಯಾತ್ರೆ ಕೈಗೊಂಡಿದ್ದಾರೆ. ಅಯ್ಯಪ್ಪ ಮಾಲಾಧಾರಿಗಳಾದ ಶಶಿ, ಅಭಿ ಹಾಗೂ ಅನಂತ ಸ್ವಾಮಿಗಳು ಕಲ್ಲುಗುಂಡಿಯ ಶ್ರೀ ಬಾಲ ಶಾಸ್ತಾರ ಸೇವಾ ಮಂದಿರದಿಂದ ಜನಾರ್ಧನ ಗುರುಸ್ವಾಮಿ ಅವರ ಮಾರ್ಗದರ್ಶನದಲ್ಲಿ ಶಬರಿಮಲೆಯ ಅಯ್ಯಪ್ಪ ಸನ್ನಿಧಾನಕ್ಕೆ ಪಾದಯಾತ್ರೆ ಆರಂಭಿಸಿದರು.

ಮಾಲೆ ಧರಿಸಿ ವ್ರತಾಚರಣೆ ಮಾಡಿದ ಮೂವರು ಭಕ್ತರು ಇಂದು ಕಟ್ಟುಕಟ್ಟಿ ಪಾದಯಾತ್ರೆಯಲ್ಲಿ ಅಯ್ಯಪ್ಪನ ದರ್ಶನಕ್ಕೆ ತೆರಳಿದರು. ಗ್ರಾಮಸ್ಥರು ಶ್ರದ್ಧಾ ಭಕ್ತಿಯಿಂದ ಅಯ್ಯಪ್ಪ ಭಕ್ತರನ್ನು ಬೀಳ್ಕೊಟ್ಟರು.

ಹುದ್ದೆಗೆ ಅರ್ಜಿ ಆಹ್ವಾನ

ಮಡಿಕೇರಿ, ಡಿ.24– ಸಾಂಬಾರ ಮಂಡಳಿಯ ಸಕಲೇಶಪುರ ಪ್ರಾದೇಶಿಕ ಕಚೇರಿ ಮತ್ತು ಮಡಿಕೇರಿಯ ವಿಭಾಗೀಯ ಕಚೇರಿಯಲ್ಲಿ ತಲಾ ಒಂದು ಗುಮಾಸ್ತ ಸಹಾಯಕ ಹುದ್ದೆ ಖಾಲಿ ಇದ್ದು, 64 ವರ್ಷದೊಳಗಿನ ನಿವೃತ್ತಿ ಹೊಂದಿದ ಸರ್ಕಾರಿ ನೌಕರರು, ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜ.9 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಭಾರತೀಯ ಸಾಂಬಾರ ಮಂಡಳಿ, ವಿಭಾಗೀಯ ಕಚೇರಿ, ಕುಶಾಲ್ ರೆಸಿಡೆನ್ಸಿ, ಎರಡನೇ ಮಹಡಿ, 14 ನೇ ಬ್ಲಾಕ್, ನ್ಯೂ ಎಕ್ಸ್‌ಟೆನ್ಷನ್ ಮಡಿಕೇರಿ ದೂ.ಸಂ.08272–295056, 9087716080 ನ್ನು ಸಂಪರ್ಕಿಸಬಹುದು.

ಜಿಲ್ಲಾದ್ಯಂತ ಕ್ರಿಸ್‌ಮಸ್ ಸಂಭ್ರಮ





ಚಾಮರಾಜನಗರ, ಡಿ.24– ಜಿಲ್ಲಾದ್ಯಂತ ಕ್ರೈಸ್ತ ಬಾಂಧವರು ಕ್ರಿಸ್‌ಮಸ್ ಹಬ್ಬವನ್ನು ಸಂಭ್ರಮ–ಸಡಗರದಿಂದ ಅದ್ದೂರಿಯಾಗಿ ಆಚರಿಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಎಲ್ಲೆಡೆ ಚರ್ಚ್‌ಗಳು ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದು, ಯೇಸುವಿನ ಜನನವನ್ನು ಸಾರುವ ಗೋದಲಿ ತಯಾರಾಗಿದೆ. ಎಲ್ಲಾ ಚರ್ಚ್‌ಗಳ ಎದುರು ಬೃಹದಾಕಾರದ ಸ್ಟಾರ್‌ಗಳನ್ನು ತೂಗು ಹಾಕಲಾಗಿದೆ. ಭಾನುವಾರ (ಡಿ.25) ನಡೆಯಲಿರುವ ಕ್ರಿಸ್‌ಮಸ್ ಅದ್ದೂರಿ ಆಚರಣೆಗೆ ಕ್ರೈಸ್ತ ಸಮುದಾಯದವರು ತಮ್ಮ ಮನೆಗಳಲ್ಲಿ ಕ್ರಿಸ್‌ಮಸ್ ಟ್ರೀ, ಆಕಾಶ ಬುಟ್ಟಿ ಅಳವಡಿಸಿದ್ದಾರೆ.

ಎರಡು ವರ್ಷ ಕೋವಿಡ್ ಕಾರಣಕ್ಕೆ ಸರಳ ಹಾಗೂ ಸಾಂಪ್ರದಾಯಿಕ ಹಬ್ಬ ಆಚರಿಸಲಾಗಿತ್ತು. ಈ ಬಾರಿ ಯಾವುದೇ ನಿರ್ಬಂಧಗಳನ್ನು ಹೇರಲಾಗಿಲ್ಲ. ಹೀಗಾಗಿ ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಹಬ್ಬಕ್ಕಾಗಿ ಹೊಸ ಬಟ್ಟೆ, ಅಲಂಕಾರದ ವಸ್ತುಗಳು, ಕೇಕ್, ಖರೀದಿಯೂ ಜೋರಾಗಿ ನಡೆಯುತ್ತಿದೆ. ಮನೆಗಳಲ್ಲಿ ಬಗೆ ಬಗೆಯ ಕೇಕ್, ಲಾಡು, ರೋಜ್ ಕುಕ್ಸ್, ಕರ್ಜಿಕಾಯಿ, ಚಕ್ಕುಲಿ, ನಿಪ್ಪಟ್ಟು, ಜಾಮೂನು, ಸೇರಿದಂತೆ ಅನೇಕ ಸಿಹಿ ತಿಂಡಿಗಳು ಜೊತೆಗೆ ಐಸ್ ಕ್ರೀಂಗಳು ತಯಾರಾಗುತ್ತಿದೆ.

ಕೊಟ್ಟಿಗೆಯಲ್ಲಿ ಜನಿಸಿರುವ ಏಸು ಕ್ರಿಸ್ತರ ಜನನ ವೃತ್ತಾಂತವನ್ನು ಸಾಂಕೇತಿಸುವ ಗೋದಲಿಗಳನ್ನು ಚರ್ಚ್‌ಗಳಲ್ಲಿ ನಿರ್ಮಿಸಲಾಗಿದೆ. ಗೋದಲಿಯಲ್ಲಿ ಯೇಸುವಿನ ತಂದೆ, ತಾಯಿ, ಬಾಲ ಯೇಸು, ಕುರಿಗಾಹಿಗಳು, ದೇವದೂತರು, ಕುರಿ, ಆಡು, ಹಸು, ಒಂಟೆ, ಸೇರಿದಂತೆ ಅನೇಕರ ಪ್ರತಿಕೃತಿಗಳನ್ನು ಇಡಲಾಗಿದೆ.

ಸಮುದಾಯ ಭವನ, ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಬೇಗೂರು(ಗುಂಡ್ಲುಪೇಟೆ), ಡಿ.24– ಉಪ್ಪಾರ ಸಮುದಾಯ ಭವನ ಹಾಗೂ ಸಾಮಾನ್ಯ ವರ್ಗದ ಬೀದಿ ಸಿ.ಸಿ. ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ನಿರಂಜನ್ ಕುಮಾರ್ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಈ ಹಿಂದೆ ಆಡಳಿತ ಮಾಡಿದವರು ಯಾವ ರೀತಿ ಅಭಿವೃದ್ಧಿ ಮಾಡಿದ್ದಾರೆ ಎಂದು ಮಾರ್ಮಿಕವಾಗಿ ಪ್ರಶ್ನಿಸಿದರಲ್ಲದೆ, ಉಪ್ಪಾರ ಜನಾಂಗ ಹೆಚ್ಚಾಗಿರುವ ರಂಗನಾಥಪುರ, ಅಣ್ಣೂರು ಕೇರಿ, ಬೀಮನ ಬೀಡು ಗ್ರಾಮಗಳಲ್ಲಿ ರಸ್ತೆ ಯಾವುದು, ಚರಂಡಿ ಯಾವುದು ಎಂದು ತಿಳಿಯದಂತಾಗಿದೆ. ನಾನು ಶಾಸಕನಾದ ನಂತರ ಪ್ರತಿ ಗ್ರಾಮಕ್ಕೂ 80 ಲಕ್ಷ ರೂ. ಅನುದಾನ ತಂದಿದ್ದು ರಸ್ತೆ ಚರಂಡಿ ಸೇರಿದಂತೆ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಕೇಂದ್ರ ಸರ್ಕಾರದ ನರೇಗಾ ಯೋಜನೆಯಡಿ ಅನೇಕ ಗ್ರಾಮಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗಿದೆ ಹಾಗೂ ಹಳ್ಳಿಗಳ ಅಭಿವೃದ್ಧಿಗೆ ಈ ಯೋಜನೆ ಸಹಕಾರಿಯಾಗಿದೆ, ವಿಶೇಷವಾಗಿ ಎಸ್ಸಿ, ಎಸ್ಟಿ ಸಮುದಾಯವಿರುವ ಕಡೆ ರಸ್ತೆ–ಚರಂಡಿಯನ್ನು ನಿರ್ಮಾಣ ಮಾಡಲಾಗಿದೆ ಬೇಗೂರು ಐಟಿಐ ಕಾಲೇಜಿನ ಬಳಿ ಹತ್ತು ಎಕರೆ ವಿಸ್ತೀರ್ಣವನ್ನು ನಿವೇಶನಕ್ಕಾಗಿ ಇಟ್ಟಿದ್ದು ಫಲಾನುಭವಿಗಳನ್ನು ಆಯ್ಕೆ ಮಾಡಿ ಉಸ್ತುವಾರಿ ಸಚಿವರ ಜೊತೆ ಚರ್ಚಿಸಿ ಮನೆ ನಿರ್ಮಿಸಿ ಕೊಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಇಂದಿರಾ ಸುರೇಶ್, ಉಪಾಧ್ಯಕ್ಷ ಮಹದೇವಶೆಟ್ಟಿ, ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಆರ್. ಲೋಕೇಶ್, ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ಹೊರೆಯಾಲ ಮಹೇಶ್, ಎಸ್‌ಟಿ ಮೋರ್ಚಾ ತಾಲೂಕು ಅಧ್ಯಕ್ಷ ಕೃಷ್ಣ, ಮಂಡಲ್ ಅಧ್ಯಕ್ಷ ದೊಡ್ಡುಂಡಿ ಜಗದೀಶ್, ಹೋಬಳಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಎಚ್.ಜಿ ನಾರಾಯಣಸ್ವಾಮಿ, ಉದ್ಯಮಿ ಗೋವಿಂದಸ್ವಾಮಿ, ಗ್ರಾಪಂ ಸದಸ್ಯ ಮಹೇಶ್, ಸೋಮಶೇಖರ್, ಗುರುಸ್ವಾಮಿ, ನಾಗಮ್ಮ ರಾಜಶೆಟ್ಟಿ, ತಾಯಮ್ಮ, ಮಹದೇವಸ್ವಾಮಿ, ವಿಜ್ಞಾನಿ ನವೀನ್ ಮಾಡ್ರಹಳ್ಳಿ ಗ್ರಾಮಸ್ಥರು ಹಾಜರಿದ್ದರು.

ಕರಡಿ ದಾಳಿಯಿಂದ ದನಗಾಹಿ ಸಾವು

ಚಾಮರಾಜನಗರ, ಡಿ.24– ಕರಡಿ ದಾಳಿ ನಡೆಸಿ ದನಗಾಹಿಯೊಬ್ಬರು ಸಾವನ್ನಪ್ಪಿರುವ ಘಟನೆ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ತಾಲೂಕಿನ ಪುಣಜನೂರು ವಲಯದಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಪುಣಜನೂರು ಗ್ರಾಮದ ದನಗಾಹಿ ರಾಜು(60) ಮೃತಪಟ್ಟವರು. ಅರಣ್ಯ ಇಲಾಖೆಯ ಹುಚ್ಚನಕಂಬಾರೆ ಬೀಟ್ ವ್ಯಾಪ್ತಿಯ ಕಾಡಂಚಿನಲ್ಲಿ ರಾಜು ಹಸುಗಳನ್ನು ಮೇಯಿಸುತ್ತಿದ್ದರು. ಈ ಸಂದರ್ಭದಲ್ಲಿ ಕರಡಿಯೊಂದು ಏಕಾಏಕಿ ದಾಳಿ ನಡೆಸಿದೆ ವಿಷಯ ಗೊತ್ತಾಗುತ್ತಿದ್ದಂತೆ ಸ್ಥಳೀಯರು ಅರಣ್ಯ ಇಲಾಖೆಯ ಗಮನಕ್ಕೆ ತಂದರು. ತಕ್ಷಣವೇ ಸಿಬ್ಬಂದಿ ಹೋಗಿ ಗಾಳಿಯಲ್ಲಿ ಗುಂಡು ಹೊಡೆದು, ಕರಡಿಯನ್ನು ಬೆದರಿಸಿ ಓಡಿಸಿದರು. ಆದರೆ, ತೀವ್ರವಾಗಿ ಗಾಯಗೊಂಡಿದ್ದ ರಾಜು, ಸ್ಥಳದಲ್ಲಿಯೇ ಮೃತಪಟ್ಟಿದ್ದರು.

ಗುರುಲಿಂಗಮ್ಮ ನಿಧನ



ಗುಂಡ್ಲುಪೇಟೆ: ತಾಲೂಕಿನ ಮಲ್ಲಮ್ಮನಹುಂಡಿಯ ಲಿಂಗಪ್ಪನ ಚನ್ನಬಸಪ್ಪನವರ ಪತ್ನಿ ಶ್ರೀಮತಿ ಗುರುಲಿಂಗಮ್ಮ (96) ಅವರು ಶನಿವಾರ ಸಂಜೆ ನಿಧನರಾದರು.ಮೃತರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿಲ್ಲೆಯ 1693 ವಿಕಲಚೇತನರಿಗೆ ಉಚಿತ ಸಾಧನ, ಸಲಕರಣೆಗಳ ಸಮರ್ಪಣೆ

ಕೇಂದ್ರ ಸರ್ಕಾರಕ್ಕೆ ವಿಶೇಷಚೇತನರ ಬಗ್ಗೆ ವಿಶೇಷ ಕಾಳಜಿ ಇದೆ: ನಾರಾಯಣಸ್ವಾಮಿ



ಚಾಮರಾಜನಗರ, ಡಿ.24– ಕೇಂದ್ರ ಸರ್ಕಾರದ ವಿಶೇಷ ಆಡಿಪ್ ಯೋಜನೆಯಡಿ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ 1693 ವಿಶೇಷಚೇತನ ಫಲಾನುಭವಿಗಳಿಗೆ 1 ಕೋಟಿ 20 ಲಕ್ಷಕ್ಕೂ ಹೆಚ್ಚಿನ ಮೊತ್ತದ ಸಾಧನ, ಸಲಕರಣೆಗಳನ್ನು ನಗರದಲ್ಲಿಂದು ಉಚಿತವಾಗಿ ಸಮರ್ಪಣೆ ಮಾಡಲಾಯಿತು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ವಿಕಲಾಂಗ ವ್ಯಕ್ತಿಗಳ ಸಬಲೀಕರಣ (ದಿವ್ಯಾಂಗಜನ್) ಇಲಾಖೆ, ಆರ್ಟಿಫಿಶಿಯಲ್ ಲಿಂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ (ಅಲಿಂಕೋ), ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಸಾಮಾಜಿಕ ಅಧಿಕಾರಿತಾ ಶಿಬಿರ'ದಲ್ಲಿ ವಿಕಲಚೇತನರಿಗೆ ಅಗತ್ಯವುಳ್ಳ ಸಾಧನ, ಸಲಕರಣೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿ, ದಿವ್ಯಾಂಗರಿಗೆ ಉಚಿತವಾಗಿ ಸಾಧನ, ಸಲಕರಣೆ ವಿತರಣೆ ಕಾರ್ಯಕ್ರಮ ಕೇಂದ್ರ ಸರ್ಕಾರದ ವಿಶಿಷ್ಟ ಕಾರ್ಯಕ್ರಮವಾಗಿದೆ. ಕೇಂದ್ರ ಸರ್ಕಾರವು ವಿಶೇಷ ಚೇತನರ ಬಗ್ಗೆ ವಿಶೇಷ ಕಾಳಜಿ ಹೊಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಹತ್ವಾಕಾಂಕ್ಷಿ ಯೋಜನೆ, ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವುದು ಉತ್ತಮ ಸೇವಾ ಕಾರ್ಯವಾಗಿದೆ ಎಂದರು.

ವಿಕಲತೆ ಆಕಸ್ಮಿಕ, ವಿಕಲಚೇತನರನ್ನು ಸಲಹುವ ಯಾವುದೇ ತಂದೆ, ತಾಯಿ ಹಾಗೂ ಪೋಷಕರು ಎಂತಹುದೇ ಪರಿಸ್ಥಿತಿಯಲ್ಲಿ ಚೈತನ್ಯ ಕಳೆದುಕೊಳ್ಳಬಾರದು. ವಿಕಲಾಂಗರಿಗೆ ಸೂಕ್ತ ಮಾರ್ಗದರ್ಶನ ನೀಡಿ ಚಿಕಿತ್ಸೆ ಕೊಡಿಸಬೇಕು. ಅವರಲ್ಲಿ ಭರವಸೆ ತುಂಬಬೇಕು. ಸರ್ಕಾರಗಳು ನಿಮ್ಮ ಜತೆಯಲ್ಲಿವೆ. ಅಗತ್ಯ ಸೌಲಭ್ಯಗಳನ್ನು ನೀಡಲಿವೆ. ವಿಕಲಚೇತನರ ನೋವಿಗೆ ಸ್ಪಂದಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದ್ಯತೆಯಾಗಿದೆ ಎಂದರು.

ಕೇಂದ್ರ ಸರ್ಕಾರವು ದೇಶದಲ್ಲಿ ಈವರೆಗೆ 12756 ಶಿಬಿರಗಳನ್ನು ಏರ್ಪಡಿಸಿ, 1456 ಕೋಟಿ ವೆಚ್ಚದಲ್ಲಿ 20 ಲಕ್ಷಕ್ಕೂ ವಿಕಲಚೇತನರಿಗೆ ಸಾಧನ, ಸಲಕರಣೆಗಳನ್ನು ಉಚಿತವಾಗಿ ವಿತರಿಸಿದೆ. ವಿಕಲಚೇತನರ ಅಶಕ್ತ ಕುಟುಂಬಗಳಿಗೆ ನೆರವಾಗುವುದು ಸರ್ಕಾರ ಹಾಗೂ ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಎಲ್ಲಾ ವರ್ಗದ ಜನರಿಗೂ ವಿಶೇಷ ಕಲ್ಯಾಣ ಯೋಜನೆಗಳನ್ನು ರೂಪಿಸಿದೆ. ಕೇಂದ್ರಸರ್ಕಾರದ ಯೋಜನೆಗಳ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸಿ ಕಾರ್ಯಕ್ರಮಗಳನ್ನು ತಲುಪಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ನಾರಾಯಣಸ್ವಾಮಿ ತಿಳಿಸಿದರು.

ಕಾರ್ಯಕ್ರಮದ ರೂವಾರಿ ಸಂಸದ ವಿ. ಶ್ರೀನಿವಾಸಪ್ರಸಾದ್ ಮಾತನಾಡಿ, ವಿಕಲಚೇತನರಿಗೆ ಉಚಿತವಾಗಿ ಸಾಧನ, ಸಲಕರಣೆ ವಿತರಣೆ ಮಾದರಿ, ಮಾನವೀಯತೆಗೆ ಸ್ಪಂದಿಸುವ ಹಾಗೂ ಹೃದಯ ತಟ್ಟುವಂತಹ ಕಾರ್ಯಕ್ರಮವಾಗಿದೆ. ಸಾಧನ, ಸಲಕರಣೆ ವಿತರಿಸಲು ದೇಶದ 36 ಲೋಕಸಭಾ ಕ್ಷೇತ್ರಗಳು ಆಯ್ಕೆಯಾಗಿವೆ. ಕರ್ನಾಟಕ ರಾಜ್ಯದಲ್ಲಿ ಚಾಮರಾಜನಗರ ಈ ಯೋಜನೆಗೆ ಆಯ್ಕೆಯಾಗಿರುವ ಏಕೈಕ ಲೋಕಸಭಾ ಕ್ಷೇತ್ರವಾಗಿದೆ ಎಂದರು.

ಜಿಲ್ಲೆಯ ಪ್ರತಿ ಹಳ್ಳಿ, ಗ್ರಾಮ ಪಂಚಾಯಿತಿ ಮಟ್ಟದಿಂದಲೂ ವಿಕಲಚೇತನರನ್ನು ಗುರುತಿಸಿ ಸಾಧನ, ಸಲಕರಣೆಗಳನ್ನು ವಿತರಿಸಲಾಗುತ್ತಿದ್ದು, ಇವುಗಳ ಸದ್ಬಳಕೆ ಗ್ರಾಮೀಣ ಜನತೆಗೆ ಪೂರ್ಣಪ್ರಮಾಣದಲ್ಲಿ ಆಗಬೇಕು. ದಕ್ಷಿಣ ಭಾರತದಲ್ಲಿಯೇ ಇದು ದೊಡ್ಡಮಟ್ಟದ ಕಾರ್ಯಕ್ರಮವಾಗಿದ್ದು, ಈ ಕಾರ್ಯ ಕ್ರಮದ ಯಶಸ್ವಿಗೆ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಶ್ರಮಿಸಿದ್ದಾರೆ. ಕಾರ್ಯಕ್ರಮ ಯಶಸ್ಸು ಆತ್ಮತೃಪ್ತಿ ತಂದಿದೆ ಎಂದು ಅವರು ತಿಳಿಸಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಚಾಮರಾಜನಗರದಲ್ಲಿ ಇದೇ ಮೊದಲ ಬಾರಿಗೆ ನಡೆಯುತ್ತಿರುವ ದೊಡ್ಡಮಟ್ಟದ ವಿಶೇಷ ಕಾರ್ಯಕ್ರಮ ಇದಾಗಿದೆ. ಉಚಿತವಾಗಿ ಸಾಧನ, ಸಲಕರಣೆ ವಿತರಣೆಯಿಂದ ಜಿಲ್ಲೆಯ ವಿಕಲಚೇತನರಿಗೆ ಅನುಕೂಲವಾಗಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸಬೇಕು ಎಂದರು.

ಶಾಸಕರಾದ ಎನ್. ಮಹೇಶ್ ಹಾಗೂ ಸಿ.ಎಸ್. ನಿರಂಜನಕುಮಾರ್ ಅವರುಗಳು ಮಾತನಾಡಿ ವಿಕಲಚೇತನರಿಗೆ ಸಾಧನ, ಸಲಕರಣೆ ವಿತರಣೆಯು ಅಖಂಡ ಮಾನವೀಯತೆ ಕಾರ್ಯವಾಗಿದೆ. ವಿಕಲಚೇತನರನ್ನು ಅವರ ಮನೆಗಳಲ್ಲಿಯೇ ತಿರಸ್ಕಾರದಿಂದ ನೋಡುವುದು ಸಾಮಾನ್ಯ, ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಕಲಾಂಗರಲ್ಲಿ ಆತ್ಮವಿಶ್ವಾಸ ತುಂಬಿ ಸಮಾಜದಲ್ಲಿ ಇತರರಂತೆ ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಮಾಡಿಕೊಟ್ಟಿವೆ ಎಂದರು.

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಶೇಷಚೇತನ ಮಕ್ಕಳಿಗೆ ಅಗತ್ಯ ಸಾಧನ ಸಲಕರಣೆಗಳನ್ನು ಗಣ್ಯರು ವಿತರಣೆ ಮಾಡಿದರು. ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ನಗರಸಭಾ ಅಧ್ಯಕ್ಷೆ ಸಿ.ಎಂ. ಆಶಾ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು, ಉಪ ವಿಭಾಗಾಧಿಕಾರಿ ಗೀತಾಹುಡೇದ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಗೀತಾಲಕ್ಷ್ಮೀ, ಆಲಿಂಕೋ ಸಂಸ್ಥೆಯ ಹಿರಿಯ ವ್ಯವಸ್ಥಾಪಕರಾದ ಎ.ವಿ. ಅಶೋಕ್‌ಕುಮಾರ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

ಕೇಂದ್ರ ಸಚಿವರಿಗೆ, ಸಂಸದರಿಗೆ ಸನ್ಮಾನ



ಚಾಮರಾಜನಗರ, ಡಿ.24– ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ವಿಕಚೇತನರಿಗೆ ಉಚಿತವಾಗಿ ಸಾಧನ ಸಲಕರಣೆಗಳ ವಿತರಣಾ ಕಾರ್ಯಕ್ರಮದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹಾಗೂ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರನ್ನು ಮಾದಿಗ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ರಾಜಶೇಖರ್ ಬಸವನಪುರ, ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಕರಿನಪುರ ರಾಚಯ್ಯ, ಪ್ರಸನ್ನ ಚಕ್ರವರ್ತಿ, ಗ್ರಾಪಂ ಸದಸ್ಯ ಪುಟ್ಟಸ್ವಾಮಿ, ವಕೀಲರಾದ ಹಂಗಳ ಸಿದ್ದೇಶ್, ರಾಜೇಶ್, ಮುಖಂಡರಾದ ಕಲ್ಲಿಗೌಡನಹಳ್ಳಿ ಸಿದ್ದರಾಜು, ರಾಮಸಮುದ್ರ ರಾಚಯ್ಯ, ಸಿದ್ದರಾಜು ಇತರರಿದ್ದರು.

ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ

25-12-2022

ಬನ್ನೂರು ಕೆ.ರಾಜು

ಮೊ. 9481533167



ಕ್ರಿಸ್ಮಸ್ ಬೆಳಕಿನ ಪರ್ವ

“ನಿಮ್ಮಲ್ಲಿ ಸಾಸಿವೆ ಕಾಳಿನಷ್ಟು ಶ್ರದ್ಧೆಯಿದ್ದರೆ,
ನೀವೊಂದು ಬೆಟ್ಟಕ್ಕೆ
ಈ ಜಾಗದಿಂದ ಆ ಜಾಗಕ್ಕೆ ಚಲಿಸು'
ಎಂದು ಹೇಳಿದರೆ ಅದು ಚಲಿಸುತ್ತದೆ

– ಯೇಸುಕ್ರಿಸ್ತ



ಸಮಸ್ತ ಮಾನವ ಕುಲಕ್ಕೆ ಮನುಷ್ಯತ್ವದ ಪಾಠ ಹೇಳಿ ಕತ್ತಲಿಂದ ಬೆಳಕಿನತ್ತ ಅವರನ್ನು ಕರೆದೊಯ್ದು ಜಗತ್ತನ್ನೇ ಜ್ಯೋತಿಸ್ವರೂಪ ಮಾಡಿ ಆ ಬೆಳಕಿನಲ್ಲಿ ಇಡೀ ಮಾನವ ಕುಲವನ್ನು ಉದ್ಧರಿಸಲು ಅವತರಿಸಿದ ಮಹಾಪುರುಷರು ಜಗತ್ತಿನಲ್ಲಿ ಅನೇಕರುಂಟು. ಅವರಲ್ಲಿ ಬುದ್ಧ ಮತ್ತು ಯೇಸು ಅತ್ಯಂತ ಪ್ರಮುಖರು. ಒಬ್ಬ ಸಕಲೈಶ್ವರ್ಯದ ಒಡೆಯನಾಗಿ ರಾಜಕುಮಾರನಾಗಿ ಹುಟ್ಟಿದರೂ ಜಗದ ಸುಖಕ್ಕಾಗಿ ತನ್ನ ಸುಖವನ್ನೆಲ್ಲಾ ತ್ಯಾಗಗೈದು ಮಾನವ ಕಲ್ಯಾಣಕ್ಕಾಗಿ ನಿಂತು ದೇವಪುರುಷನಾದವನು. ಮತ್ತೊಬ್ಬ ಕುರಿಕೊಟ್ಟಿಗೆಯಲ್ಲಿ ಸಾಮಾನ್ಯನಾಗಿ ಹುಟ್ಟಿ ಅಸಾಮಾನ್ಯನಾಗಿ ಬೆಳೆದು ಮಾನವಕೋಟಿಗೆ ಬೆಳಕು ತೋರುವ ಮಾರ್ಗದಲ್ಲಿ ತನ್ನನ್ನೇ ಅರ್ಪಿಸಿಕೊಂಡು ದೇವಮಾನವನಾದವನು. ಈ ಮಹಾತ್ಮರಿಬ್ಬರೂ ಮನುಷ್ಯತ್ವದಿಂದ ದೈವತ್ವಕ್ಕೇರಿದವರು. ಜಗದೇಳಿಗೆಗಾಗಿ ಇವರಿಬ್ಬರೂ ಪಟ್ಟ ಪಾಡುಗಳು ಅಷ್ಟಿಷ್ಟಲ್ಲ. ಅದರಲ್ಲೂ ಯೇಸು ಅನುಭವಿಸಿದ ಯಾತನೆ ಸಾಮಾನ್ಯವಲ್ಲ. ಇಂಥ ಯಾತನೆಯಲ್ಲೂ ಸತ್ಯಶೋಧಕನಾಗಿ ತನ್ನ ತತ್ವಾದರ್ಶಗಳಿಂದ ವಿಶ್ವಕ್ಕೆ ಮಹಾಬೆಳಕು ನೀಡಿದ ಮಹಾಪುರುಷ ಯೇಸುಕ್ರಿಸ್ತ ವಿಶ್ವವಂದಿತನೇ ಸರಿ!

“ತನ್ನ ಶಿಲುಬೆಯ ತಾನೇ ಹೊತ್ತನಲ್ಲ ಗುರು ಯೇಸು, ನಿನ್ನ ಕರ್ಮದ ಹೊರೆಯ ಬಿಡದೆ ನೀನೇ ಹೊರು.....” ಇದು ದಾರ್ಶನಿಕ ಕವಿ ಡಿ.ವಿ.ಜಿ. ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೇಳಿರುವ ಕಾವ್ಯನುಡಿಗಳು. ಇದಿಷ್ಟೇ ಸಾಕು ದೇವಪುತ್ರ ಯೇಸುವಿನ ಬ್ರಹ್ಮಾಂಡ ವ್ಯಕ್ತಿತ್ವದ ಮಹಾದರ್ಶನಕೆ.


“ಪರೋಪಕಾರಾರ್ಥ ಪುಣ್ಯಾಯ ಪಾಪಾಯ ಪರಪೀಡನಂ” ಎಂಬ ಮಾತು 'ಮಹಾಭಾರತ' ದಲ್ಲಿದೆ. ಅಂದರೆ ನಮ್ಮ ಕೃತ್ಯಗಳಿಂದ ಇನ್ನೊಬ್ಬರಿಗೆ ತೊಂದರೆಯಾಗುವುದು,ಅವರು ಕಣ್ಣೀರಿಡುವಂತಾಗುವುದು, ನಿಟ್ಟುಸಿರು ಬಿಡುವಂತಾಗುವುದು ಪಾಪದ ಕೆಲಸ, ನಮ್ಮಿಂದ ಒಳ್ಳೆಯ ಕೆಲಸ ಮಾಡಲು ಸಾಧ್ಯವಿಲ್ಲದಿದ್ದರೆ ಕಡೇಪಕ್ಷ ಇನ್ನೊಬ್ಬರಿಗೆ ಹಿಂಸೆಯಾಗುವ, ಅವರು ಜೀವನಪೂರ್ತಿ ದುಃಖಿಸುವಂತಾಗುವ ಕೆಟ್ಟ ಕೆಲಸ ಮಾಡುವುದು ಸರಿಯಲ್ಲ. ಸತ್ಯ ಮತ್ತು ಧರ್ಮದ ಮಾರ್ಗದಿಂದ ನಮ್ಮನ್ನು ದೂರ ಮಾಡುವಂಥದ್ದು ಸತ್ಕರ್ಮಗಳಲ್ಲ. ಇದು ಯೇಸುವಿನ ಬದುಕಿಗೊಂದು ಭಾಷ್ಯವೆನ್ನವಹುದು. “ಪಾಪಿಗಳನ್ನು ರಕ್ಷಿಸುವುದೇ ತನ್ನ ಜೀವನದ ಉದ್ದೇಶ” ಇದು ಯೇಸುವಿನ ಸ್ಪಷ್ಟ ಸಂದೇಶ. ನರಕದ ದಾರಿ ಸುಗಮ. ಆದರೆ ಸ್ವರ್ಗದ ದಾರಿ ದುರ್ಗಮ. ದುರ್ಗಮವಾದರೂ ಸರಿಯೇ ಸ್ವರ್ಗದ ದಾರಿಯಲ್ಲಿ ಸಾಗುವುದೇ ಬದುಕಿನ ಗುರಿಯಾಗಬೇಕು. ಅದರಿಂದಲೇ ಬದುಕು ಸಾರ್ಥಕವೆಂಬ ಯೇಸುವಿನ ಒಡಲು ಶಾಂತಿಯ ಮಹಾಕಡಲು. ಅಷ್ಟೇ ಕ್ಷಮೆಯ ಮಹಾಮಡಿಲು. ಓರ್ವ ಶ್ರೀಮಂತ ಸ್ವರ್ಗಕ್ಕೆ ಹೋಗುವುದಕ್ಕಿಂತ ಒಂದು ಒಂಟೆ ಸೂಜಿಯ ಕಣ್ಣಲ್ಲಿ ಹಾದು ಹೋಗುವುದು ಸುಲಭದಾಯಕ ಅದೆಷ್ಟೋ ಇಂಥ ಮಾರ್ಮಿಕ ನುಡಿಮುತ್ತುಗಳು ಯೇಸುವಿನ ಬೋಧನೆಯ ಬೃಹತ್ ಭಂಡಾರದಲ್ಲಿ ತುಂಬಿ ತುಳುಕಿವೆ. ಯೇಸುವಿನ ಬೋಧನೆಗಳೆಂದರೆ ಅವು ಬರೀ ಉಪದೇಶಗಳಲ್ಲ ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಕಿರಣಗಳು.

ಇಂಥ ಮಹಾ ಶಾಂತಿದೂತ ದೇವಪುರುಷ ಯೇಸುಕ್ರಿಸ್ತನು ಜೋಸೆಫ್ ಮತ್ತು ಮೇರಿಯ ಸುಪುತ್ರನಾಗಿ ಜನಿಸಿದ್ದು 'ಡಿಸೆಂಬರ್ 25'. ಇದೇ ದಿನ ಕ್ರಿಸ್ತನ ಜನನವಾಯಿತೆಂಬುದಕ್ಕೆ ನಿಖರವಾಗಿ ಯಾವ ಆಧಾರಗಳೂ ಇಲ್ಲದಿದ್ದರೂ ಇದು ಕ್ರೈಸ್ತ ಧರ್ಮೀಯರ ಸಾಂಪ್ರದಾಯಿಕ ನಂಬಿಕೆಯಿದೆ. ಹಾಗಾಗಿ ಅಂದು ಯೇಸುವಿನ ಜನ್ಮದಿನೋತ್ಸವದ 'ಕ್ರಿಸ್‌ಮಸ್' ಆಚರಣೆ ಜಗತ್ತಿನಾದ್ಯಂತ ಜರುಗುತ್ತದೆ. ಕ್ರಿಸ್‌ಮಸ್ ಡೇಗೆ ಜಾಗತಿಕ ವೈಭವವಿದೆ. ಆದರೆ ಯೇಸುವಿನ ಜನನದ ದಿನ ನಿಖರವಾಗಿ ಗೊತ್ತಿಲ್ಲದ ಕಾರಣ ಕ್ರೈಸ್ತ ಸಮುದಾಯಗಳಲ್ಲಿ ಒಂದಾದ ಬ್ರದರಿನ್ ಚರ್ಚ್‌ನವರು ಮತ್ತು ಬೆತ್ಸಾಯಿದ ಚರ್ಚ್‌ನವರು ಅಂದು ಕ್ರಿಸ್‌ಮಸ್ ಆಚರಿಸುವುದಿಲ್ಲ. ಬದಲಿಗೆ ಅವರುಗಳು ಜನವರಿ ಒಂದರಂದು ಹೊಸ ವರ್ಷಾಚರಣೆಯನ್ನು ಆಚರಿಸುತ್ತಾರೆ. ಒಟ್ಟಿನಲ್ಲಿ ಕ್ರಿಸ್‌ಮಸ್ ಎಂಬುದು ಕ್ರಿಶ್ಚಿಯನ್ನರಿಗೆ ಒಂದು ಪವಿತ್ರ ದಿನ. ಅವರಿಗೆ ಅದೊಂದು ಸಂತಸ ಸಂಭ್ರಮಗಳ ಮಹಾಹಬ್ಬ. ಇದರ ಕೇಂದ್ರ ಬಿಂದು 'ಕ್ರಿಸ್ತಶಕ'ದ ಹುಟ್ಟಿಗೆ ಕಾರಣವಾಗಿ ಶಕಾರಂಭ ಮಾಡಿದ ಶಕಪುರುಷ ಯೇಸುಕ್ರಿಸ್ತ. ಸೋಜಿಗದ ವಿಷಯವೆಂದರೆ ಯೇಸುಕ್ರಿಸ್ತ ಹುಟ್ಟಿದ್ದು ಕನ್ಯೆ ಮೇರಿಯಲ್ಲಿ. ಒಂದು ರೀತಿ 'ಮಹಾಭಾರತ' ದಲ್ಲಿ ಕನ್ಯೆ ಕುಂತೀದೇವಿಯಲ್ಲಿ ಕರ್ಣ ಜನಿಸಿದಂತೆ. ಆಗಷ್ಟೇ ಜೋಸೆಫ್‌ನೊಡನೆ ವಿವಾಹ ನಿಶ್ಚಯವಾಗಿದ್ದ ಮೇರಿ ವಿವಾಹವಾಗಿ ಅವನನ್ನು ಕೂಡುವ ಮುನ್ನವೇ ತನ್ನ ಗರ್ಭದಲ್ಲಿ ಯೇಸುವನ್ನು ಪವಿತ್ರಾತ್ಮನಿಂದ ಹೊತ್ತಿದ್ದಳು. ದೇವವಾಣಿಯಿಂದ ಆ ಮಗುವಿನ ಮಹತ್ವ ಅರಿತ ಜೋಸೆಫನು ಮೇರಿಯ ಕೈಬಿಡದೆ ಮದುವೆಯಾಗಿ ಅವಳಿಗೆ ಹೆರಿಗೆಯಾಗುವ ತನಕವೂ ಬಹಳ ಜೋಪಾನ ಮಾಡಿದ್ದ. ಅದೇ ಅದೊಂದು ಶುಭ ದಿನ, ಜನಗಣತಿಗಾಗಿ ಜೋಸೆಫ್–ಮೇರಿ ಜೊತೆಯಾಗಿ ಬೆತ್ಲೆ ಹೇಮ್‌ಗೆ ಹೋಗಿದ್ದಾಗ ಅಲ್ಲಿ ಮೇರಿ ಮಾತೆಯಾಗಿ, ಕುರಿಕೊಟ್ಟಿಗೆಯಲ್ಲಿ ಜಗದ ಬೆಳಕಾದ ಯೇಸುಕ್ರಿಸ್ತನಿಗೆ ಜನ್ಮ ನೀಡಿದ್ದಳು. ಆಗ ಒಂದು ಕ್ಷಣ ಇಡೀ ಬೆತ್ಲೆಹೇಮ್ ನಗರದಲ್ಲಿ ಮಿಂಚು ಹೊಳೆದಂತಹ ಅನುಭವವಾಗಿತ್ತಂತೆ.

ಯೇಸು ಮೂಲತಃ ಒಬ್ಬ ಯಹೂದಿ. ಪ್ಯಾಲೆಸ್ಟೈನ್ ದೇಶ, ಅಂದರೆ ಈಗಿನ ಇಸ್ರೇಲ್ ಅವನ ಮೂಲನೆಲೆ. ಯೇಸು ಜನಿಸಿದ ಆ ಕಾಲದಲ್ಲಿ ಪ್ಯಾಲೆಸ್ಟೈನ್ ದೇಶದ ಬದುಕು ಸಂಪೂರ್ಣ ಯಹೂದಿ ಸಂಸ್ಕೃತಿಯದ್ದಾಗಿತ್ತು. ಮಾನವ ಕುಲಕ್ಕೆ ಮಾರಕವಾದ ಕಂದಾಚಾರ, ಮೂಢನಂಬಿಕೆಯಂತಹ ಅನಿಷ್ಟ ಪದ್ಧತಿಗಳನ್ನು ವಿರೋಧಿಸಿ ಸರ್ವರ ಉದ್ಧಾರದ ಸಮಾಜ ನಿರ್ಮಿಸುವತ್ತ ಯೇಸು ನಡೆದ. ಆನೆ ನಡೆದದ್ದೇ ಹಾದಿ ಎಂಬಂತಹ ದಿಟ್ಟ ಹೆಜ್ಜೆಗಳು ಅವನದು. ಸಕಲರಿಗೂ ಲೇಸನ್ನು ಬಯಸುವ ಮಾನವೀಯತೆಯ ತಳಹದಿಯಲ್ಲಿ ಅವನು ಕ್ರೈಸ್ತ ಧರ್ಮವನ್ನು ಸ್ಥಾಪಿಸಿದ. ಇದೇ ಯೇಸುವಿಗೆ ಮುಳುವಾದದ್ದು. ಒಳ್ಳೆಯದನ್ನು ಮಾಡಲು ಹೋಗಿ ಕೆಟ್ಟವರ ಕೆಂಗಣ್ಣಿಗೆ ಯೇಸು ಗುರಿಯಾದದ್ದಷ್ಟೇ ಅಲ್ಲ ಬಹು ಮುಖ್ಯವಾಗಿ ಯಹೂದಿ ಪುರೋಹಿತಶಾಹಿಗಳನ್ನು ವಿರೋಧ ಕಟ್ಟಿಕೊಂಡ. ಯಹೂದಿ ಧರ್ಮಗುರುಗಳಿಗಂತೂ ಯೇಸು ಬೇಡವೇ ಬೇಡವಾಗಿದ್ದ. ಪರಿಣಾಮ ರಾಜದ್ರೋಹದ ಆಪಾದನೆ ಇವನ ಹೆಗಲೇರಿತ್ತು. ಇದರಿಂದಾಗಿ ನ್ಯಾಯ, ನೀತಿ, ಧರ್ಮ, ಸತ್ಯ, ನಿಷ್ಠೆ, ಪ್ರಾಮಾಣಿಕತೆ, ತ್ಯಾಗಗಳ ಸಂಗಮವೇ ಆಗಿ ಮನುಷ್ಯತ್ವದ ಮೇರು ಪರ್ವವೇ ಆಗಿದ್ದ ಇಂಥ ದೈವೀಕ ಪುರುಷ ಯೇಸುವನ್ನು ಕಠಿಣ ಚಿತ್ರಹಿಂಸೆಗೊಳಪಡಿಸಿ ದೇಶಾಧಿಕಾರಿ ಪಿಲಾತನು ಮರಣದಂಡನೆಯ ಶಿಲುಬೆಗೇರಿಸಿದ. ಯೇಸುವಿನ ಬಲಿದಾನ ಹೀಗಾಗಿತ್ತು. ಅದು ಎಷ್ಟೊಂದು ಘೋರ ದುರಂತವಾಗಿತ್ತೆಂಬುದನ್ನು ಹೇಳಲು ಅಕ್ಷರಗಳೂ ಕಣ್ಣೀರಿಡುವಂಥ ಮಹಾ ದುರಂತವದು. ಆದರೆ, ಯೇಸು ಶಿಲುಬೆಗೇರಿದ ಮೂರನೆಯ ದಿನ ಪುನರುತ್ಥಾನಗೊಂಡು ತನ್ನ ಆಪ್ತೇಷ್ಟರನೇಕರಿಗೆ ದರ್ಶನಕೊಟ್ಟರು. ಆಮೇಲೆ ನಲವತ್ತು ದಿನಗಳ ಕಾಲ ತಮ್ಮ ಶಿಷ್ಯಕೋಟಿಯ ಜೊತೆಯಲ್ಲಿದ್ದು ಅವರ ಸಮ್ಮುಖದಲ್ಲೇ ಒಂದು ದಿನ ಸ್ವರ್ಗದತ್ತ ಪಯಣ ಬೆಳೆಸಿದರು. ಆ ಮಹಾದಿನವೇ ಯೇಸುವಿನ ಸ್ವರ್ಗಾರೋಹಣ ದಿನ. ಯೇಸುವಿನ ಜನನ, ಮರಣ, ಪುನರುತ್ಥಾನ ಹಾಗೂ ಸ್ವರ್ಗಾರೋಹಣ ದಿನಗಳು ಕ್ರಿಶ್ಚಿಯನ್ನರಿಗೆ ಅತ್ಯಂತ ಪವಿತ್ರ ದಿನಗಳಾಗಿವೆ.

ಯೇಸು ಬೆತ್ಲೆಹೇಮ್‌ನಲ್ಲಿ ಜನಿಸಿದರೂ ಅವನ ಊರು ಗಲಿಲೇಯ ಪ್ರಾಂತ್ಯದ ನಜರೇತ್ ಎಂಬ ಪುಟ್ಟ ಗ್ರಾಮ. ಇದು ಅವನ ಮತ್ತು ಅವನ ತಂದೆ ಜೋಸೆಫ್‌ನ ಊರಷ್ಟೇ ಅಲ್ಲ, ಯೇಸುವಿನ ತಾಯಿ ಮೇರಿಯ ತವರೂ ಹೌದು. ತನ್ನ ತಂದೆ–ತಾಯಿಗಳೊಂದಿಗೆ ಯೇಸು ಬೆಳೆದು ಬಾಳಿದ ಮನೆ ಈಗಲೂ ಅಲ್ಲಿದೆ. ಈ ಮನೆಯನ್ನು ಸಂರಕ್ಷಿಸಿ ಅದರ ಮೇಲೆಯೇ ಬಹು ಭವ್ಯವೂ ದಿವ್ಯವೂ ಆದ ಚರ್ಚ್ ಅನ್ನು ಕಟ್ಟಲಾಗಿದೆ. ಈ ನಜರೇತ್ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ ಯೇಸು ತನ್ನ 12ನೇ ವಯಸ್ಸಿನಲ್ಲೇ ಮತಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿ ಅಗಾಧ ಪಾಂಡಿತ್ಯ ಪಡೆದು ಪುಟ್ಟ ವಯಸ್ಸಿನಲ್ಲೇ ಗಲಿಲೇಯದಲ್ಲಿ ಬೋಧನೆ ಮಾಡಿ ಎಲ್ಲರನ್ನೂ ಆಕರ್ಷಿಸಿದ್ದ. ಅಷ್ಟೇ ಅಲ್ಲ ಜೆರುಸಲೇಮ್ ಪಟ್ಟಣದ ತುಂಬಾ ಪ್ರಸಿದ್ಧಿ ಗಳಿಸಿದ್ದ. 13ನೇ ವಯಸ್ಸಿಗೆ ಯಾರಿಗೂ ಕಾಣಿಸದೆ ಎತ್ತಲೋ ಮಾಯವಾಗಿ ಹೊರಟು ಹೋಗಿದ್ದ ಯೇಸು ಮತ್ತೆ ಜನರೆದುರು ಕಾಣಿಸಿಕೊಂಡದ್ದು ತನ್ನ 31ನೇ ವಯಸ್ಸಿನಲ್ಲಿ. ಈ ನಡುವೆ ಸುಮಾರು 19 ವರ್ಷಗಳು ಪ್ರಪಂಚ ಪ್ರದಕ್ಷಿಣೆ ಮಾಡಿದ್ದ ಯೇಸು ಜ್ಞಾನಾರ್ಜನೆಯಲ್ಲಿ ತೊಡಗಿ ಜ್ಞಾನದ ಮಹಾವೃಕ್ಷವೇ ಆಗಿದ್ದ. ಆ ಸಮಯದಲ್ಲೇ ಯೇಸು ಭಾರತಕ್ಕೂ ಭೇಟಿ ನೀಡಿದ್ದನೆಂದು ಹೇಳುವುದುಂಟು. ಹಾಗಾಗಿ ಯೇಸು ಹಿಂದೂ ಧರ್ಮ ಮತ್ತು ಬೌದ್ಧಧರ್ಮಗಳು ಸೇರಿದಂತೆ ಜಗತ್ತಿನ ಎಲ್ಲಾ ಧರ್ಮಗಳನ್ನೂ ಅವಲೋಕಿಸಿದ್ದನೆಂದು ಹೇಳಲಾಗುತ್ತದೆ. ಯೇಸುಗೆ ಜೆರುಸಲೇಮ್ ಅತ್ಯಂತ ಪ್ರಿಯವಾಗಿತ್ತು. ಹಾಗಾಗಿ ಅದನ್ನು ಅವನು ತನ್ನ ಕರ್ಮಭೂಮಿ ಮಾಡಿಕೊಂಡಿದ್ದ. ಜೆರುಸಲೇಮ್ ಎಂಬುದು ಸಾಮಾನ್ಯ ಸ್ಥಳವಲ್ಲ. ಮೂರು ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದಿನ ಪುರಾತನ ನಗರವದು. ಯಹೂದ್ಯ ವೀರ ಡೇವಿಡ್ ಇದನ್ನು ರಾಜಧಾನಿ ಮಾಡಿಕೊಂಡಿದ್ದ. ಅವನ ಮಗ ಸಾಲೋಮನ್ ಇಲ್ಲೊಂದು ಬೃಹತ್ ಚರ್ಚ್ ನಿರ್ಮಿಸಿದ್ದಾನೆ. ಯಹೂದಿಗಳ ಪ್ರಮುಖ ಧಾರ್ಮಿಕ ಸ್ಥಳ ಅಳುವಗೋಡೆ (Wailing Wall) ಇರುವುದು ಇಲ್ಲಿಯೇ. ಇದರ ಸಮೀಪವೇ ಮುಸ್ಲಿಮರ ಪವಿತ್ರ ಮಸೀದಿಯೂ ಇದೆ. ಪ್ರವಾದಿ ಮಹಮದ್ ಸ್ವರ್ಗಾರೋಹಣ ಮಾಡಿದ್ದು ಇಲ್ಲಿಂದಲೇ ಎಂಬ ಪ್ರತೀತಿ ಇಲ್ಲಿ ಜನಜನಿತವಾಗಿದೆ. ಕ್ರೈಸ್ತ, ಇಸ್ಲಾಂ, ಯಹೂದ್ಯ ಮತಗಳ ತ್ರಿವೇಣಿ ಸಂಗಮವಿದು. ಎಲ್ಲಕ್ಕಿಂತ ಮಿಗಿಲಾಗಿ ಯೇಸು ಶಿಲುಬೆಗೇರಿದ್ದು ಇದೇ ಜೆರುಸಲೇಮ್‌ನಲ್ಲೇ. ಯೇಸುವಿಗೆ ದೀಕ್ಷೆಕೊಟ್ಟ ಗುರು ಜಾನ್ ಜನಿಸಿದ್ದು ಕೂಡ ಇಲ್ಲಿಯೇ. ಡಿ.ವಿ.ಜಿ. ಹೇಳುವಂತೆ ತನ್ನ ಶಿಲುಬೆಯನ್ನು ತಾನೇ ಹೊತ್ತು ನಡೆದ ಕ್ರಿಸ್ತನ ದುಃಖಸಾಗರದ ದಾರಿ ಜೋರ್ಡಾನ್ ನದಿ ಕೂಡ ಇಲ್ಲಿಯೇ ಹರಿಯುವುದು. ಅಷ್ಟೇ ಅಲ್ಲ, ಯೇಸುವಿನ ಕಳೇಬರ ಇರುವ ಸಮಾಧಿ ಇರುವುದು ಇದೇ ಪುಣ್ಯಸ್ಥಳದಲ್ಲಿ. ಕ್ರಿಸ್‌ಮಸ್‌ನಲ್ಲಿ ಇದರ ವೈಭವ ವರ್ಣಿಸಲಸದಳ. ಸ್ವರ್ಗವೆಂಬುದು ಇಲ್ಲಿ ಅಕ್ಷರಶಃ ತೆರೆದುಕೊಂಡಿರುತ್ತದೆ. ಕ್ರಿಶ್ಚಿಯನ್ನರಿಗಂತೂ ಇದೊಂದು ಅದ್ಭುತಲೋಕ. ಈ ಲೌಕಿಕ ಲೋಕದಲ್ಲಿ ಯೇಸು ಜೀವಿಸಿದ್ದು ಕೇವಲ 33 ವರ್ಷಗಳು ಮಾತ್ರ. ಆದರೆ ಅವನ ಸಾಧನೆ ಲೋಕವಿರುವತನಕವೂ ಬೆಳಕಿನ ತೋರು ಮಾರ್ಗವಾಗುಳಿದಿದೆ. ಯೇಸುವಿನ ತತ್ವಾದರ್ಶಗಳ ಬೋಧನೆಯ 'ಬೈಬಲ್' ಕ್ರಿಶ್ಚಿಯನ್ನರಿಗೆ ಮಾತ್ರವಲ್ಲದೆ ಒಳಿತನ್ನು ಪ್ರೀತಿಸುವವರೆಲ್ಲರಿಗೂ ಸದ್ಭಾವನಾ ಗ್ರಂಥವಾಗಿದೆ. ಕ್ರಿಸ್‌ಮಸ್ ಆಚರಣೆಯೂ ಸಹ ಭಾವೈಕ್ಯತೆಯ ಬೆಳಕನ್ನು ಚೆಲ್ಲುವುದೇ ಆಗಿದೆ. ಹಾಗೆಯೇ ಯೇಸುವಿನ ಮರಣ ಮತ್ತು ಪುನರುತ್ಥಾನ ಹಾಗೂ ಸ್ವರ್ಗಾರೋಹಣ ದಿನಗಳು ಕ್ರಿಶ್ಚಿಯನ್ನರಿಗೆ ಅತ್ಯಂತ ಪವಿತ್ರ ಪ್ರಾಮುಖ್ಯ ದಿನಗಳಾಗಿವೆ.





ವಾರಭವಿಷ್ಯ

25.12.2022 ರಿಂದ 31.12.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :– ರವಿ–ಧನುಸ್ಸು, ಚಂದ್ರ–ಮಕರ, ಕುಂಭ, ಮೀನ, ಕುಜ–ಮಿಥುನ, ಬುಧ–ಧನುಸ್ಸು, ಗುರು–ಮೀನ, ಶುಕ್ರ–ಧನುಸ್ಸು, ಮಕರ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು

ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಮನೆಯಲ್ಲೂ, ಆಫೀಸಿನಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಆರ್ಥಿಕ ಪರಿಸ್ಥಿತಿ ಸುಧಾರಿಸಿದರೂ, ಸಾಲಗಾರರ ಒತ್ತಡವೂ ಇರುತ್ತದೆ. ನಿಮ್ಮ ಸುತ್ತ ನಿಮ್ಮನ್ನು ಅನುಮಾನಿಸಿ ನೋಡುವವರು ಬಹಳ ಮಂದಿ ಇದ್ದಾರೆ. ಸಪ್ತಾಹದ ಅಂತ್ಯಕ್ಕೆ ಸುಖ–ಸಂತೋಷ, ಧನ, ಧಾನ್ಯ ಸಂಗ್ರಹ, ಹೊಸ ಹೂಡಿಕೆಗಳಿಗೆ ಪ್ರೇರಣೆ ಆಗುತ್ತದೆ, ನೋಡಿಕೊಂಡು ಮಾಡಿ, ಕೈ ಸುಟ್ಟುಕೊಳ್ಳಬೇಡಿ. ಶ್ರೀ ಗಣೇಶನಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

'ತಾನೊಂದು ಬಯಸಿದರೆ ದೈವವೊಂದು ಬಗೆಯಿತು' ಎಂಬಂತೆ ನಿಮ್ಮ ಪರಿಸ್ಥಿತಿ. ತಾಳ್ಮೆಯಿಂದ ಮುಂದುವರೆಯಿರಿ. ಗುರಿ ಮುಟ್ಟುವ ಕಾಲ ಬಂದೇ ಬರುವುದು. ವಯಸ್ಕರಿಗೆ ಉತ್ತಮ ಉದ್ಯೋಗಾವಕಾಶ ಸಿಗುವ ಯೋಗವಿದೆ. ಕೃಷಿಕರಿಗೆ ಒಳ್ಳೆಯ ಬೆಳೆ ಹಾಗೂ ಬೆಲೆ ದೊರೆಯಲಿದೆ. ಕೃಷಿ ಯಂತ್ರೋಪಕರಣ ಮಾರಾಟಗಾರರಿಗೆ ಧನಾದಾಯ ಚೆನ್ನಾಗಿದೆ. ಜನ್ಮಸ್ಥ ಕೇತು ಅಜೀರ್ಣ, ಕರುಳು ಸಂಬಂಧಿ ಕಾಯಿಲೆಗೆ ಕಾರಣವಾಗುವನು. ಶ್ರೀದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ –8.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಅಪೇಕ್ಷಿತ ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ಸಾಗುವುದು. ನಿಮ್ಮ ಸೃಜನಶೀಲತೆ ಉನ್ನತ ಮಟ್ಟದ್ದಾಗಿರುತ್ತದೆ. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ಜರುಗುವುದು. ಗೃಹ ನಿರ್ಮಾಣಕ್ಕೆ ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಬಹುದು. ದ್ವಿದಳ ಧಾನ್ಯ, ಎಳ್ಳು ಸಗಟು ಮಾರಾಟಗಾರರಿಗೆ ಹೆಚ್ಚಿನ ಧನಲಾಭ. ಸಂಶೋಧನೆ ನಡೆಸುವ ವ್ಯಕ್ತಿಗಳಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ಕಳ್ಳಕಾಕರಿಂದ ಅಮೂಲ್ಯ ವಸ್ತು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–5.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಉದ್ಯೋಗ, ವ್ಯವಹಾರಗಳಲ್ಲಿ ಧನ ಲಾಭ, ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ಸಿವಿಲ್ ಇಂಜಿನಿಯರ್‌ಗಳಿಗೆ, ರಿಯಲ್ ಎಸ್ಟೇಟ್ ಉದ್ಯೋಗದವರಿಗೆ ದೊಡ್ಡ ಯೋಜನೆಗಳು ಸಿಗುವುದು. ಗುರುಬಲ ಇರುವ ಕಾರಣ ವಿವಾಹಾಕಾಂಕ್ಷಿಗಳಿಗೆ ಕಂಕಣ ಬಲ ಕೂಡಿ ಬರಲಿದೆ. ಮಕ್ಕಳು ಹೆಮ್ಮೆಪಡುವಂತಹ ಕಾರ್ಯವನ್ನು ಸಾಧಿಸುವರು. ಲೋಹ, ಎಣ್ಣೆ ವ್ಯಾಪಾರಸ್ಥರಿಗೆ ಅಧಿಕ ಧನಲಾಭವಾಗುವುದು. ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ–6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಪೂರ್ವಾರ್ಧದಲ್ಲಿ ಆಗಬೇಕಾದ್ದು ಆಗದೆಯೂ, ಆಗಬಾರದ್ದು ಆಗುತ್ತಲೂ ಸಾಗುವುದು. ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳದಿಂದ ಹಿನ್ನಡೆ ಉಂಟಾಗುವುದು. ನಿಮ್ಮ ರಾಶ್ಯಾಧಿಪನ ಕೃಪೆಯಿಂದ ವಿದ್ಯಾ, ವ್ಯಾಸಂಗ ಪ್ರಸಂಗಗಳಲ್ಲಿ ಕೀರ್ತಿಯನ್ನು ಹೊಂದುವಿರಿ. ವಾಣಿಜ್ಯ, ವ್ಯಾಪಾರಗಳಲ್ಲಿ ಸ್ವಲ್ಪ ಚೇತರಿಕೆ ಕಂಡು ಬರುವುದು. ವಾರಾಂತ್ಯಕ್ಕೆ ಪತ್ರ ಬರಹಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಲಾಭ. ಶ್ರೀ ಸತ್ಯನಾರಾಯಣ ವ್ರತ ಕಥೆ ಓದಿ. ಶುಭ ಸಂಖ್ಯೆ–4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆರಂಭ ಆಶಾದಾಯಕ. ಆದರೆ ವಾಸ್ತವಾಂಶವನ್ನು ಆಧರಿಸಿ ಮುಂದುವರೆಯಿರಿ. ಹಣ ಸಂಪಾದನೆ ಚೆನ್ನಾಗಿದ್ದರೂ ಅದನ್ನು ಮೀರಿದ ಖರ್ಚುಗಳಿಂದ ಕಂಗಾಲಾಗುವಿರಿ. ಮನೆಗೆ ಬರುವ ಅತಿಥಿ–ಅಭ್ಯಾಗತರ ಆಗಮನ 'ಬಲವಂತದ ಮಾಘಸ್ನಾನ'ವಾದೀತು. ನೀವು ಅಡ್ಡಮಾರ್ಗದಲ್ಲಿ ಹೋಗುವುದನ್ನು ತಪ್ಪಿಸಿ. ಮನೆ ಮಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಹೊಸ ವರ್ಷಾಚರಣೆಯನ್ನು ಇತಿ–ಮಿತಿ ಅರಿತು ಆಚರಿಸಿ. ಶ್ರೀ ಅಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

'ಸಾಲ ಮಾಡಿ ತುಪ್ಪ ತಿನ್ನು' ಎಂಬ ಗಾದೆ ಇದೆ. ವಾರದ ಆದಿಗೆ ಸುಖ, ಸಂತೋಷಗಳು. ಧನ, ಧಾನ್ಯ ಸಂಗ್ರಹ, ಶೇರು ವ್ಯವಹಾರಗಳಲ್ಲಿ ಉತ್ತಮ ಲಾಭವನ್ನು ಹೊಂದಬಹುದು. ಸ್ತ್ರೀ ಮೂಲಕ ಭೋಗ ವಸ್ತುಗಳ ಸಂಗ್ರಹ. ಹೊಸ ವ್ಯಾಪಾರ ವ್ಯವಹಾರಗಳನ್ನು ಆರಂಭಿಸಲು ಗುರು ಕೃಪೆ ಇದೆ. ಆದರೆ ಪೂರ್ವ ತಯಾರಿ ಅತೀ ಮುಖ್ಯ. ಕೇತು ಚತುರ್ಥವಿದ್ದು, ಅಸಂತುಷ್ಟವಾದ ಮನಸ್ಸು, ಭಾವೋದ್ವೇಗಕ್ಕೆ ಒಳಗಾಗುವಿರಿ. ಶ್ರೀ ಚಾಮುಂಡೀ ಸ್ತುತಿ. ಶುಭ ಸಂಖ್ಯೆ–9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಶನಿ ಪ್ರಭಾವದ ಹೊರತಾಗಿಯೂ ಹರ್ಷೋಲ್ಲಾಸಗಳನ್ನು ತರಲಿದ್ದಾನೆ. ಇಷ್ಟ ಬಂಧು ಜನರ ಮಿಲನ, ಮೃಷ್ಟಾನ್ನ ಭೋಜನ, ಶಯನ ಸುಖಗಳು ಉಂಟಾಗಲಿದೆ. ಕಷ್ಟ ಅನುಭವಿಸಲು ತಯಾರಾದರೆ ಸುಖ ಬಯಸದೇ ಬರುತ್ತದೆ. ಚತುರ್ಥದಲ್ಲಿ ರಾಹು ಸಂಚಾರವಿದ್ದು, ನೀಚ ಜನರ ಸಹವಾಸದಿಂದ ಆರಕ್ಷಕ ಠಾಣೆಯ ದರ್ಶನವಾದೀತು 'ಪಾರ್ಟಿ'ಗಳು ಎಲ್ಲೆ ಮೀರದಿರಲಿ. ಶ್ರೀ ಅಶ್ವತ್ಥ ಪೂಜೆ. ಶುಭ ಸಂಖ್ಯೆ–5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ಮಾತು ಬಲ್ಲವ ಮಾಣಿಕ್ಯ ತಂದ' ಎಂಬ ನಾಣ್ಣುಡಿಯಂತೆ ಉತ್ತಮ ಮಾತಿನಿಂದ ಶುಭ ಫಲವನ್ನು ಹೊಂದುವಿರಿ. ಸಾಹಸ ಪ್ರವೃತ್ತಿಯಿಂದ ಕಾರ್ಯ ಸಾಧನೆ. ಟ್ರಾವಲ್ ಏಜೆನ್ಸಿಯವರಿಗೆ ಉತ್ತಮ ಯೋಜನೆಗಳು ದೊರೆಯುವುದು. ಮಹಿಳಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ಮನೆ ನೌಕರರ ಮೇಲೆ ತೀರಾ ನಂಬಿಕೆ ಇಡುವುದು ಒಳ್ಳೆಯದಲ್ಲ. ಈ ವಾರ ಯಾರಿಗೂ ಸಾಲ ಕೊಡಬೇಡಿ. ಶ್ರೀ ಗುರು ಪ್ರಾರ್ಥನೆ. ಶುಭ ಸಂಖ್ಯೆ–7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರ 'ಕಭಿ ಖುಷಿ ಕಭಿ ಗಮ್'ನಂತೆ ಸಾಗಲಿದೆ. ನೀವು ಸರಿ ಮಾರ್ಗದಲ್ಲಿ ಸಾಗಲು ಗುರುವಿನ ಅವಶ್ಯಕತೆ ಇದೆ. ಸಿರಿ–ಸಂಪದಗಳು ಅನಾಯಾಸವಾಗಿ ಬಂದರೂ ಮನಸ್ಸು ವ್ಯಾಕುಲಗೊಂಡಿರುತ್ತದೆ. ರಾಜಕೀಯ ರಂಗದವರಿಗೆ ಶತ್ರುಗಳಿಂದ ಉಪದ್ರವ. ವಾರ ಸಾಗಿದಂತೆ ಕೆಲಸದ ಹೊರೆಯಲ್ಲಿ ಸ್ವಲ್ಪ ಇಳಿಕೆ ಕಂಡು ಬರುತ್ತದೆ. ಯಾರಿಗೂ ಏನನ್ನೂ ಪ್ರಾಮಿಸ್ ಮಾಡದಿರಿ. ಹೊಸ ವರ್ಷಾಚರಣೆಯಲ್ಲಿ ಕಾನೂನು ಬಾಹಿರ ಚಟುವಟಿಕೆ ಬೇಡಿ. ಶ್ರೀ ಶನಿದೇವ ಸ್ತುತಿ. ಶುಭ ಸಂಖ್ಯೆ–4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)


'ಹಸಿದು ಉಂಡ ಊಟ ರುಚಿ ಜಾಸ್ತಿ' ಎಂಬಂತೆ ನಿಮ್ಮ ಬಹು ನಿರೀಕ್ಷಿತ ಯೋಜನೆಗಳು ಸಾಕಾರಗೊಳ್ಳುವಲ್ಲಿ ನಿಮಗೆ ತೃಪ್ತಿ ಉಂಟಾಗಲಿದೆ. ನಿಮ್ಮ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ನೀಡಲು ಬೃಹಸ್ಪತಿ ಸನ್ನದ್ಧರಾಗಿ ನಿಂತಿದ್ದಾರೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಸರಾಫ್ ಹಾಗೂ ಫೈನಾನ್ಸ್ ವ್ಯವಹಾರಗಳು ಹೆಚ್ಚಿನ ಆದಾಯವನ್ನು ತರುವುದು. ಅಷ್ಟಮಸ್ಥಿತ ರಾಹುವಿನ ಕಾರಣ ವಾಹನ ಚಾಲನೆಯಲ್ಲಿ ಎಚ್ಚರವಾಗಿರಿ. ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–3.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಕುಟುಂಬ ಜೀವನದಲ್ಲಿ ಎಲ್ಲಾ ಅಡೆತಡೆಗಳು ನಿವಾರಣೆಯಾಗಲು ಚಂದ್ರಗ್ರಹದ ಕೃಪೆಯಿದೆ. ಜೊತೆಗೆ ನಿಮ್ಮ ನಡವಳಿಕೆಯಲ್ಲಿ ಸಕಾರಾತ್ಮಕತೆ ಇರುತ್ತದೆ. ಹತ್ತನೇ ಮನೆಯಲ್ಲಿ ಸೂರ್ಯನಿರುವುದರಿಂದ ನಿಮಗೆ ಹೊಸ ಅಧಿಕಾರ ಪ್ರಾಪ್ತಿ ಆಗಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಕಾಣುವಿರಿ. ಲೋಕೋಪಕಾರ ಬುದ್ಧಿಯಿಂದ ಜನ ಮೆಚ್ಚುಗೆಯನ್ನು ಗಳಿಸುವಿರಿ. ಆರೋಗ್ಯ ಕಾಪಾಡಿಕೊಳ್ಳಿ. ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ–8.

ಮೃಗಾಲಯದಲ್ಲಿ ಹುಲಿ ಮರಿಗಳು ಪ್ರವಾಸಿಗರ ವೀಕ್ಷಣೆಗೆ ಮುಕ್ತ





ಮೈಸೂರು, ಡಿ.24(ಜಿಎ)– ಮೃಗಾಲಯವನ್ನು ಮತ್ತಷ್ಟು ಆಕರ್ಷಿಸಲಿರುವ ರಾಕಿ ಮತ್ತು ತಾರಾ ಎಂಬ ಹುಲಿಗಳಿಗೆ ಜನಿಸಿರುವ ಮೂರು ಹುಲಿ ಮರಿಗಳ ತುಂಟಾಟ..

ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ರಾಖಿ ಮತ್ತು ತಾರಾ ಎಂಬ ಹುಲಿಗಳಿಗೆ ಜನಿಸಿರುವ ಮೂರು ಹುಲಿ ಮರಿಗಳನ್ನು ಶನಿವಾರ ಸಚಿವ ಎಸ್.ಟಿ. ಸೋಮಶೇಖರ್ ಪ್ರವಾಸಿ ವೀಕ್ಷಣೆಗೆ ಮುಕ್ತಗೊಳಿಸಿದರು.

2018ರಲ್ಲಿ ಹುಣಸೂರಿನ ಶೆಟ್ಟಿ ಹಳ್ಳಿಯಲ್ಲಿ ಸಂರಕ್ಷಣೆ ಮಾಡಲಾಗಿದ್ದ ರಾಕಿ(8 ವರ್ಷ)ಹಾಗೂ 2018ರಲ್ಲಿ ಚೆನ್ನೈ ಮೃಗಾಲಯದಿಂದ ಪ್ರಾಣಿವಿನಿಮಯ ಯೋಜನೆಯಡಿ ಬೆಂಗಾಲ್ ಹುಲಿ ತಾರಾಳನ್ನು (8ವರ್ಷ) ಮೈಸೂರಿನ ಮೃಗಾಲಯಕ್ಕೆ ತರಲಾಗಿತ್ತು. ಇದೀಗ ಈ ಎರಡೂ ಹುಲಿಗಳಿಗೆ ಮೂರು ಮರಿಗಳು(1 ಗಂಡು 2 ಹೆಣ್ಣು) ಜನಿಸಿವೆ.

ಮೂರು ಹುಲಿ ಮರಿಗಳು(6 ತಿಂಗಳು) ಆಯೋಗ್ಯದಿಂದಿದ್ದು, ಅತ್ಯಂತ ಚುಟುವಟಿಕೆಯಿಂದ ಕೂಡಿವೆ. ಪ್ರತಿ ಮರಿಯೂ 30 ರಿಂದ 35 ಕೆ.ಜಿ ತೂಕವನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ಗಂಡು ಮರಿಯನ್ನು ಚಿತ್ರದುರ್ಗದ ಮೃಗಾಲಯಕ್ಕೆ ನೀಡುವ ಚಿಂತನೆಯನ್ನು ಮೃಗಾಲಯ ಅಧಿಕಾರಿಗಳು ಹೊಂದಿದ್ದಾರೆ. ಈ ಮೂರು ಹುಲಿ ಮರಿಗಳು ಸದ್ಯ ಮೈಸೂರಿನ ಮೃಗಾಲಯದ ಆಕರ್ಷಣೆಗಳಾಗಿದ್ದು, ಮೊದಲ ದಿನವೇ ಪ್ರವಾಸಿಗರು ಹುಲಿ ಮರಿಗಳನ್ನು ನೋಡಿ ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಎಸ್.ಟಿ. ಸೋಮಶೇಖರ್ ಮಾತನಾಡಿ, ಮೈಸೂರು ಮೃಗಾಲಯ ಪ್ರವಾಸಿಗರಿಗೆ ಪ್ರತಿ ಬಾರೀ ಏನಾದರೂ ವಿಶೇಷತೆಗಳನ್ನು ನೀಡುವ ಮೂಲಕ ಆಕರ್ಷಿಸಿದ್ದು, ಅದರಂತೆ ಇಂದು ಹುಲಿ ಮರಿಗಳನ್ನು ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ ಎಂದರು.

ಪ್ರಾಣಿಗಳ ದತ್ತು ಪಡೆಯುವ ಮೂಲಕ ಜನರು ಮೃಗಾಲಯಕ್ಕೆ ಸಹಕಾರಿಯಾಗಿದ್ದಾರೆ. ಕಳೆದ ಬಾರಿ ದತ್ತು ಪಡೆದವರು ನವೀಕರಣ ಮಾಡಿಕೊಂಡರೆ, ಒಳಿತು. ಪ್ರಾಧಿಕಾರದ ಅಧ್ಯಕ್ಷರು ಇದರ ಬಗ್ಗೆ ಮಾಹಿತಿ ನೀಡಿದರೆ, ನಾನು ಅವರನ್ನು ಸಂಪರ್ಕಿಸಿ ನವೀಕರಿಸಿಕೊಳ್ಳುವಂತೆ ಮನವಿ ಮಾಡುತ್ತೇನೆ ಎಂದರು.

ಸದ್ಯ ಮೃಗಾಲಯದಲ್ಲಿ 3 ಗಂಡು, 5 ಹೆಣ್ಣು ಹಾಗೂ 3 ಮರಿಗಳು ಸೇರಿದಂತೆ ಒಟ್ಟು 11 ಹುಲಿಗಳಿವೆ. ಇದಲ್ಲದೇ ಕೂರ್ಗಳ್ಳಿಯ ಚಾಮುಂಡಿ ರಕ್ಷಣೆ, ಸಂರಕ್ಷಣೆ ಮತ್ತು ಸಂತಾನಾಭಿವೃದ್ಧಿ ಕೇಂದ್ರದಲ್ಲಿ 6 ಗಂಡು ಹುಲಿಗಳಿವೆ. ಎಲ್ಲವೂ ಉತ್ತಮ ರೀತಿಯಲ್ಲಿ ಸಂರಕ್ಷಿಸಲಾಗುತ್ತಿದೆ. ಭಾನುವಾರ ಬೆಳಗ್ಗೆ 9 ಗಂಟೆಗೆ ಅಧಿಕೃತವಾಗಿ ಹುಲಿ ಮರಿಗಳನ್ನು ಪ್ರವಾಸಿಗರ ವೀಕ್ಷಣೆಗೆ ಅವಕಾಶ ನೀಡಲಾಗಿದೆ.

ಈ ವೇಳೆ ಶಾಸಕ ಎಸ್.ಎ. ರಾಮದಾಸ್, ಜಿಲ್ಲಾಧಿಕಾರಿ ಕೆ.ವಿ ರಾಜೇಂದ್ರ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೇಯರ್ ಶಿವಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀವತ್ಸ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕಿರಣ್ ಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಖನಿಜ ಭವನ ಉದ್ಘಾಟನೆ





ಮೈಸೂರು, ಡಿ.24– ಮೈಸೂರಿನ ಲಿಂಗಾಂಬುಧಿಯಲ್ಲಿ ನಿರ್ಮಿಸಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಖನಿಜ ಭವನ ನೂತನ ಕಚೇರಿ ಕಟ್ಟಡವನ್ನು ಇಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು ಲಿಂಗಾಂಬುಧಿ ಗ್ರಾಮದ ಕೆಬಿಎಲ್ ಸೆಂಚ್ಯೂರಿ ಜೇಸ್–1 ನಲ್ಲಿ 22 ಕುಂಟೆ ಜಾಗದಲ್ಲಿ 1.86 ಕೋಟಿ ರೂ. ವೆಚ್ಚದಲ್ಲಿ 52 ಚದರ ಅಡಿಯಲ್ಲಿ ಖನಿಜ ಭವನ ನಿರ್ಮಿಸಲಾಗಿದೆ. ಇಲಾಖೆ ವತಿಯಿಂದ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಅಕ್ರಮವಾಗಿ ಸಾಗಿಸುವ ಖನಿಜಗಳನ್ನು ವಶಕ್ಕೆ ಪಡೆಯುತ್ತಾರೆ. ಇಂತಹ ವಸ್ತುಗಳನ್ನು ಸಂಗ್ರಹಿಸಲು ಈ ಜಾಗ ಬಳಕೆಯಾಗುತ್ತದೆ. ಈ ಕಟ್ಟಡ ನಮ್ಮ ಸರಕಾರದ ಅವಧಿಯಲ್ಲಿ ಪೂರ್ಣಗೊಂಡಿರುವುದು ಹೆಮ್ಮೆಯ ವಿಷಯ ಎಂದರು.

ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಮೈಸೂರಿನಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಟ್ಟಡ ನಿರ್ಮಾಣ ಗೊಂಡಿರುವುದು ಉತ್ತಮ ವಿಚಾರ ಎಂದರು. ಈ ವೇಳೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಮೇಯರ್ ಶಿವಕುಮಾರ್, ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ಇಲಾಖೆಯ ಹಿರಿಯ ಭೂ ವಿಜ್ಞಾನಿ ಬಿ. ರಶ್ಮಿ ಹಾಗೂ ಇತರರು ಇದ್ದರು.

ಸಾರಾ ಸ್ನೇಹ ಬಳಗದಿಂದ ಕ್ರಿಸ್‌ಮಸ್ ಕೇಕ್ ವಿತರಣೆ



ಕೆ.ಆರ್.ನಗರ, ಡಿ.24– ಪ್ರತಿ ವರ್ಷದಂತೆ ಈ ವರ್ಷವು ಶಾಸಕ ಸಾ.ರಾ.ಮಹೇಶ್ ಕ್ರಿಶ್ಚಿಯನ್ ಬಾಂಧವರಿಗೆ ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಕೇಕ್ ವಿತರಿಸಿ ಶುಭಾಶಯ ಕೋರಿದ್ದಾರೆ. ಅವರಿಗೆ ಯೇಸು ಕ್ರಿಸ್ತ ಆರೋಗ್ಯ, ಅಧಿಕಾರ, ಐಶ್ವರ್ಯ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಫಾಧರ್ ಸಿ.ರಾಯಪ್ಪ ತಿಳಿಸಿದರು.

ಪಟ್ಟಣದ ಸುಭಾಷ್ ಬಡಾವಣೆ ಚರ್ಚ್‌ನಲ್ಲಿ ಸಾ.ರಾ.ಸ್ನೇಹ ಬಳಗದಿಂದ ಕೇಕ್ ಸ್ವೀಕರಿಸಿ ಮಾತನಾಡಿದ ಅವರು, ಕೆ.ಆರ್.ನಗರ ಹೊರತುಪಡಿಸಿ ಬೇರೆಲ್ಲಿಯೂ ಈ ಸಂಪ್ರದಾಯ ಇಲ್ಲ. ಆದರೆ ಇಲ್ಲಿ ಪ್ರತಿವರ್ಷ ಪ್ರತಿಯೊಂದು ಸಮುದಾಯಕ್ಕೂ ಆ ಸಮುದಾಯದ ಹಬ್ಬದಂದು ಪ್ರತಿಯೊಂದು ಕುಟುಂಬಕ್ಕೂ ಸಿಹಿ ವಿತರಿಸಿ ಶುಭಾಶಯ ಕೋರುವ ಅವರ ಗುಣಕ್ಕೆ ಅಭಿನಂದಿಸುತ್ತೇನೆ ಎಂದರು.

ಇದೇ ವೇಳೆ ನಾಡಿನ ಜನತೆಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳ ಜೊತೆಗೆ ಈಗ ಭಯ ಹುಟ್ಟಿಸುತ್ತಿರುವ ಕೋವಿಡ್ ಮಹಾಮಾರಿ ರೋಗ ತಡೆಯುವ ಶಕ್ತಿ ಪ್ರತಿಯೊಬ್ಬ ನಾಗರಿಕನಿಗೂ ಯೇಸ್ ಕ್ರಿಸ್ತ ಕರುಣಿಸಲೆಂದು ಪ್ರಾರ್ಥಿಸಿದರು.

ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್ ಮಾತನಾಡಿದರು. ಈ ವೇಳೆ ಸಾ.ರಾ.ಮಹೇಶ್ ಅವರ ಪುತ್ರ ಸಾ.ರಾ.ಜಯಂತ್, ಪುರಸಭಾ ಸದಸ್ಯ ತೋಂಟದಾರ್ಯ, ಮಾಜಿ ಸದಸ್ಯರಾದ ರಾಜಾ ಶ್ರೀಕಾಂತ್, ಮಹಮದ್ ಸಿರಾಜ್, ಎನ್.ಶಿವಕುಮಾರ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಯುವ ಜೆಡಿಎಸ್ ಕಾರ್ಯದರ್ಶಿ ರುದ್ರೇಶ್, ಜೆಡಿಎಸ್ ಜಿಲ್ಲಾ ಅಲ್ಪಸಂಖ್ಯಾತ ಘಟಕದ ಉಪಾಧ್ಯಕ್ಷ ಮುಬಾರಕ್, ಶಾಸಕರ ಆಪ್ತ ಕಾರ್ಯದರ್ಶಿ ಅರುಣ್‌ಕುಮಾರ್, ಮುಖಂಡರಾದ ವೀರಭದ್ರಚಾರ್, ಚಿಕ್ಕವೀರು, ಹರೀಶ್, ಆಕಾಶ್‌ಬಾಬು, ಮನು ಜಯ ರಾಮೇಗೌಡ, ಮಂಜುನಾಥ್, ರವೀಶ್, ರಾಧಾಕೃಷ್ಣ, ಪೀಟರ್ ಸೇರಿದಂತೆ ಇನ್ನಿತರರಿದ್ದರು.

ಹಿರೀಕ್ಯಾತನಹಳ್ಳಿಯಲ್ಲಿ ಮೇಕೆಗಳ ಕಳವು

ಹಿರೀಕ್ಯಾತನಹಳ್ಳಿ, ಡಿ.24– ದುಷ್ಕರ್ಮಿಗಳು 2 ಮೇಕೆಗಳನ್ನು ಕದ್ದೊಯ್ದಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪುಟ್ಟಸ್ವಾಮಿ ಎಂಬುವರಿಗೆ ಸೇರಿದ 30 ಸಾವಿರ ಮೌಲ್ಯದ 2 ಮೇಕೆಗಳನ್ನು ಶನಿವಾರ ಮುಂಜಾನೆ ಕಳವು ಮಾಡಲಾಗಿದೆ. ರೈತ ಪುಟ್ಟಸ್ವಾಮಿ ಅವರು ಮೇಕೆಗಳು ಕಿರುಚಾಡುವ ಶಬ್ದ ಕೇಳಿ ಮನೆಯಿಂದ ಹೊರ ಬರುವಷ್ಟರಲ್ಲಿ ದುಷ್ಕರ್ಮಿಗಳು ಬೈಕ್ ಮೇಲೆ ಮೇಕೆಗಳನ್ನು ಹಾಕಿಕೊಂಡು ಹೋಗುತ್ತಿದ್ದರು. ಈ ವೇಳೆ ಪುಟ್ಟಸ್ವಾಮಿ ಅವರು ಕೂಗಿಕೊಂಡರಾದರೂ ಅಕ್ಕಪಕ್ಕದ ಮನೆಯವರು ಓಡಿ ಬಂದರೂ ಪ್ರಯೋಜನವಾಗಿಲ್ಲ. ಈ ಸಂಬಂಧ ರೈತ ಪುಟ್ಟಸ್ವಾಮಿ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ: ಧ್ರುವ ಆರೋಪ



ಮಲ್ಲುಂಡಿ, ಡಿ.24– ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಆರೋಪಿಸಿದರು.

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಚಂದ್ರೋದಯ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. 4 ವರ್ಷದ ಆಡಳಿತದಲ್ಲಿ 40% ಕಮೀಷನ್ ಪಡೆದಿದ್ದು ಬಿಟ್ಟರೆ, ಯಾವ ಜನಪರ ಕೆಲಸವನ್ನು ಸರ್ಕಾರ ಮಾಡಿಲ್ಲ. ಕಾಂಗ್ರೆಸ್ ಅವಧಿಯಲ್ಲಿ ಸಿಎಂ ಆಗಿದ್ದ ಸಿದ್ದರಾಮಯ್ಯ ರಾಜ್ಯದ ಜನರಿಗೆ ಉತ್ತಮ ಆಡಳಿತ ನೀಡಿದ್ದಾರೆ. ಜನತೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ಕಾಯುತ್ತಿದ್ದಾರೆ. ನಂಜನಗೂಡು ಕ್ಷೇತ್ರದಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಸ್ಥಳೀಯ ಶಾಸಕರು ರೈತರಿಗೆ ಸಾಗುವಳಿ ಪತ್ರ ನೀಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಬಿಜೆಪಿ ಸರ್ಕಾರದ ದುರಾಡಳಿತದಿಂದ ಬೇಸತ್ತ ಯುವಕರು ಕಾಂಗ್ರೆಸ್ ತತ್ವ ಸಿದ್ಧಾಂತ ಮೆಚ್ಚಿ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಇದರಿಂದ ಪಕ್ಷಕ್ಕೆ ಆನೆಬಲ ಬಂದಾಂತಾಗಿದೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸುವಂತೆ ಕರೆ ನೀಡಿದರು.

ಇದೇ ವೇಳೆ 300ಕ್ಕೂ ಹೆಚ್ಚು ಬಿಎಸ್‌ಪಿ, ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಬ್ಲಾಕ್ ಅಧ್ಯಕ್ಷ ಕೆಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಉಸ್ತುವಾರಿ ಸೋಮೇಶ್, ಎಸ್ಟಿ ವಿಭಾಗದ ಪ್ರಧಾನ ಕಾರ್ಯದರ್ಶಿ, ದೊರೆಸ್ವಾಮಿ ನಾಯಕ, ಗ್ರಾಪಂ ಉಪಾಧ್ಯಕ್ಷೆ ಜ್ಯೋತಿ, ಗ್ರಾಪಂ ಸದಸ್ಯರಾದ ಕುಮಾರ್, ಲೋಕೇಶ್, ಶ್ರೀವಿದ್ಯಾ, ಕೆಪಿಸಿಸಿ ಸದಸ್ಯ ಬಸವರಾಜ್, ಮುಖಂಡರಾದ ಅಭಿನಂದನ್ ಪಾಟೀಲ್, ಶಿವಪ್ಪ ದೇವರು, ಅಶೋಕ್, ಅಜಯ್, ವಕೀಲ ನಾಗರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್, ಜಿಪಂ ಮಾಜಿ ಉಪಾಧ್ಯಕ್ಷ ಶಂಕರಪ್ಪ, ಸೋಮೇಶ್, ಶಿರಮಳ್ಳಿ ಗ್ರಾಪಂ ಅಧ್ಯಕ್ಷ ಮಹದೇವಶೆಟ್ಟಿ, ಎನ್. ಮಹದೇವು, ಬಿಳಿಶೆಟ್ಟಿ ಇತರರಿದ್ದರು.

ಮಹಿಳಾ ಸಂಘಗಳು ಸಾಲ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ



ತಿ.ನರಸೀಪುರ ಡಿ.24– ಸಾಲ ಪಡೆಯುವ ಮತ್ತು ಮರು ಪಾವತಿಸುವಲ್ಲಿ ಮಹಿಳಾ ಸ್ವಸಹಾಯ ಸಂಘ ಪಾರದರ್ಶಕತೆ ಕಾಯ್ದುಕೊಂಡು, ಸಾಲ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಬ್ಯಾಂಕ್‌ಗಳು ಮಹಿಳೆಯರಿಗೆ ದೀರ್ಘಾವಧಿ ಸಾಲ ನೀಡಬೇಕು ಎಂದು ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ಹೇಳಿದರು.

ಪಟ್ಟಣದ ಜಿಎಸ್‌ಎಫ್ ಕಾಲೋನಿಯಲ್ಲಿ ವಾಲ್ಮೀಕಿ ಮಹಿಳಾ ಸ್ವ ಸಹಾಯ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಖಾಸಗಿ ಮಾಲೀಕತ್ವದ ಸಣ್ಣ ಹಣಕಾಸು ಸಂಸ್ಥೆಗಳ ಮೂಲಕ ಸಾಲ ಪಡೆದು ಸಕಾಲದಲ್ಲಿ ಮರುಪಾವತಿ ಮಾಡುತ್ತಿರುವ ಮಹಿಳಾ ಸಂಘಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೂಡ ಸಾಲ ಸೌಲಭ್ಯ ನೀಡಬೇಕು ಎಂದು ಮನವಿ ಮಾಡಿದರು.

ಕೆನರಾ ಬ್ಯಾಂಕ್ ಆರ್ಥಿಕ ಸಾಕ್ಷರತಾ ಸಲಹೆಗಾರ ಎಸ್.ವಿ.ರಮೇಶ್ ರಾವ್ ಹಾಗೂ ಎಸ್.ವೇದಾವತಿ ಮಾತನಾಡಿ, ಪ್ರತಿಯೊಂದು ಶ್ರೀ ಶಕ್ತಿ ಸ್ವಸಹಾಯ ಸಂಘ ಮುನ್ನಡೆಯಾಗುತ್ತಿದ್ದು, ಇನ್ನು ಹೆಚ್ಚಿನ ರೀತಿ ವಹಿವಾಟನ್ನು ನಡೆಸಿ ಆರ್ಥಿಕವಾಗಿ ಮುಂದೆ ಬನ್ನಿ ಎಂದ ಅವರು ಹಣಕಾಸಿನ ವಹಿವಾಟಿನ ಬಗ್ಗೆ ಜಾಗೃತಿ ವಹಿಸುವ ಕುರಿತು ಮಾಹಿತಿ ನೀಡಿದರು.

ಮುಖಂಡರಾದ ಎಂ.ಸೋಮಣ್ಣ, ಪಿ.ಮಹದೇವ, ಎಂ.ಕರಿಗೌಡ, ಪ್ರಕಾಶ್ ಹಾಗೂ ಶ್ರೀ ಶಕ್ತಿ ಸಂಘದ ಮಹಿಳಾ ಕಾರ್ಯಕರ್ತರು ಹಾಜರಿದ್ದರು.

ಸ್ವಯಂ ಉದ್ಯೋಗದತ್ತ ಗಮನಹರಿಸಿ




ಸರಗೂರು, ಡಿ.24– ವಿದ್ಯಾರ್ಥಿಗಳು ಸ್ವಯಂ ಉದ್ಯೋಗದತ್ತ ಹೆಚ್ಚು ಗಮನ ಹರಿಸಬೇಕು ಎಂದು ಮಾನವ ಹಕ್ಕುಗಳ ಮಿಷನ್ ಜಿಲ್ಲಾ ಅಧ್ಯಕ್ಷ ಶಿವು ಜನ್ನ ತಿಳಿಸಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮೈಸೂರು ಕಪಿಲಾ ಕಲಾವಿದರು ಟ್ರಸ್ಟ್ ಸಹಯೋಗದಲ್ಲಿ ನಡೆದ ತಾಲೂಕು ಮಟ್ಟದ ಯುವ ಸಂಪರ್ಕ ಸಭೆ ಹಾಗೂ ಸ್ವಯಂ ಉದ್ಯೋಗ ಮತ್ತು ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯಮಿ ನಾಗರಾಜು ಮಾತನಾಡಿ, ಜೀವನದಲ್ಲಿ ಗುರಿ ಸಾಧಿಸುವ ಮೂಲಕ ಎಲ್ಲರಿಗೂ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು. ಪಪಂ ಅಧ್ಯಕ್ಷೆ ರಾಧಿಕಾ, ಕಾಲೇಜಿನ ಉಪಪ್ರಾಂಶುಪಾಲ ವೆಂಕಟಮ್ಮ, ಪಪಂ ಸದಸ್ಯ ಚೆಲುವಕೃಷ್ಣ, ಸಂಘದ ಗೌರವಾಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ಮಹೇಶ್ ಕಾರ್ಯದರ್ಶಿ ಮರಿಸ್ವಾಮಿ, ಖಜಾಂಚಿ ಗಣೇಶ್, ಸಂಘಟನಾ ಕಾರ್ಯದರ್ಶಿ ಮರಿಸ್ವಾಮಿ, ನವೀನ್, ಉಪನ್ಯಾಸಕಿ ದೀಪಾ ಇತರರಿದ್ದರು.

ಹಿಂದುಳಿದ ಸಮಾಜ ಅಭಿವೃದ್ಧಿಗೆ ಸಂಘಟನೆ ಮುಖ್ಯ

ಯುವಕರು ಸಂಘಟನೆಗೆ ಒತ್ತು ನೀಡಿ: ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಸಲಹೆ



ಕೆ.ಆರ್.ನಗರ, ಡಿ.24– ಹಿಂದುಳಿದ ಸಮಾಜ ಅಭಿವೃದ್ಧಿಯಾಗಲು ಸಂಘಟನೆ ಮುಖ್ಯವಾಗಿದ್ದು, ಯುವಕರು ಈ ವಿಚಾರ ಗಂಭೀರವಾಗಿ ಪರಿಗಣಿಸಿ ಸಂಘಟನೆಗೆ ಒತ್ತು ಕೊಡಬೇಕು ಎಂದು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ತಿಳಿಸಿದರು.


ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಎಡತೊರೆ ಬಲಿಜ (ಬಣಜಿಗ) ಸಂಘದ ನೂತನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಮಾಜದವರು ಸಂಘಟಿತರಾದಾಗ ಎಲ್ಲಾ ರೀತಿ ಸಮಾನತೆ ಸಾಧಿಸಲು ಸಾಧ್ಯ ಎಂದರು.

ಮೈಸೂರಿನ ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕ ಡಾ.ಕೃಷ್ಣಪ್ಪ ಮಾತನಾಡಿ, ಬಲಿಜ(ಬಣಜಿಗ) ಜನಾಂಗ ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದು, ಬಹುತೇಕ ಮಂದಿ ಬೀದಿ ಬದಿ ಬಳೆ, ಹೂ, ಅರಿಶಿನ–ಕುಂಕುಮ, ಹಣ್ಣು ಇತ್ಯಾದಿ ವ್ಯಾಪಾರ ಮತ್ತು ಕೃಷಿ ಆಧಾರಿತ ಕೆಲಸ ಮಾಡುತ್ತಾ, ಕೂಲಿ ಮಾಡಿಕೊಂಡು ಕನಿಷ್ಠ ಜೀವನ ನಡೆಸುತ್ತಿದ್ದಾರೆ. ಈ ಹಿಂದೆ 1994ರಲ್ಲಿ ಅಂದಿನ ಸರ್ಕಾರ ಬಲಿಜ(ಬಣಜಿಗ) ಜನಾಂಗಕ್ಕೆ ಇದ್ದ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯಕ್ಕೆ 2ಎ ಮೀಸಲಾತಿ ತೆಗೆದುಹಾಕಿ ನಮ್ಮ ಜನಾಂಗಕ್ಕೆ ಅನ್ಯಾಯ ಮಾಡಿತು. ಅಂದಿನಿಂದಲೂ ಬಲಿಜ (ಬಣಜಿಗ) ಜನಾಂಗ 2ಎ ಮೀಸಲಾತಿ ಸೌಲಭ್ಯ ಮರಳಿ ಪಡೆಯಲು ನಿರಂತರ ಹೋರಾಟ ಮಾಡುತ್ತಾ ಬಂದಿದೆ. 2011ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪನವರು ಶಿಕ್ಷಣ ಪಡೆಯಲು 2ಎ ಮೀಸಲಾತಿ ನೀಡಿ ಅರ್ಧ ನ್ಯಾಯ ಒದಗಿಸಿದ್ದರು. ಆದಾಗ್ಯೂ ನಮ್ಮ ಜನಾಂಗವು ಇನ್ನುಳಿದ ಉದ್ಯೋಗ ಮತ್ತು ರಾಜಕೀಯವಾಗಿ ಬಾಕಿ ಉಳಿದಿರುವ ಅರ್ಧ ಮೀಸಲಾತಿ ಮರಳಿ ದೊರಕಿಸಿ ಕೊಡುವಂತೆ ಒತ್ತಾಯ, ಪ್ರತಿಭಟನೆ ಮಾಡುತ್ತಲೇ ಬಂದಿದೆ ಎಂದರು.

ಶಾಸಕ ಸಾ.ರಾ.ಮಹೇಶ್ ಪುತ್ರ ಸಾ.ರಾ. ಜಯಂತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಲಿಜ(ಬಣಜಿಗ) ಸಮಾಜದ ಅಭಿವೃದ್ಧಿಗೆ ನಮ್ಮ ತಂದೆ ಸದಾ ನಿಮ್ಮಗಳ ಜೊತೆ ಇದ್ದಾರೆ. ಮುಂದೆಯು ಇರುತ್ತಾರೆ ಎಂದರು.

ಮಾಜಿ ಎಂಎಲ್‌ಸಿಗಳಾದ ಟಿ.ಕೆ.ಚಿನ್ನಸ್ವಾಮಿ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಮಾತನಾಡಿದರು. ಸಂಘದ ಅಧ್ಯಕ್ಷ ಟಿ.ಎನ್.ದಯಾನಂದ್ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಬೆಸ್ಟ್ ಕ್ಲಬ್ ಜಯರಾಂ, ಪ್ರಾಣೇಶ್ ಶೆಟ್ಟಿ, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಸಂಘದ ಉಪಾಧ್ಯಕ್ಷ ಬಿ.ವಿ.ರಘುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಕೆ.ರಾಘವೇಂದ್ರ ಗ್ರಾಪಂ ಸದಸ್ಯರಾದ ವಿದ್ಯಾ, ಎಂ.ಎಸ್. ಸಿಂಧು, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಎನ್.ಜಗದೀಶ್, ಪದಾಧಿಕಾರಿಗಳಾದ ಬಿ.ವಿ.ನಾಗೇಂದ್ರ, ಆನಂದ, ನಟರಾಜು, ಬಿ.ಎಂ.ಅನ್ನಪೂರ್ಣ, ಕೆ.ಎ.ಮಂಜುನಾಥ್, ಶ್ರೀನಿವಾಸ್, ಸಿ.ಹೆಚ್.ವೆಂಕಟೇಶ್, ರಾಜೇಶ್, ವಕೀಲ ನಾಗೇಶ್, ಸಾ.ರಾ.ನಾಗೇಶ್, ಕೆಇಬಿ ರಾಘು, ದಿವಾಕರ್, ಸುಬ್ರಹ್ಮಣ್ಯ, ತಿಮ್ಮಶೆಟ್ಟಿ, ಬಿ.ಕೆ.ಆನಂದ ಹಾಜರಿದ್ದರು.

ಪವರ್‌ಸ್ಟಾರ್ ಪುನೀತ್ ಯುವಕರ ಚೈತನ್ಯದ ಚಿಲುಮೆ



ತಿ.ನರಸೀಪುರ, ಡಿ.24– ಪವರ್ ಸ್ಟಾರ್, ಕರ್ನಾಟಕ ರತ್ನ ಪುನೀತ್ ರಾಜ್ ಕುಮಾರ್ ಸಮಾಜ ಸೇವೆ ತುಡಿತವಿರುವ ಯುವಕರಿಗೆ ಚೈತನ್ಯದ ಚಿಲುಮೆಯಾಗಿದ್ದು, ನೈತಿಕ ಮೌಲ್ಯಗಳ ನಟನೆ ಹಾಗೂ ಸಾಮಾಜಿಕ ಸೇವೆ ಮೂಲಕ ನಾಡಿನ ಜನರ ಹೃದಯದಲ್ಲಿ ಅಜರಾಮರರಾಗಿದ್ದಾರೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಹಳೇ ಕೆಂಪಯ್ಯನ ಹುಂಡಿಯಲ್ಲಿ ಯುವಕರ ಬಳಗದಿಂದ ಶನಿವಾರ ಪುನೀತೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಪುನೀತ್ ರಾಜ್‌ಕುಮಾರ್ ಅಕಾಲಿಕ ನಿಧನ ನಾಡಿಗೆ ತುಂಬಲಾರದ ನಷ್ಟ, ಎಲ್ಲೆಡೆ ಅವರ ಸ್ಮರಣೆ ನಿತ್ಯವೂ ನಡೆಯುತ್ತಿರು ವುದರಿಂದ ಅಪ್ಪು ಅಗಲಿಲ್ಲ. ನಮ್ಮ ನಡುವೆಯೇ ಇದ್ದಾರೆನೋ ಅನಿಸುತ್ತದೆ ಎಂದರು.

ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸದಾನಂದ ಮಾತನಾಡಿ, ಪಂದ್ಯಾವಳಿಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಸೋಲು ಗೆಲುವು ಎರಡನ್ನು ಸಮಾನವಾಗಿ ಸ್ವೀಕರಿಸುವ ಕ್ರೀಡಾ ಮನೋಭಾವ ಇರಬೇಕು. ನಗು ಮುಖದ ಒಡೆಯ ಪುನೀತ್ ರಾಜಕುಮಾರ್ ಇಂದಿನ ಯುವ ಜನತೆಗೆ ಸ್ಫೂರ್ತಿಯಾಗಿದ್ದಾರೆ.

ಈ ವೇಳೆ ಪುಟ್ಟಬುದ್ಧಿ ಫೌಂಡೇಶನ್ ಅಧ್ಯಕ್ಷ ಶರತ್ ಪುಟ್ಟಬುದ್ಧಿ, ಗ್ರಾಪಂ ಅಧ್ಯಕ್ಷ ಆನಂದ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಡಿ.ಮಹೇಶ್, ಮುಖಂಡ ರಾದ ಅಹಿಂದ ಜವರಪ್ಪ, ಕುಪ್ಪೇಗಾಲ ಬಾಬು, ಯುವಕರ ಬಳಗದ ಕೆಂಪೇಗೌಡ, ಮಧುಸೂದನ್, ರವಿ, ಸಂದೀಪ್, ಸಂತೋಷ, ಪ್ರದೀಪ, ಶಂಕರು, ಬಾಬು, ಕೀರ್ತಿ, ಕೃಷ್ಣ ದೀಪು ಹಾಗೂ ಇನ್ನಿತರರಿದ್ದರು.

ನೇಮಕ



ನಂಜನಗೂಡು, ಡಿ.24– ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಉಪಾಧ್ಯಕ್ಷರನ್ನಾಗಿ ನೇರಳೆ ಗ್ರಾಪಂ ಮಾಜಿ ಅಧ್ಯಕ್ಷ ರಾಮಲಿಂಗೇಗೌಡ ಅವರನ್ನು ನೇಮಕ ಮಾಡಿ ಸಂಘಟನೆ ಅಧ್ಯಕ್ಷ ಬಿ.ಮಲ್ಲೇಶ್ ಕೋಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೂರ ಗ್ರಾಮದಲ್ಲಿ ಗ್ರಾಪಂ ನೂತನ ಕಚೇರಿ ಕಟ್ಟಡ ಉದ್ಘಾಟನೆ

ಮೈಸೂರು, ಡಿ. 24– ಮೈಸೂರು ತಾಲೂಕು ಚಾಮುಂಡೇಶ್ವರಿ ಕ್ಷೇತ್ರಕ್ಕೊಳಪಟ್ಟ ದೂರ ಗ್ರಾಮದಲ್ಲಿ ನೂತನ ಗ್ರಾಮ ಪಂಚಾಯ್ತಿ ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡ ಮತ್ತು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಉದ್ಘಾಟಿಸಿದರು.



ಈ ವೇಳೆ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡ, ದೂರ ಗ್ರಾಮದ ಸಮಗ್ರ ಅಭಿವೃದ್ಧಿಗೆ 3.30 ಕೋಟಿ ರೂ. ವೆಚ್ಚ ಮಾಡಿದ್ದು, ಅದರ ಪೈಕಿ ಗ್ರಾಮ ವಿಕಾಸದಲ್ಲಿ 1 ಕೋಟಿ, ಎಸ್.ಇ.ಪಿ.ಯಲ್ಲಿ 1 ಕೋಟಿ ನೀಡಿದ್ದೇನೆ ಇಂದು 1 ಕೋಟಿ ರೂ. ಕಾಮಗಾರಿಗೆ ಗುದ್ದಲಿಪೂಜೆ ಮಾಡಿದ್ದೇವೆ. ಹೆಚ್ಚು ಅನುದಾನವನ್ನು ದೂರ ಗ್ರಾಮಕ್ಕೆ ನೀಡಿದ್ದೇನೆ. ಈ ಕಾರ್ಯಕ್ರಮಕ್ಕೆ ಸಂಸದರು ಬರಬೇಕಾಗಿತ್ತು. ಈ ಕಟ್ಟಡವನ್ನು ತುಂಬ ಚೆನ್ನಾಗಿ ಮಾಡಿದ್ದೀರಿ. ಮತ್ತೊಂದು ದಿನ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಂಸದರನ್ನು ಕರೆಸಿ ಅದ್ಧೂರಿ ಕಾರ್ಯಕ್ರಮ ಮಾಡೋಣ. ಎಲ್ಲರು ಯಾವುದೇ ಗೊಂದಲವಿಲ್ಲದೆ ಒಗ್ಗಟ್ಟಿನಿಂದ ಗ್ರಾಮದ ಅಭಿವೃದ್ಧಿಗೆ ದುಡಿಯಿರಿ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡುತ್ತಾ, ನಾನು ವಿಧಾನ ಪರಿಷತ್ ಕಲಾಪದಲ್ಲಿ ಹೋರಾಟ ಮಾಡಿ, ಗ್ರಾಮ ಪಂಚಾಯ್ತಿ ಸದಸ್ಯರ ವೇತನವನ್ನು ಹೆಚ್ಚಿಸಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ ಫಲವಾಗಿ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ವೇತನ ಹೆಚ್ಚಾಗಿದೆ. ಇನ್ನು ಮುಂದೆ ಗ್ರಾಪಂ ಸದಸ್ಯರಿಗೆ ಉಚಿತ ವಿಮೆ ಹಾಗೂ ಉಚಿತ ಬಸ್‌ಪಾಸ್ ಕೊಡಿಸಲು ಶಾಸಕ ಜಿ.ಟಿ.ದೇವೇಗೌಡರ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇವೆ. ದೂರ ಗ್ರಾಮ ಪಂಚಾಯಿತಿಗೆ ಅನುದಾನವು ಸಹ ಹೆಚ್ಚಾಗಿ ಬರುತ್ತಿದೆ. ಈಗ ಆಯ್ಕೆಯಾಗಿ ಬಂದಿರುವ ಸದಸ್ಯರೆಲ್ಲರೂ ವಿದ್ಯಾವಂತರಾಗಿದ್ದೀರಿ. ನೀವೆಲ್ಲ ಮನಸ್ಸು ಮಾಡಿದರೆ ಗ್ರಾಮಗಳನ್ನು ಪಟ್ಟಣ ಮಾಡುವುದು ಕಷ್ಟವಲ್ಲ. ದೂರ ಗ್ರಾಮ ಸಿಟಿಗೆ ಹತ್ತಿರವಾಗುತ್ತಿದ್ದು, ಬಸ್ಸುಗಳು ಸಹ ಬರುತ್ತಿವೆ. ಶಾಸಕರಾದ ಜಿ.ಟಿ.ದೇವೇಗೌಡರು ಕೋಟಿಗಟ್ಟಲೆ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಎಲ್ಲಾ ಸದಸ್ಯರು ಒಗ್ಗಟ್ಟಿನಿಂದ ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕು ಎಂದ ಅವರು, ದೇವಸ್ಥಾನಕ್ಕೆ ಬೋರ್‌ವೆಲ್ ಹಾಕಿಸಿಕೊಡುವುದಾಗಿ ಭರವಸೆ ನೀಡಿದರು.

ಕೆ.ವಿ.ವಾಸು ಅವರ 'ಕಾತ್ಯಾಯಿನಿ ಮತ್ತು ಇತರ ಕಥೆಗಳು' ಪುಸ್ತಕ ಬಿಡುಗಡೆ

ಸಾಹಿತ್ಯ ಕ್ಷೇತ್ರದ ಯಜಮಾನಿಕೆ ವೈಜ್ಞಾನಿಕ ಸಾಹಿತ್ಯ ಒಪ್ಪಲು ಸಿದ್ಧವಿಲ್ಲ: ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ವಿಷಾದ



ಮೈಸೂರು,ಡಿ.24(ಎಂಟಿವೈ)– ಸಾಹಿತ್ಯದ ಯಜಮಾನಿಕೆ ತೆಗೆದುಕೊಂಡಿರುವವರು ಇಂದಿಗೂ ವೈಜ್ಞಾನಿಕ ಸಾಹಿತ್ಯವನ್ನು ಒಪ್ಪಿಕೊಳ್ಳಲು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಹಿಮಾಲಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಕೀಲ, ಅಂಕಣಕಾರ ಕೆ.ವಿ.ವಾಸು ಅವರ 'ಕಾತ್ಯಾಯಿನಿ ಮತ್ತು ಇತರ ಕಥೆಗಳು' ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯದಲ್ಲಿ ಹಲವು ಪ್ರಾಕಾರಗಳಿದ್ದು, ಅವುಗಳಲ್ಲಿ ವೈಜ್ಞಾನಿಕ ಸಾಹಿತ್ಯವೂ ಒಂದಾಗಿದೆ. ಈ ವಿಜ್ಞಾನ ಅಥವಾ ವೈಜ್ಞಾನಿಕ ಸಾಹಿತ್ಯವನ್ನು ಇದುವರೆಗೂ ಕನ್ನಡ ಸಾಹಿತ್ಯ ಕ್ಷೇತ್ರ ಇದೂ ಒಂದು ಸಾಹಿತ್ಯ ಎಂದು ಪರಿಗಣಿಸಲು ಸಿದ್ಧವಿಲ್ಲ. ಸಾಹಿತ್ಯ ಕ್ಷೇತ್ರವನ್ನು ಭದ್ರವಾಗಿ ಹಿಡಿದುಕೊಂಡು ಕುಳಿತಿರುವವರು ಹಾಗೂ ಸಾಹಿತ್ಯ ಕ್ಷೇತ್ರದ ಯಜಮಾನಿಕೆ ತೆಗೆದುಕೊಂಡಿರುವವರು ಅರೆ ಮನಸಲ್ಲಿದ್ದಾರೆ. ಬದುಕಲು ಬೇಕಾದ ಜ್ಞಾನ ಕೊಡುವುದೆಲ್ಲವೂ ಸಾಹಿತ್ಯ. ವಿಜ್ಞಾನ ಸಾಕ್ಷ್ಯಾಧಾರಿತ, ವೈಚಾರಿಕ ಹಾಗೂ ಸತ್ಯವನ್ನು ಪ್ರತಿಪಾದಿಸುವ ವೈಜ್ಞಾನಿಕ ಸಾಹಿತ್ಯ. ಅದು ಕೂಡ ಸಾಹಿತ್ಯದ ಒಂದು ಪ್ರಾಕಾರ ಎಂದು ಮನವರಿಕೆಯಾಗುತ್ತಿದೆ. ವಿಜ್ಞಾನ ಕುರಿತು ಬರೆಯುವವರ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಇದೀಗ ವೈಜ್ಞಾನಿಕ ಸಾಹಿತ್ಯದ ಮಹತ್ವ ನಿಧಾನವಾಗಿ ಮನವರಿಕೆಯಾಗುತ್ತಿದೆ ಎಂದರು.

ಸಾಹಿತ್ಯ ಕ್ಷೇತ್ರದಲ್ಲಿರುವ ವಿವಿಧ ಪ್ರಾಕಾರಗಳಲ್ಲಿ ಪುನರ್ ಮನನ ಅಥವಾ ವಿಮರ್ಶೆ ಮಾಡಿ ಸಾಹಿತ್ಯ ರಚಿಸುವುದನ್ನು ಕಾಣಬಹುದು. ಈಗಾಗಲೇ ಇರುವ ಸಾಹಿತ್ಯದ 2–3 ಪುಸ್ತಕ ಇಟ್ಟುಕೊಂಡು, ಅವುಗಳ ನಾನಾ ಅಂಶವನ್ನು ಪ್ರಸ್ತುತ ಸಂದರ್ಭದ ದೃಷ್ಟಿಕೋನದಿಂದ ಪುನರ್‌ಮನನ ಮಾಡಿ ಸಾಹಿತ್ಯ ರಚಿಸಲಾಗುತ್ತಿದೆ. ಆಯಾ ಕಾಲಮಾನಕ್ಕೆ ತಮ್ಮ ಅಭಿಪ್ರಾಯ, ಪಾತ್ರಗಳನ್ನು ಪುನರ್‌ವಿಮರ್ಶೆ ಮಾಡಿ ಜ್ಞಾನ, ವ್ಯಕ್ತಿತ್ವ ತುಂಬಿ ಸಾಹಿತ್ಯ ರಚಿಸಿ, ಜನ ಮಾನಸದಲ್ಲಿ ಹೀಗೆ ಯೋಚನೆ ಮಾಡಿ ಎಂದು ದಾರ್ಶನಿಕತೆ ತುಂಬುವ ಪರಿಪಾಠವನ್ನು ನಾವು ಕಾಣಬಹುದು ಎಂದು ತಿಳಿಸಿದರು.

ನನಗೆ ವಕೀಲಿ ವೃತ್ತಿ ಇಷ್ಟವಾದ ವೃತ್ತಿ. ನಾನು ಆಸ್ಪತ್ರೆ ನಿರ್ಮಿಸುವಾಗ ಕೆಲವು ಅಡಚಣೆಗಳು ಎದುರಾದವು. ನ್ಯಾಯಾಲಯದಲ್ಲಿ ಹೇಗೆ ವಾದ ಮಾಡಬಹುದು ಎಂದು ಸಮೀಪದಿಂದ ಗಮನಿಸಿದ್ದೇನೆ. ವಕೀಲರಿಗೆ ಸಮಾಜದಲ್ಲಿ ನಡೆಯುವ ಘಟನೆಗಳ ಸಂಪೂರ್ಣ ಮಾಹಿತಿ ಸಿಗುತ್ತದೆ. ಆತ ಲೇಖಕನಾದರೆ ಅಗಾಧವಾದ ಸಾಹಿತ್ಯ ಸಿಗುತ್ತದೆ. ನ್ಯಾಯಾಲಯಕ್ಕೆ ಹೋದಾಗ ನ್ಯಾಯಾಲಯದ ನಡಾವಳಿ, ಮಧ್ಯಂತರ ಅರ್ಜಿ, ಪಾಟಿ ಸವಾಲು ವೇಳೆ ಪ್ರಶ್ನೆ ಕೇಳಿ ಹೇಗೆ ಸತ್ಯ ಹೊರಗೆ ತೆಗೆಯುತ್ತಾನೆ. ಕ್ರಾಸ್ ಎಗ್ಸಾಮಿನೇಷನ್ ಹೇಗಿರುತ್ತದೆ ಒಡಹುಟ್ಟಿದವರ ಜಗಳ, ಪಾಲುದಾರಿಕೆ, ಪೋಷಕರ ಮೇಲೆ ಕೇಸ್ ಹಾಕುವ ಪ್ರಕರಣಗಳ ಬಗ್ಗೆಯೂ ಮಾಹಿತಿ ಸಿಗುವುದರಿಂದ ಉತ್ತಮ ಸಾಹಿತ್ಯ ಹೊರ ತರಬಹುದಾಗಿದೆ. ನೋವು–ನಲಿವುಗಳ ಬಗ್ಗೆ ಹೆಚ್ಚು ಮಾಹಿತಿ ದೊರಕುತ್ತದೆ ಎಂದರು.

ಲೇಖಕ ಕೆ.ವಿ.ವಾಸು ಬರೆದಿರುವ 'ಕಾತ್ಯಾಯಿನಿ ಮತ್ತು ಇತರ ಕಥೆಗಳು' ಕೃತಿಯಲ್ಲಿ 19 ಕಥೆಗಳಿವೆ. ಒಳ್ಳೆಯ ಪುಸ್ತಕ ಹೊರ ತಂದಿದ್ದಾರೆ. ಓದುಗನ ಮನಸ್ಸನ್ನು ತಣಿಸುವ ಕೆಲಸವನ್ನು ಲೇಖಕರು ಮಾಡಬೇಕು. ಸಾವಿರಾರು ಪುಟಗಳ ಪುಸ್ತಕ ಬರೆದರೆ ಜನ ಒಪ್ಪಲ್ಲ. ಅದನ್ನು ಓದಲು ಜನರಿಗೆ ಮನಸಿದ್ಯಾ, ಸಮಯ ಇದ್ಯಾ ಎಂದು ಆಲೋಚಿಸಬೇಕು. ಕೆ.ವಿ.ವಾಸು ಅವರು ಎರಡು–ಮೂರು ಪುಟಗಳಲ್ಲಿ ಕಥೆಗಳನ್ನು ಪೂರ್ಣಗೊಳಿಸಿದ್ದಾರೆ. ಪ್ರಯಾಣ ಮಾಡುವಾಗ, ಬಿಡುವಿನ ವೇಳೆಯಲ್ಲಿ ಓದುವುದಕ್ಕೆ ಪೂರಕವಾಗಿದೆ. ಮುಂದಿನ ದಿನಗಳಲ್ಲಿ ನ್ಯಾಯಾಲಯದ ಸಾಹಿತ್ಯ, ಕಾನೂನು, ವಿಜ್ಞಾನ, ಕೃಷಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಜ್ಞಾನದ ಅಗತ್ಯವಿದೆ. ಆ ಕ್ಷೇತ್ರಗಳತ್ತ ಗಮನ ಹರಿಸಿ ಸಾಹಿತ್ಯ ರಚನೆ ಮಾಡುವಂತೆ ಸಲಹೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಕೆ.ರಘುರಾವ್ ವಾಜಪೇಯಿ ಕೃತಿ ಬಿಡುಗಡೆ ಮಾಡಿ ಶುಭ ಕೋರಿದರು. ಕೃತಿ ಕುರಿತು ಡಾ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ.ಕೆ.ಲೀಲಾಪ್ರಕಾಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಲೇಖಕ ಕೆ.ವಿ.ವಾಸು, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಹಿರಿಯ ಸಂಶೋಧಕ ಎನ್.ಅಶ್ವತ್ಥ ನಾರಾಯಣ್, ಮುಕ್ತಕ ಸಾಹಿತಿ ಎಂ.ಮುತ್ತುಸ್ವಾಮಿ, ಹಿಮಾಲಯ ಫೌಂಡೇಷನ್ ಅಧ್ಯಕ್ಷ ಎನ್.ಅನಂತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

'ಬಂಡೂರು ಕುರಿ' ತಳಿ ಸಂರಕ್ಷಣೆ

ಯಶೋಧವನ ಮೇಕೆ ಫಾರಂಗೆ ಐಸಿಎಆರ್–ಎನ್‌ಬಿಎಜಿಆರ್ ಪ್ರಶಸ್ತಿ



ಮೈಸೂರು,ಡಿ.24(ಪಿಎಂ)– ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕು ಯಡಹಳ್ಳಿ ಗ್ರಾಮದ 'ಯಶೋಧವನ ಮೇಕೆ ಫಾರಂ'ನ 'ಬಂಡೂರು ಕುರಿ' ತಳಿ ಸಂರಕ್ಷಣೆ ಚಟುವಟಿಕೆಗಾಗಿ ಫಾರಂ ಮಾಲೀಕ ಶ್ರೀನಿವಾಸ ಆಚಾರ್ಯ ಅವರಿಗೆ ಐಸಿಎಆರ್–ನ್ಯಾಷನಲ್ ಬ್ಯೂರೋ ಆಫ್ ಅನಿಮಲ್ ಜೆನೆಟಿಕ್ ರಿಸೋರ್ಸ್‌ಸ್‌ನ (ಎನ್‌ಬಿಎಜಿಆರ್) 2022ನೇ ಸಾಲಿನ 'ತಳಿ ಸಂರಕ್ಷಣಾ ಪ್ರಶಸ್ತಿ' ಲಭಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಫಾರಂ ಮಾಲೀಕ ಶ್ರೀನಿವಾಸ ಆಚಾರ್ಯ ಈ ವಿಷಯ ತಿಳಿಸಿದರು. ಬಂಡೂರು ಕುರಿ ತಳಿ ಸಂರಕ್ಷಣೆಗೆ ಮೂರನೇ ಸ್ಥಾನದಲ್ಲಿ ಪ್ರಶಸ್ತಿ ಲಭ್ಯವಾಗಿದೆ. 2012ರಲ್ಲಿ ಪ್ರಾರಂಭಗೊಂಡ ನಮ್ಮ ಫಾರಂ ಸುಮಾರು 50 ಎಕರೆ ಕೃಷಿ ಭೂಮಿಯ ವಿಸ್ತೀರ್ಣ ಹೊಂದಿದೆ. 'ಬಂಡೂರು ಕುರಿ' ರಾಜ್ಯದ ಪ್ರತಿಷ್ಠಿತ ತಳಿ. 400ಕ್ಕೂ ಹೆಚ್ಚು ಶುದ್ಧ ತಳಿಯ ಬಂಡೂರು ಕುರಿಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ಸುತ್ತಮುತ್ತಲ ಆಸಕ್ತ ರೈತರಿಗೆ ಈವರೆಗೆ ಮಾರಾಟ ಮಾಡಲಾಗಿದೆ. ಆ ಮೂಲಕ ಈ ತಳಿ ಸಂರಕ್ಷಣೆಯಲ್ಲಿ ನಮ್ಮ ಫಾರಂ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ಬಿ.ಎನ್.ಷಡಕ್ಷರಮೂರ್ತಿ ಮಾತನಾಡಿ, ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಕಿರುಗಾವಲು ಹೋಬಳಿಯ ಬಂಡೂರು ಈ ತಳಿಯ ಮೂಲ. ಈ ತಳಿಯ ಕುರಿ ಮಾಂಸ ಬಲು ರುಚಿಯಾಗಿರುತ್ತದೆ. ಇದನ್ನು ರೈತ ಮಿತ್ರ ಎಂದು ಕರೆಯಲಾಗುತ್ತದೆ. ಇದು ಮೃದು ಸ್ವಭಾವದ ಪ್ರಾಣಿ. ಲಾಲನೆ ಪಾಲನೆ ಮಾಡುವವರೊಂದಿಗೆ ಉತ್ತಮ ಒಡನಾಟ ಬೆಳೆಸಿಕೊಳ್ಳುತ್ತದೆ ಎಂದು ಹೇಳಿದರು. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞ ಡಾ.ರಕ್ಷಿತ್ ರಾಜ್, ಮಣ್ಣು ವಿಜ್ಞಾನಿ ರಾಜಣ್ಣ ಗೋಷ್ಠಿಯಲ್ಲಿದ್ದರು.



ಮೋಹಕ ನಡಿಗೆಯಿಂದ ಮನಸೂರೆಗೊಂಡ ರೂಪದರ್ಶಿಗಳು

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಫ್ಯಾಷನ್ ಶೋ



ಮೈಸೂರು, ಡಿ.24(ಎಂಟಿವೈ)– ಹೊಸ ವರ್ಷದ ಅಂಗವಾಗಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಫ್ಯಾಷನ್ ಶೋನಲ್ಲಿ 80ಕ್ಕೂ ಹೆಚ್ಚು ರೂಪದರ್ಶಿಗಳು ರ್‍ಯಾಂಪ್ ಮೇಲೆ ಮೋಹಕ ನಡಿಗೆಯಿಂದ ಮನಸೂರೆಗೊಂಡರು.

ಯಶ್ ಇಂಟರ್‌ನ್ಯಾಷನಲ್ ಸಂಸ್ಥೆ ಆಯೋಜಿಸಿದ್ದ 'ಸೌತ್ ಇಂಡಿಯಾ 2022' ಫ್ಯಾಷನ್ ಶೋನಲ್ಲಿ ಪಾಲ್ಗೊಂಡಿದ್ದ ರೂಪದರ್ಶಿಯರು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದರು. ಈ ಫ್ಯಾಷನ್ ಶೋದಲ್ಲಿ ನ್ಯಾಷನಲ್, ವೆಸ್ಟರ್ನ್, ಬ್ಯುಸಿನೆಸ್ ಸುತ್ತುಗಳಲ್ಲಿ ಮಾರ್ಜಾಲದ ನಡಿಗೆ ಪ್ರದರ್ಶಿಸಿದರು. ಲಿಟಲ್ ಪ್ರಿನ್ಸ್, ಲಿಟಲ್ ಪ್ರಿನ್ಸೆಸ್, ಮಿಸ್ ಟೀನ್, ಮಿಸ್ಟರ್ ಸೌತ್ ಇಂಡಿಯಾ, ಮಿಸ್ ಸೌತ್ ಇಂಡಿಯಾ, ಮಿಸೆಸ್ ಸೌತ್ ಇಂಡಿಯಾ, ಮಿಸ್ಟರ್ ಇಂಡಿಯಾ ಐಕಾನ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ನಡೆದ ಸ್ಪರ್ಧೆಯಲ್ಲಿ ರೂಪದರ್ಶಿಯರು ಗಮನ ಸೆಳೆದರು.

ಇದೇ ವೇಳೆ ರಾಷ್ಟ್ರೀಯ ಸುತ್ತಿನಲ್ಲಿ ಭಾರತದ ಸಂಸ್ಕೃತಿಯನ್ನು ಬಿಂಬಿಸುವ ವೇಷಭೂಷಣದ ಸುತ್ತಿನಲ್ಲೂ ರೂಪದರ್ಶಿಗಳು ಆಕರ್ಷಕ ಪ್ರದರ್ಶನ ನೀಡಿದರು. ದೇವರು, ನವಿಲು, ಕಮಲ ಸೇರಿದಂತೆ ವಿವಿಧ ಬಗೆಯ ಉಡುಗೆ ತೊಟ್ಟು ದೇಶದ ಸಂಸ್ಕೃತಿ ಬಿಂಬಿಸಿದರು. ಪಾಶ್ಚಿಮಾತ್ಯ(ವೆಸ್ಟರ್ನ್) ಸುತ್ತಿನಲ್ಲಿ ಕಪ್ಪು ಬಣ್ಣದ ವಿವಿಧ ವಿನ್ಯಾಸದ ಉಡುಗೆ ತೊಟ್ಟು ವಿಭಿನ್ನವಾದ ನಡಿಗೆ ಪ್ರದರ್ಶಿಸಿದರು. ಪ್ರಶ್ನೋತ್ತರ ಸುತ್ತಿನಲ್ಲೂ ರೂಪದರ್ಶಿಯರು ಭಾಗವಹಿಸಿದರು. ಮೈಸೂರು, ಬೆಂಗಳೂರು, ಮಂಡ್ಯ, ಶಿವಮೊಗ್ಗ, ಮಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ರೂಪದರ್ಶಿಗಳು ಸ್ಪರ್ಧಾತ್ಮಕ ಪ್ರದರ್ಶನ ನೀಡಿ ಪೈಪೋಟಿ ನೀಡಿದರು. ಎಲ್ಲಾ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನದಲ್ಲಿ ಹೆಚ್ಚು ಅಂಕ ಪಡೆದ ರೂಪದರ್ಶಿಗಳಿಗೆ ವಿವಿಧ ಪ್ರಶಸ್ತಿ ನೀಡಲಾಯಿತು.

ಈ ಸಂದರ್ಭದಲ್ಲಿ ಯಶ್ ಇಂಟರ್‌ನ್ಯಾಷನಲ್ ಸಂಸ್ಥೆ ಸಿಇಒ ಯಶ್, ಸಿಇಒ ರಾಕಿ, ಷೋ ನಿರ್ದೇಶಕಿ ರಶ್ಮಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ತೀರ್ಪುಗಾರರಾದ ರಮೀಜ್, ಹೇಮಲತಾ, ಶೈಲಜಾ, ಶ್ರಾವ್ಯ, ನೇತ್ರಾವತಿ ಕರ್ತವ್ಯ ನಿರ್ವಹಿಸಿದರು.

13ನೇ ವರ್ಷದ ಸವಿನೆನಪು



ಹೆಚ್.ಬಿ.ಕಾರ್ತಿಕ್
(ಅಜಯ್)
19.4.1991–25.12.2009

ಪಾಪು ನೀನು ನಮ್ಮನ್ನಗಲಿ ಇಂದಿಗೆ 13 ವರ್ಷಗಳೇ ಕಳೆದರೂ ನಿನ್ನ ಸವಿನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ ನಿನಗಾಗಿ ಕಾದಿರುವೆವು ಮತ್ತೊಮ್ಮೆ ಹುಟ್ಟಿಬಾ, ಪಾಪು ಭಗವಂತನು ನಿನ್ನ ಆತ್ಮಕ್ಕೆ ಶಾಂತಿ ನೀಡಲೆಂದು ಸದಾ ಪ್ರಾರ್ಥಿಸುವ
ದುಃಖತಪ್ತರು
ತಂದೆ: ಬಿ.ಬಸವಯ್ಯ ಹೊಸೂರು, ತಾಯಿ: ವಿಶಾಲಾಕ್ಷಿ, ಅಕ್ಕ ಅಣ್ಣ ಹಾಗೂ ಕುಟುಂಬವರ್ಗದವರು

14ನೇ ವರ್ಷದ ಸವಿನೆನಪು



ಶ್ರೀ ಆರ್.ರಾಮಚಂದ್ರ
(ಆಕಾಶ್) ಗಂಗಾ ಸೋಡಾ ಫ್ಯಾಕ್ಟರಿ ಮಾಲೀಕರು

ನೀವು ನಮ್ಮನ್ನಗಲಿ ಇಂದಿಗೆ 14 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು :
ಪತ್ನಿ ಮಹದೇವಮ್ಮ, ಮತ್ತು ಮಕ್ಕಳು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಿಧನ



ಶ್ರೀಮತಿ
ಶಾರದಮ್ಮ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿವೃತ್ತ ಅಧೀಕ್ಷಕರಾದ ಶ್ರೀ ಬೆಟ್ಟೇಗೌಡ ರವರ ಧರ್ಮಪತ್ನಿ ಶ್ರೀಮತಿ ಶಾರದಮ್ಮ ರವರು ದಿನಾಂಕ 24.12.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ಅಂತ್ಯ ಕ್ರಿಯೆಯು ದಿನಾಂಕ 25.12.2022 ರಂದು ಮಧ್ಯಾಹ್ನ ಒಂದು ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಡೆಯಲಿದೆ.
ದುಃಖತಪ್ತರು: ಕುಟುಂಬಸ್ಥರು
9164714675

ಹಸಿರು ನಮ್ಮ ಉಸಿರು